2009 ಬೆಲೆ : ರೂ. 20/-

ಹಾಲ್ಕುರಿಕೆ


ಥಿಯೇಟರ್ ಮಿರರ್

ರಂಗಭೂಮಿ, ಸಾಹಿತ್ಯ, ಕಲೆ ಮಾಸಪತ್ರಿಕೆ

ಸಮರ : ಯುದ್ಧವೂ ಹೌದು ಕಲೆಯೂ ಹೌದು

ಕಾಸ್ಟ್ಯೂಮ್ ವಿನ್ಯಾಸ ಪಾತ್ರಗಳ ಆಂತರಿಕ ಚಹರೆಯನ್ನು ಅರಿಯುವಂತಾದರೆ...

'ನಗು' ದುಃಖವನ್ನು ಅದುಮುವ ಮುಚ್ಚಳ



ಜಾನಪದದ ನಿಜದ ಸೆಲೆ ಪಾಶ್ಚಿಮಾತ್ಯದ ಸಿದ್ಧಾಂತಗಳಲ್ಲಿ

ನಾನು ನಿಮ್ಮಷ್ಟು ಒಳ್ಳೆಯವಳಲ್ಲ

ಕೃಶವಾಗುತ್ತಿರುವ **ಯೂತ್ಸ್**



ಒಳಗನ್ನಡಿ



ಸಂಪಾದಕೀಯ

ಲ್ಕುರಿಕೆ
ಯೇಟರ್
ಮಿರರ್

ಸಂಪುಟ : 1 ಸಂಚಿಕೆ : 8


ಸಂಪಾದಕರು
ಹಾಲ್ಕುರಿಕೆ ಶಿವಶಂಕರ್

ಸಹ ಸಂಪಾದಕರು
ರಾಮಕೃಷ್ಣ ಹುಲಿಕುಂಟೆ

ಪತ್ರಿಕಾ ಸಂಚಾಲಕರು
ಶೀಲಾ ಹಾಲ್ಕುರಿಕೆ

ಪತ್ರಿಕಾ ಬಳಗ
ವಿ. ನಾಗರಾಜ್
ಎ. ರಂಗನಾಥ್
ಎಂ.ಎಸ್.ಎನ್. ಬಾಬು
ಕೆ. ಕಾಂತರಾಜು
ಶಾಂತಾ ಆರ್. ಕಂಪಾರಹಳ್ಳಿ

ವಿನ್ಯಾಸ
ಆನೇಕಲ್ ನಾರಾಯಣ
nayan562106@gmail.com



ಮನುಷ್ಯರ ವರ್ತನೆಯ ಮನೋವ್ಯಾಪಾರದಲ್ಲಿ ಆಗುವ ವೈಪರೀತ್ಯಗಳೇ ಮನೋವಿಜ್ಞಾನದಲ್ಲಿ ಕಂಡುಬರುವ ಪರಿವರ್ತನೆಯೂ ಆಗಿರುವುದರಿಂದ, ಒಂದು ದೇಶದ ಮನಸ್ಥಿತಿಯು ಆ ದೇಶದ ಮನುಷ್ಯರ ವರ್ತನೆಯ ಕ್ರಮವಾಗಿಯೇ ಚಲಿಸುತ್ತಿರುತ್ತದೆ. ಹಾಗೆಯೇ ಆಲೋಚನೆಯ ತೀಕ್ಷ್ಣತೆಯ ಅನುಗುಣವಾಗಿ ಬುದ್ಧಿಮಟ್ಟ ಪಂಕ್ತಿಯು ನಿಂತಿರುತ್ತದೆ. ವೈಯಕ್ತಿಕ, ಸಾಮಾಜಿಕ, ಸಾರ್ವತ್ರಿಕ ಬದುಕಿನಲ್ಲಿ ಘಟಿಸುವ ಒತ್ತಡಗಳು ಮನುಷ್ಯನನ್ನು ಬದಲಾವಣೆ, ಪರಿವರ್ತನೆ, ಪುನರುತ್ಥಾನಕ್ಕೆ ಪ್ರೇರೇಪಿಸಿ ಹೊಸ ಅಲೆಯೊಂದಿಗೆ ಉಸಿರಾಡಲು ಉದ್ದೀಪನಗೊಳಿಸುತ್ತಾ ಹೋಗುತ್ತದೆ.

ಮನುಷ್ಯರ ಮನಸ್ಥಿತಿಯಲ್ಲಿ ಆಗುವ ಪಲ್ಲಟಗಳೇ ಮನೋಶಾಸ್ತ್ರದ ಗ್ರಹಿಕೆಯೇ ಆಗಿರುವುದರಿಂದ ಸಾಮಾನ್ಯ, ಅಸಾಮಾನ್ಯ ವ್ಯಕ್ತಿತ್ವದ ಕಲ್ಪನೆಗಳನ್ನು ಸೂಚ್ಯಂಕವಾಗಿ ರೂಪಿಸಿ ಗುಣಾಂಕದ ಮೂಲಕ ಒಬ್ಬ ವ್ಯಕ್ತಿಯ ಅಥವಾ ಒಂದು ದೇಶದ ಮನಸ್ಥಿತಿಯನ್ನು ಅಳೆಯಬಹುದಾಗಿದೆ.

ಇಂಡಿಯಾದ ಮನುಷ್ಯರ ಮನಸ್ಥಿತಿಯಲ್ಲಿ ಆಗುವ ಮನೋ ಅಲೆಗಳಿಗೂ ಹಾಗೂ ಬಾಹ್ಯವಾಗಿ ಪ್ರಕಟಿಸುವ ವರ್ತನೆಗಳಿಗೂ ಸಾಮ್ಯತೆ ಇಲ್ಲದಿರುವುದನ್ನು ಗುರುತಿಸಬಹುದು. ಇಲ್ಲಿನ ಬದುಕಿನ ಚಹರೆಗಳೇ ನಿಗೂಢವಾಗಿರುವುದರಿಂದ, ಭ್ರಮಾತ್ಮಕತೆಯನ್ನು ವಾಸ್ತವ ಎಂದು ನಂಬಿಕೊಂಡಿರುವುದರಿಂದ, ಬಾಹ್ಯದಲ್ಲಿ ಘಟಿಸುವ ಮನುಷ್ಯತ್ವದ ಹಾದಿಯಿಂದ ಹಿಂದೆ ಉಳಿದು, ತನ್ನೊಳಗೆ ಘಟಿಸುವ ಸತ್ಯವನ್ನು ಮರೆಮಾಚಿಕೊಳ್ಳುತ್ತಾರೆ. ಇಂಡಿಯಾದ ಮನೋಶಾಸ್ತ್ರೀಯವಾದ ಪ್ರಯೋಗಗಳು ಇಲ್ಲಿನ ಜನರ ಬದುಕಿನ ಮೇಲೆ ಪರಿಣಾಮವನ್ನು ಬೀರಿಲ್ಲವೆಂದೇ ಹೇಳಬೇಕಾಗುತ್ತದೆ. ಇಲ್ಲಿನ ಬದುಕು ಮತ್ತು ಆಲೋಚನೆಯನ್ನು ಕ್ರೋಢೀಕರಿಸುವ ಪ್ರಯೋಗಾತ್ಮಕ ಮನೋಶಾಸ್ತ್ರೀಯ ಅಧ್ಯಯನದ ಅವಶ್ಯಕತೆಯಂತೂ ಅನಿವಾರ್ಯವಾಗಿದೆ.

- ಹಾಲ್ಕುರಿಕೆ ಶಿವಶಂಕರ್

ಹೊಸ ಅಲೆಯೂ ಬೀಸುತ್ತಿದೆ, ಹೊಸ ಗಾಳಿಯೂ ಬೀಸುತ್ತಿದೆ... ಹೊಸತನಕ್ಕಾಗಿ ಕಾಯುತ್ತಿದೆ.

ಸಮರ

ಯುದ್ಧವೂ ಹೌದು ಕಲೆಯೂ ಹೌದು



ಮಾನವ ತನ್ನ ಅಸ್ತಿತ್ವಕ್ಕಾಗಿ ಕಂಡುಕೊಂಡ ಸಣ್ಣ ಪುಟ್ಟ ಸಾಧನಗಳು ಆಯುಧಗಳು ಅಳಿಸಿಹೋಗಿ ಇಂದು ಮಾನವನೇ ಆಯುಧವಾಗುವವರೆಗೆ ಬಂದು ತಲುಪಿದ್ದಾನೆ.

ಬದುಕಿನ ಪ್ರಶ್ನೆ, ಜೀವನದ ಪ್ರಶ್ನೆ ಬಂದಾಗಲೇ, ಬದುಕ ಬೇಕೆಂಬ ವಾಂಛೆ, ಅಥವಾ ಅನಿವಾರ್ಯತೆ ಅಥವಾ ಸೃಷ್ಟಿ ಧರ್ಮವನ್ನು ಪಾಲಿಸಲೇ ಬೇಕಾಗಿ ಬಂದಾಗಲೇ ಈ ಹೋರಾಟ ಪ್ರಾರಂಭವಾಗಿದ್ದು. ಅಸ್ತಿತ್ವದ ಪ್ರಶ್ನೆ ಬಂದಾಗಲೇ ಈ ಕಿತ್ತಾಟ ಪ್ರಾರಂಭವಾದದ್ದು. ಈ ಕಿತ್ತುಕೊಳ್ಳುವ ಆಟವೇ, ಕಿತ್ತುಕೊಳ್ಳುವ ಪ್ರವೃತ್ತಿಯೇ ಬದುಕಿನ ಪ್ರಾರಂಭವೇ ಅಥವಾ ಬದುಕಿನ ನಾಶವೇ ಎನ್ನುವ ಜಿಜ್ಞಾಸೆಗೆ ನಾನು ಹೋಗುವುದಿಲ್ಲ. ಈ ಕಿತ್ತಾಟದ ಪಯಣದ ಕುರಿತಷ್ಟೇ ನಾನಿಂದು ಬರೆಯುತ್ತೇನೆ.

ಹಸಿವನ್ನು ಇಂಗಿಸಿ ಕೊಳ್ಳುವುದಕ್ಕೆ, ನಿಂತ ನೆಲವನ್ನು ಉಳಿಸಿಕೊಳ್ಳುವುದಕ್ಕೆ, ತನ್ನ ಸ್ವತ್ತನ್ನು ರಕ್ಷಿಸಿಕೊಳ್ಳುವುದಕ್ಕಷ್ಟೇ ಸೀಮಿತವಾಗಿದ್ದ ಹೋರಾಟ ಯುದ್ಧವಾಗಿ, ಸಮರವಾಗಿ ಮರ್ಪಾಟಾದ ಗಳಿಗೆ ಎಂದಾಗ ನಾನು ಆದಿಗೆ ಹೊಗಲೇಬೇಕಾಯಿತು.

ಭೂಮಿಯ ಮೇಲೆ ಮನುಷ್ಯನು ಮೊದಲು ಕಾಣಿಸಿಕೊಂಡದ್ದು ಸುಮಾರು ಐದು ಲಕ್ಷ ವರುಷಗಳ ಹಿಂದೆ ಎಂದು ತೊರುತ್ತದೆ. ಆದಿ ಶಿಲಾಯುಗ, ಮಧ್ಯ ಶಿಲಾಯುಗ ಅಂತ್ಯ ಶಿಲಾಯುಗ ಕಾಲದ ಈ ನಡಿಗೆಯಲ್ಲಿ ಹತಾರಗಳೇ ಆಯುಧಗಳಾಗಿ ಈ ಆಯುಧಗಳಲ್ಲಿ ಮರದ ರೆಂಬೆಕೊಂಬೆಗಳು ಕಲ್ಲುಗಳು, ಮೊನಚುಕಲ್ಲುಗಳು, ಪ್ರಾಣಿ ಪಕ್ಷಿಗಳ ಮೂಳೆ, ದಂತಗಳು ಹೀಗೆ ಮರ, ಕಲ್ಲು, ಎಲುಬು, ದಂತ ಇವುಗಳೇ ಹತಾರಗಳಾದವು, ಆಯುಧಗಳೂ ಆದವು. ಇಲ್ಲಿಯವರೆಗೆ ಆದದ್ದು



ನಿಧಾನ ಬೆಳವಣಿಗೆ. ಬಿಲ್ಲು,
ಬಾಣ, ಕವಣೆ, ಕತ್ತಿ, ಕೊಡಲಿ,
ಈಟಿ, ಭರ್ಜಿ, ಖಡ್ಗ,
ಗಧೆ, ಅನಂತರ ತೋಪು,
ತುಪಾಕಿ ಇಷ್ಟೇ. 17ನೇ
ಶತಮಾನದವರೆಗೆ ಕೈಗಾರಿಕಾ
ಕ್ರಾಂತಿ, ಪುನರುತ್ಥಾನ,
ವಿಜ್ಞಾನದ ಅವಿಷ್ಕಾರಗಳಿಂದ
ಬಾಂಬಿನಿಂದ
ಅಟಂಬಾಬಿನವರೆಗೆ,
ಗ್ರೆನೇಟ್ ನಿಂದ ಮಾನವ
ಬಾಂಬಿನವರೆಗೆ, ಬಂತು
ನಮ್ಮ ಅಸ್ತಿತ್ವ, ಮಾನವ ತನ್ನ
ಅಸ್ತಿತ್ವಕ್ಕಾಗಿ ಕಂಡುಕೊಂಡ
ಸಣ್ಣ ಪುಟ್ಟ ಸಾಧನಗಳು
ಆಯುಧಗಳು ಅಳಿಸಿಹೋಗಿ
ಇಂದು ಮಾನವನೇ
ಆಯುಧವಾಗುವವರೆಗೆ
ಬಂದು ತಲುಪಿದ್ದಾನೆ.

ಜೀವಿಯ ಅಂಕುರ–
ಜೀವಿಯ ಅಂತ್ಯ. ಇದರ
ನಡುವಿನ ಬದುಕೇ ಸಮರ,
ಯುದ್ಧ ಭೂಮಿಯೇ ಒಂದು
ಸಮರ ಶಾಲೆ, ಅದಕ್ಕೆ
ಇರಬೇಕು, ಭೂಮಿಯನ್ನು
ರಣಭೂಮಿ ಎಂದದ್ದು.

ಹತಾರಗಳ, ಆಯುಧಗಳ
ನಿರ್ಮಾಣದ ಚರಿತ್ರೆಯ
ಜೊತೆ ಜೊತೆಗೆ ಕಿತ್ತಾಟ,
ಹೋರಾಟ, ಹೊಡೆದಾಟ,
ಕಾಳಗ, ಯುದ್ಧ, ಸಮರ,
ರಣರಂಗದ ಚರಿತ್ರೆಯೂ
ಇದೆ. ಎಂತೆಂಥ ಸಮರಗಳು
ನಡೆದುಹೋಗಿವೆ. ಚರಿತ್ರೆ
ಎಂದರೆ ಸಮರ ಚರಿತ್ರೆಯೇ.
ಮಧ್ಯ ಮಧ್ಯ ಅಲ್ಲೊಂದಿಷ್ಟು
ಇಲ್ಲೊಂದಿಷ್ಟು ಪ್ರೀತಿ–
ಮೋಜು– ಹೆಣ್ಣು– ಹೆಂಡ,
ಕಾವ್ಯ, ನೃತ್ಯ, ನಾಟಕ, ಕಲೆ,
ಸಾಧನೆ ಇವೆಲ್ಲ ಯುದ್ಧ
ವೀರರನ್ನು ಖುಷಿಗೊಳಿಸಲಿಕ್ಕೇ
ನಡೆದಿದ್ದಾವೆ ಎಂದು ತಿಳಿದರೆ
ಗಾಬರಿಯಾಗುತ್ತೀರ.

ಸಮರ ಚರಿತ್ರೆಯ
ಜೊತೆಜೊತೆಗೆ ಸಮರ
ಕಲೆಯ ಚರಿತ್ರೆಯೂ ಇದೆ.
ಟ್ರಾಯ್ ಯುದ್ಧಕ್ಕಿಂತಲೂ
ಮೊದಲು ಪ್ರಾರಂಭವಾದ
ಸಮರಗಳಿಂದಲೂ ಹಿಡಿದು
ಇಲ್ಲಿಯವರೆಗೆ ಅಂದರೆ
ಕಾರ್ಗಿಲ್ ಯುದ್ಧದವರೆಗೆ
ಸಮರಗಳು ನಡೆದಿವೆ.

ಮೃಗೀಯವಾಗಿದ್ದ
ಸಮರವನ್ನು
ಕಲೆಯಾಗಿಸಿದವರು
ಪ್ರಾಜ್ಞರು, ಕವಿಗಳು,
ಕಲಿಗಳು, ಕಲಾವಿದರು.
ಆ ಕಲೆಯೊಳಗೂ
ಸಾವು ನೋವುಗಳಿದ್ದವು
ಎಂಬುದನ್ನು ತಮ್ಮ ಗಮನಕ್ಕೆ
ತರುತ್ತಲೇ ಶತಶತಮಾನಗಳ
ಈ ಚರಿತ್ರೆಯನ್ನು ಕೆಲವು
ಮಾಹಿತಿಗಳನ್ನು ಹಾಗೂ
ಕೆಲವು ಬಿಡಿ ಬಿಡಿ ಚಿತ್ರಗಳನ್ನು
ನಿಮ್ಮ ಮುಂದೆ ಇಡುತ್ತೇನೆ.

ಸಮರಕ್ಕೆ ರಾಜನ
ಜೊತೆಗೆ ಚತುರಂಗ ಬಲ
ಸಿದ್ಧವಾಗಿರುತ್ತಿತ್ತು. ಚತುರಂಗ
ಬಲದೊಡನೆ ಆನೆ, ಕುದುರೆ,
ರಥ, ಕಾಲಾಳುಗಳು ಸಾವಿರ
ಸಾವಿರ ಸಂಖ್ಯೆಯಲ್ಲಿ
ಯುದ್ಧಕ್ಕೆ ತೆರಳುತ್ತಿದ್ದರು.
ಪರಶು, ಬಿಲ್ಲು, ಕೊಂತ,
ಅಸಿ, ತೋಮರ, ಮುದ್ಗರ,
ಭಂಡವಾಳ, ಚಕ್ರ, ಶೂಲ,
ಎಂಬ ಆಯುಧಗಳು
ಸಮುದ್ರಬಾಣ, ಬಾಡ
ಬಾಗನಿ, ಉರಗಾಸ್ತರ,
ಗರುಡಾಸ್ತ್ರ, ವಾಯುಬಾಣ,
ಪರ್ವತಾಸ್ತ್ರ, ವಜ್ರಾಸ್ತ್ರ,
ಸರ್ಪಾಸ್ತ್ರ, ತಮೋಂದರ,
ಸೂರ್ಯಾಸ್ತ್ರ, ಸನ್ಮೋಹನಾಸ್ತ್ರ
ಅಂದರೆ ನಿದ್ರಾಬಾಣಗಳು
ಇದರ ಜೊತೆಗೆ ಕವಲಂಬು,
ಅಡ್ಡಂಬು, ಕೊರಂಬು,
ಪಾವಂಬಳೆ, ಕಕ್ಕಡೆ, ಮಿಟ್ಟಯ
ಎಂಬ ವಿವಿಧ ತೆರನಾದ
ಅಂಬುಗಳು ಯುದ್ಧಗಳಲ್ಲಿ
ಬಳಕೆಯಾಗುತ್ತಿದ್ದವು.

ಸೈನಿಕರನ್ನು
ಹುರಿದುಂಬಿಸಲಿಕ್ಕೆ
ರಣವಾದ್ಯಗಳ ಝೇಂಕಾರ
ಇರುತ್ತಿತ್ತು. ಪಂಚ
ಮಹಾವಾದ್ಯಗಳಾದ

ಧರ್ಮಯುದ್ಧದ ನಿಯಮಗಳ ಉಲ್ಲೇಖ ಕಾವ್ಯಗಳಲ್ಲಿ ಸಿಗುತ್ತವೆ. ಅಂಗವನ್ನು ಅಪ್ಪಿಕೊಂಡವರನ್ನು ನೀರನ್ನು ಹೊಕ್ಕವರನ್ನು ಹೆಣ್ಣುಡೆ ಉಟ್ಟವರನ್ನು, ಹುತ್ತವನ್ನು ಹತ್ತಿದವರನ್ನು ಕೊಲ್ಲಬಾರದು ಎಂಬ ನಿಯಮವಿದೆ.

ಶೃಂಗ, ತಮ್ಮಟ, ಶಂಖ, ಬೇರಿ, ಜಯ ಘಂಟಾ ಎಂಬ ವಾದ್ಯಗಳು ಅಲ್ಲದೆ, ಕಹಳೆ, ಕರಡೆ, ತ್ರಿವಳಿ ಇತಿ ಮುಂತಾದುವುಗಳನ್ನು ನಯಸೇನಾ ಧರ್ಮಾಮೃತದಲ್ಲಿ ಹೆಸರಿಸುತ್ತಾನೆ.

ಪಂಪ ತನ್ನ ಪಂಪ ಭಾರತದಲ್ಲಿ ಚೆಂಬಿನ್ನ ರಥ, ಕಂಬಿನ್ನ ರಥ, ಪಸುರ್ಪೊನ್ನ ರಥಗಳನ್ನು ಹೆಸರಿಸುತ್ತಾನೆ. ರಾಜ, ಸೇನಾಧಿಪತಿ, ಪರಿವಾರದವರು, ಸೈನಿಕರು ಅಸ್ತ್ರಗಳ ಸಾಗಾಣೆಗೆ ಬೇರೆ ಬೇರೆ ರೀತಿಯ ರಥಗಳು ಅಂದರೆ ಅವರವರ ಸ್ಟೇಟಸ್‌ಗೆ ತಕ್ಕನಾದ ರಥಗಳ ಬಳಕೆ ಸಮರ ಸಂದರ್ಭದಲ್ಲಿತ್ತು ಎಂದು ಹೇಳುತ್ತಾನೆ.


ಅಸ್ತ್ರಗಳು- ಶಸ್ತ್ರಗಳು, ರಕ್ಷಣಾ ಕವಚಗಳು, ರಕ್ಷಣಾ ಉಡುಪುಗಳು, ವಿವಿಧ ತೆರನಾದ ಕೈ ಹಿಡಿಕೆಗಳು, ಗುರಾಣಿಗಳು ಒಂದೆರಡಲ್ಲ ಸಾವಿರಾರು ನಮೂನೆಯ ಪರಿಕರಗಳು ಯುದ್ಧಕ್ಕೆ ಸಿದ್ಧವಿರುತ್ತಿದ್ದವು ಯುದ್ಧದ ಸಂದರ್ಭಗಳಲ್ಲಿ ರಣರಂಗಕ್ಕೆ ಅಂತಃಪುರದ ಸ್ತ್ರೀಯರು, ವೇಶ್ಯೆಯರು, ಪರಿವಾರದವರು, ಮನರಂಜನೆಯವರು ಅಲ್ಲದೆ ಬೇಹುಗಾರರು, ಸಹಾಯಕರುಗಳ ಒಂದು ಪ್ರತ್ಯೇಕ ದಂಡೇ ಅಲ್ಲಿ ನೆರೆದಿರುತ್ತಿತ್ತು. ಸಮರಕ್ಕಾಗಿ ಮೋಜು, ಮೋಜಿಗಾಗಿ ಸಮರವೋ ಎಂಬಂತೆ ಸಮರದ ಸಮಾರಾಧನೆ ನಡೆಯುತ್ತಿತ್ತು. ರಣತಂತ್ರಗಳು ರೂಪಿತವಾಗುತ್ತಿದ್ದವು, ವ್ಯೂಹಗಳ ರಚನೆಯಾಗುತ್ತಿತ್ತು. ಕೋಟೆ ನಿರ್ಮಾಣ ವಾಗುತ್ತಿದ್ದವು. ದಾಳಿ ಮತ್ತು ಪ್ರತಿದಾಳಿ, ಭೇಧನೆ ಮತ್ತು ಪ್ರಚೋದನೆ ನಡುವೆಯೇ ವೇದನೆಯೂ ತುಂಬಿರುತ್ತಿತ್ತು. ಪಂಚ ತಂತ್ರದಲ್ಲಿ ಗಿರಿದುರ್ಗ, ಜಲದುರ್ಗ, ವನದುರ್ಗ, ಸ್ಥಳದುರ್ಗಗಳು ಎಂದು ಕೋಟೆಗಳ ಕುರಿತು ಮಾಹಿತಿ ಇದೆ. ಹರಿಹರನು ತನ್ನ 'ಗಿರಿಜಾಕಲ್ಯಾಣ' ದಲ್ಲಿ ಕೋಟೆಯ ರಚನೆಯ ಬಗ್ಗೆ ಹೀಗೆ ಬೆಳಕು ಚೆಲ್ಲುತ್ತಾನೆ.

"ಪಳಕಿನ ಕೋಂಟೆಬಿಟ್ಟದೆನೆ ಬೇವಿನ ದಂಡೆ ನಭಕ್ಕೆ ಮೀರುವಟ್ಟಲೆ ನಿರ್ಮಿದೆಲೆ ಪಾರುವ ಪತಾಕೆ ವಿರಾಜಪ ಗೋಂಟಿನೊಲ ಬಳಸಿದ ಕೊತ್ತಳಂ ಸೊಗಾಯಿ ಪಾಳವೇರಿ ಡೆಂಕಣಿ ಸಾರಿ ಮಾರಿಯಗ್ಗಳಿಸುವ ಗೊಪುರಂ ಪುಲಿಮೊಗಂಮೆಗುಮ ಪುರದೊಳೆ ನಿರಂತರಂ ವೃತ್ತಾಕಾರವಾಗಿ ಅಮೃತ ಶಿಲೆಯಿಂದ ಕೋಟೆ. ಕೋಟೆಯ ಮೇಲೆ ಬೇಹುಗಾರರ ದಂಡು, ಅಕಾಶಕ್ಕೆ ಚುಂಬಿಸಿದಂತೆ ಇರುವ ಅಟ್ಟಣೆಗಳು, ನಿಮಿರಿ ಹಾರುವ ಪತಾಕೆಗಳು, ಕೋಟೆಯ ಗೋಡೆಗಳು ಸೇರುವ ಮೂಲೆಗಳಲ್ಲಿ ಕೊತ್ತಳಗಳು, ಗೋಡೆಗಳನ್ನು ಹತ್ತಲು ಉಪಯೋಗಿಸುವ ಸರ್ಪಮರಗಳು ಇವುಗಳಿಂದ ಸೋಗಾಯಿಸುವ ಕೋಟೆಯ ಗೋಡೆ. ಹುಲಿಯ ಮೊಗವ ನೊತ್ತು ಮೆರೆಯುವ ಹೆಬ್ಬಾಗಿಲಿನ ಗೋಪುರದಿಂದ ಕೋಟೆ ಪುರದೊಳಗೆ ನಿರಂತರವಾಗಿ ಇರುತ್ತಿತ್ತು."

ಹೀಗೆ ಹರಿಹರ ಕೋಟೆಯ ನಿರ್ಮಾಣವನ್ನು ಕುರಿತು ವರ್ಣಿಸುತ್ತಾನೆ.

ಕೋಟೆಗೆ ಲಗ್ಗೆ ಹಾಕುವ ಮೊದಲು ನೀರ ಕೂಮಡಿ, ಕುದುರೆ ಗಂಡಿಗಳನ್ನು ಪರೀಕ್ಷಿಸಿ ತಿಳಿದುಕೊಳ್ಳುತ್ತಿದ್ದರು. ಕೋಟೆ ಗೋಡೆಯ ಮೇಲಿನ ಅಟ್ಟಣೆ, ಕೊತ್ತಳ ಮುಂತಾದವುಗಳನ್ನು ಪೂಜಿಸಿ ಧ್ವಜಸ್ತಂಭ ಹಾರಿಸುತ್ತಿದ್ದರು. ಶತ್ರುಗಳ ಮೇಲೆ ಸುರಿಯಲು ಹಾವುಗಳು, ಕಾಸಿದ ಮರಳು, ಹಿಟ್ಟಿನ ಕಾದ ಸರಿ, ಎಣ್ಣೆ ಮುಂತಾದವುಗಳನ್ನು ಸಿದ್ಧಪಡಿಸಿಕೊಳ್ಳುತ್ತಿದ್ದರು.

ಹೊರಗಿನಿಂದ ಲಗ್ಗೆ ಹಾಕುವ ಶತ್ರುಗಳು ಏಣಿ, ಸಾಚುಂದೋಲೆ ಏರ ಸೇತು, ನಡೆಸಾರ, ಬದ್ದರ, ಗೆಗ್ಗೆ ಡೆಂಕಣಿಗುಮ್ಮ,



ಮಲ್ಲಿಕಾರ್ಜುನ ಮಹಾಮನೆ

ಪಡಿಗೋಂಟೆ ಮುಂತಾದ ಸಾಮಾಗ್ರಿಗಳ ಸಮೇತ ಕೋಟೆಯನ್ನು ಮುತ್ತುತ್ತಿದ್ದರು. ಶಸ್ತ್ರಾ ಶಸ್ತ್ರಿ, ಖಡ್ಗಾ ಖಡ್ಗಿ, ದಂಡಾ ದಂಡಿ, ಕಚಾ ಕಚಿ,(ಕೇಶಾ ಕೇಶಿ) ಜಟ್ಟಾ ಜುಟ್ಟಿ ಸಮರಗಳು ನಡೆಯುತ್ತಿದ್ದವು. ಸಮರಗಳಲ್ಲಿ ಸೋತವರು ಬಟ್ಟೆಗಳನ್ನು ಬೀಸುವುದರ ಮೂಲಕ ತಮ್ಮ ಸೋಲನ್ನು ಸೂಚಿಸುತ್ತಿದ್ದರು ಎಂದು ಜನ್ನ ತನ್ನ ಯಶೋಧರ ಚರಿತೆಯಲ್ಲಿ ಉಲ್ಲೇಖಿಸುತ್ತಾನೆ.

ಧರ್ಮಯುದ್ಧದ ನಿಯಮಗಳ ಉಲ್ಲೇಖ ಕಾವ್ಯಗಳಲ್ಲಿ ಸಿಗುತ್ತವೆ. ಲಿಂಗವನ್ನು ಅಪ್ಪಿಕೊಂಡವರನ್ನು ನೀರನ್ನು ಹೊಕ್ಕವರನ್ನು ಹೆಣ್ಣುಡೆ ಉಟ್ಟವರನ್ನು, ಹುತ್ತವನ್ನು ಹತ್ತಿದವರನ್ನು ಕೊಲ್ಲಬಾರದು ಎಂಬ ನಿಯಮವಿದೆ. ಅದಕ್ಕೆ ಸುಯೋಧನನ ಊರುಭಂಗ ಪ್ರಕರಣ ಉದಾಹರಣೆಯಾಗಿದೆ. ಮಾತು ತಪ್ಪುವುದು, ಸುಳ್ಳು ಹೇಳುವುದು ಇದೆಲ್ಲಾ ಅಧರ್ಮ ಯುದ್ಧಕ್ಕೆ ಉದಾಹರಣೆಗಳು. ಯಾಮಾರಿಸಿ ಹೊಡಿ, ಬೆನ್ನಿಗೆ ಚೂರಿ, ಗುರುವಿಗೆ ತಿರುಮಂತ್ರ ಇಂತಹ ಪದಪುಂಜಗಳು ರೂಡಿಗೆ ಬಂದಿರುವುದು ಇಂತಹ ಅಧರ್ಮ ಯುದ್ಧಗಳ ಸಂದರ್ಭಗಳಲ್ಲೇ ಇರಬಹುದೇ? ಅಧರ್ಮ ಯುದ್ಧಗಳ ಸಾವಿಗೆ ಹಸುಗಳನ್ನು ಕೊಲ್ಲುವುದು ಪಸಲಿಗೆ ಬೆಂಕಿ ಹಚ್ಚುವುದು, ಸ್ತ್ರೀಯರನ್ನು ಅಪಹರಿಸುವುದು, ಊರುಗಳನ್ನು ಸುಡುವುದು ಸೇರುತ್ತದೆ.

ಯುದ್ಧ ಮುಗಿದ ನಂತರ ರಕ್ತ ರಂಜಿತ ಖಡ್ಗವನ್ನು ತೊಳೆಯುವ ಸಮಾರಂಭ ನಡೆಯುತ್ತಿತ್ತು. ಇದಕ್ಕೆ "ಬಾಳ್ಗಚ್ಚು" ಎಂದು ಹೇಳುತ್ತಿದ್ದರು ಎಂಬುದು ಹಲ್ಮಿಡಿ ಶಸನದಿಂದ ತಿಳಿಯುತ್ತದೆ. ವೀರ ಯೋಧನ, ರಕ್ತವನ್ನು ಆತನ ತಾಯಂದಿರು, ಮಡದಿಯರು, ಸೋದರಿಯರು ತಮ್ಮ ಹಣೆಗೆ ತಿಲಕದಂತೆ ಹಚ್ಚಿಕೊಳ್ಳುತ್ತಿದ್ದರೆಂಬ ಉಲ್ಲೇಖ ತಿಳಿದು ಬರುತ್ತದೆ.

ಹೀಗೆ ಸಮರ, ಕಾಳಗ, ಯುದ್ಧಗಳು, ಶಸ್ತ್ರಾಗಾರಗಳು, ಯುದ್ಧ ಸಿದ್ಧತೆಗಳ ಕುರಿತು ಶಾಸನಗಳು ಕಾವ್ಯಗಳು, ಶಿಲ್ಪಗಳು ವಾಸ್ತುಗಳು, ಪಳೆಯುಳಿಕೆಗಳು ಅನೇಕ ಮಾಹಿತಿಯನ್ನು ನೀಡುತ್ತವೆ.

ಸಮರ ಎನ್ನುವುದು ಒಂದು ರೋಚಕ. ಇದನ್ನು 'ಕುಮಾರವ್ಯಾಸಭಾರತದ ಗದಾ ಪರ್ವದಲ್ಲಿ ಕುಮಾರವ್ಯಾಸ ಹೀಗೆ ಚಿತ್ರಿಸಿದ್ದಾನೆ.

"ಅರಸ ಕೇಳ್ವ ಮೂರು ಸಾವಿರ
ಕರಿಘಟೆಗಳೆಪ್ಪತ್ತು ಸಾವಿರ ತುರಗದಳ
ರಥವೆರಡು ಸಾವಿರ ಲಕ್ಷಕಾಲಾಳು
ಅರಸುಗಳು ಮೂನೂರು ನಿಂದುದು
ಕುರುಬಲದ ವಿಸ್ತಾರ ಕೌರವ ಧರಣೆ
ಪತಿಯೇ ಕಾದ ಶಾಕ್ಷೋಹಿಣಿಯ
ಶೇಷನಿದೋ ಅರಸ ಕೇಳೈ ಬಳಿಕ
ಪಾರ್ಥನ ಕೆರಳಿಚಿರೋ ಕಾಲರುದ್ರನ ಸರಸ
ವಾಡಿದಿರೋ।
ಪ್ರಚಂಡ ಪ್ರಳಯ ಭೈರವನ
ಪರಿಭವಿಸಿದಿರೊ। ಲಯಕರತಾಂತನ
ಕರೆದರೋ ಮೂದಲಿಸಿ
ನಾವಿನ್ನರಿಯೆವರ್ಜುನೆಸುಗೆಯ
ಭಿವರ್ಣನೆಯ ನಿರ್ಣಯವಾ"

ಇನ್ನೊಂದು ಪದ್ಯ,

"ಚೆಲ್ಲಿದವು ರಥಗಾಲಿ ಮುರಿದವು
ಗೆಲ್ಲಿಗೆಡದವು ಕುಡೆ ಕಂಬುಗೆ
ಯಲ್ಲಿ ಕಾಣಿಸು ಕೊಚ್ಚಿದಚ್ಚಿನ ಕಡಿದ
ಕೀಲುಗಳ
ಎಲ್ಲಿಯವು ರಥವಾಜಿ ವಾಜಿಗೆ
ತೆಲ್ಲಿ ಟಿಯಲೇ ರಧಿಕ ಸೂತರು
ಬಲ್ಲಿದರು ಕರುಳಿಂಗೆ ಹಾಯ್ದರು ಸುರರ
ಸೂಳೆಯರ"

ಹೀಗೆ ಯುದ್ಧದ ಸಮರದ ಬಗ್ಗೆ ನಮ್ಮ ಶಿಷ್ಟ ಸಾಹಿತ್ಯದಲ್ಲಿ, ಜನಪದ ಸಾಹಿತ್ಯಗಳಲ್ಲಿ, ಶಿಲ್ಪಗಳಲ್ಲಿ, ವಾಸ್ತುಶಿಲ್ಪಿಗಳಲ್ಲಿ, ವೀರಗಲ್ಲುಗಳಲ್ಲಿ ಅನೇಕ ಉಲ್ಲೇಖಗಳನ್ನು ಕಾಣಬಹುದು ●



ಆರ್ದ್ರ ಅಭಿನಯದ

ಲೋಯರ್ ಡೆಪ್ತ್

ಅದು ಕೃಷ್ಣಪ್ಪನ ಛತ್ರ, ಅಲ್ಲಿರುವ ಮೋಚಿ ಬಿಬ್ಬಣ್ಣಾ, ಕಳ್ಳ ವಾಸ್ಯಾ, ಕಾಯಕದ ಹನುಮಂತ, ಜೂಜಿನ ಜಬ್ಬಣ್ಣಾ, ನಿಯತ್ತಿನ ಸಾಬರ ಹಸನ್ಯಾ, ನಾಟಕದ ನಟ, ಭ್ರಮೆಯ ಬೆಂಬತ್ತಿದ ಸುಂದ್ರಿ, ಎಲ್ಲರೂ ಒಂದರ್ಥದಲ್ಲಿ ಸದ್ಯದ ಬಾಳಿನಲ್ಲಿ ಹಿನ್ನಡೆಯನ್ನು ಕಂಡವರು. ಫಕೀರನಂತಿರುವ ಲಕ್ಕಜ್ಜನೂ ಬಂದು ಎಲ್ಲರ ಬಾಳಿಗೆ ಹೊಸ ದಿಕ್ಕನ್ನು ತೋರ ಬಯಸುತ್ತಾನೆ. ಮುದಿಗಂಡ ಕೃಷ್ಣಪ್ಪನ ಕಣ್ತಪ್ಪಿಸಿ ವಾಸ್ಯಾನೊಂದಿಗೆ ಮೈಹಂಚಿಕೊಂಡ ವಾಸಕ್ಕ ಕಲಾನಂತರದಲ್ಲಿ ಅವನಿಂದಲೇ ದೂರಾಗುತ್ತಾಳೆ. ನಾಟಕದ ತುಂಬೆಲ್ಲಾ ಎಲ್ಲ ಪಾತ್ರಗಳು ತಾವಾಗಿ ತೆರೆದುಕೊಳ್ಳುತ್ತವೆ.

ರಷಿಯನ್ ಮೂಲದ 'ಲೋಯರ್ ಡೆಪ್ತ್' ಮ್ಯಾಕ್ಸಿಂಗಾರ್ಕಿ ನಾಟಕ ಬಿ.ಟಿ. ದೇಸಾಯಿ ಅವರಿಂದ ಕನ್ನಡಕ್ಕೆ ರೂಪಾಂತರ ಗೊಂಡಿದೆ. ಕಳೆದ ಫೆ. 28ರಿಂದ ಮಾರ್ಚ್ 29ರವರೆಗೆ ಧ್ರುವರಂಗ ನಡೆಸಿದ ನಡೆಸಿದ ರಂಗತರಬೇತಿ ಶಿಬಿರದಲ್ಲಿ ಸಿದ್ಧಗೊಂಡ ನಾಟಕ. ಯುವ ನಟ ನಿರ್ದೇಶಕ ಗೋಪಾಲ ಕೃಷ್ಣ ಧ್ರುವರಾಜ ದೇಶಪಾಂಡೆ ನಿರ್ದೇಶಿಸಿದ್ದರು. ಕೊಳ್ಳೇಗಾಲದ ಯತೀಶ್ ಹಾಗೂ ಹಾಸನದ ಧನಂಜಯ ಸಹಾಯಕರಾಗಿದ್ದರು. ಮಯೂರ ಪಾಠಕ, ಚಿದಾನಂದ ಕುಲಕರ್ಣಿ ಹಾಗೂ ಮಹಿಪತಿ ಕುಲಕರ್ಣಿ ಸಂಗೀತ ನೀಡಿದ್ದರು.

ಮನುಷ್ಯನಲ್ಲಿಯ ದ್ವೇಷ, ಅಸೂಯೆ,

ಮನುಷ್ಯ ವರ್ತನೆಗಳು ಪರಿಸ್ಥಿತಿ ಹಾಗೂ ಸಾಮಾಜಿಕ ಸ್ಥಿತ್ಯಂತರದಲ್ಲಿ ಅನಿವಾರ್ಯವಾಗಿ ಬದಲಾಗಿಸುತ್ತದೆ. ಮನುಷ್ಯ ಬದುಕಿನ ದಿಕ್ಕನ್ನು ಬದಲಿಸುವ ಶೋಷಣೆ ಪಲ್ಲಟಗೊಂಡು ಸಾಮಾಜಿಕ ಬದಲಾವಣೆಗೂ ಕಾರಣವಾಗುತ್ತದೆ.



ಲಂಪಟತನ ಮುಂತಾದ ಸಹಜ ದುರ್ವರ್ತನೆಗಳು ವಿವಿಧ ಪಾತ್ರಗಳಲ್ಲಿ ನಿರೂಪಿತ ವಾಗಿದೆ. ಉತ್ತರಕರ್ನಾಟಕದ ಸಂಭಾಷಣೆಯನ್ನು ಹೊಂದಿದ ನಾಟಕ ತೀರ ಸಹಜವಾಗಿ ಮೂಡಿ ಬಂತು. ಬೊಬ್ಬಣ್ಣಿ, ಲಕ್ಕಜ್ಜ, ವಾಸ್ಯಾ ನಟ, ಜಾಗೀರದಾರ ಪಾತ್ರಗಳು ಉತ್ತಮ ಅಭಿನಯದಿಂದ ಪ್ರೇಕ್ಷಕರ ಮನದಲ್ಲಿ ಉಳಿದರು.

ಸರಳವಾದ ಸೆಟ್, ಸಹಜ ಎನ್ನಿಸುವ ಸಂಗೀತ, ಉತ್ತಮ ವಿನ್ಯಾಸ, ಬೆಳಕು ಎಲ್ಲ ಅಂಶಗಳು ನಾಟಕದ ಯಶಸ್ಸಿಗೆ ಪ್ಲಸ್ ಪಾಯಿಂಟ್. ನಾಲ್ಕಾರು ಜನ ಹಳಬರನ್ನು ಬಿಟ್ಟರೆ ಉಳಿದವರೆಲ್ಲಾ ಹೊಸಬರಾದರೂ ಅವರಿಂದ ಉತ್ತಮ ನಟನೆಯನ್ನು ಹೊರತಂದ ನಿರ್ದೇಶಕನ ಜಾಣ್ಮೆಯನ್ನು ಮೆಚ್ಚಬೇಕಾದ್ದೆ.

ಮನುಷ್ಯ ವರ್ತನೆಗಳು ಪರಿಸ್ಥಿತಿ ಹಾಗೂ ಸಾಮಜಿಕ ಸ್ಥಿತ್ಯಂತರದಲ್ಲಿ ಅನಿವಾರ್ಯವಾಗಿ ಬದಲಾಗಿಸುತ್ತದೆ. ಮನುಷ್ಯ ಬದುಕಿನ ದಿಕ್ಕನ್ನು ಬದಲಿಸುವ ಶೋಷಣೆ ಪಲ್ಲಟಗೊಂಡು ಸಾಮಾಜಿಕ ಬದಲಾವಣೆಗೂ ಕಾರಣವಾಗುತ್ತದೆ. ಅದರ ಪ್ರತಿನಿಧಿಯಾಗಿ ಜಾಗೀರದಾರ ಸಾಕ್ಷಿಯಾಗುತ್ತಾನೆ. ಆ ಮೂಲಕ ಕಾಲ ಸಂದರ್ಭದ ಎಳೆಯನ್ನು ಹಿಡಿದು ಸಾಕಷ್ಟು ಎಡಿಟಿಂಗ್‌ಗೊಂಡ ರಂಗಕೃತಿ ಲೋಯರ್ ಡೆಪ್ತ್.

ನಾಟಕ ರಂಗದ ಮೇಲೆ ಮೂಡಿ ಬಂದು ಉತ್ತಮ ರಂಗಾನುಭವವನ್ನು ಕೊಡುವಲ್ಲಿ ಗೆಲ್ಲುತ್ತದೆ. ಎರಡು ದಶಕಗಳ ನಂತರ ಧ್ರುವರಂಗ ನಾಟಕ ಶಿಬಿರವೊಂದರಿಂದ ನಗರದಲ್ಲಿ ಅಭಿನಯದ ದಾರಿಗೆ ಮತ್ತೆ ಚಾಲನೆ ಸಿಕ್ಕಿತು.

ಮಹೇಶ್ ತಿಪ್ಪಶೆಟ್ಟಿ
ಹುನಗುಂದ

ಎಲ್. ಕೃಷ್ಣಪ್ಪ

ಸಂದರ್ಶನ

* ನೀವು ಕನ್ನಡ ರಂಗಭೂಮಿಯ ರಂಗ ಚಟುವಟಿಕೆ, ರಂಗ ಪತ್ರಿಕೆ ಮೂಲಕ ವೈವಿಧ್ಯಮಯವಾದ ಕ್ರಿಯಾಶೀಲ ರಂಗ ಸಾಧ್ಯತೆಗೆ ದುಡಿದಿದ್ದೀರಿ. ನಿಮ್ಮ ಥಿಯೇಟರ್ ಎಕ್ಸ್‌ಪೆರಿಮೆಂಟ್ಸ್ ಬಗ್ಗೆ ಮಾತಾಡಿ.

– ನಾನು ಅಂತಹ ವಿದ್ಯಾಭ್ಯಾಸ ಪಡೆದವನಲ್ಲ, ನನಗೆ ಈ ರಂಗಭೂಮಿ ಮುಖಾಂತರ ಇವತ್ತಿನ ದಿವಸ ಪ್ರಪಂಚವನ್ನು ಅರಿತುಕೊಂಡೆ. ಮತ್ತು ಬದುಕಿನ ಪ್ರತಿಯೊಬ್ಬ ಮನುಷ್ಯನ ಜೀವನ ವಿಧಾನಗಳನ್ನು ಆಳವಾಗಿ ತಿಳಿದುಕೊಳ್ಳಲು ಅನುಕೂಲವಾಯಿತು. ಹಾಗಿರುವಾಗ ಈ ಥಿಯೇಟರ್‌ನಿಂದ ಬೇರೆಯವರಿಗೆ ತಿಳಿಸಲು ಆಗುತ್ತಿದೆಯೆಂಬ ಸಲುವಾಗಿ ಹಲವಾರು ನಾಟಕಗಳು ಮಾಡಲು ಸ್ಫೂರ್ತಿ ಬಂತು. ಮತ್ತೆ ಇದನ್ನು ಉಳಿಸಬೇಕೆಂದು ಬೇರೆ ಬೇರೆ ರಂಗಭೂಮಿಯ ಹಲವಾರು ಆಯಾಮಗಳಿಗೆ ತೊಡಗಿಸಿಕೊಂಡೆ. ಮೊದಲಿಗೆ ಸ್ಟೇಜ್ ಗುಡಿಸೋದರಿಂದ ಹಿಡಿದು, ಕಟ್ಟೋದರಿಂದ ಹಿಡಿದು, ಲೈಟ್ಸ್ ಮಾಡೋದರಿಂದ ಹಿಡಿದು, ನಾಟಕಕ್ಕೆ ಬೇಕಾದ ಎಲ್ಲಾ ಪರಿಕರಗಳನ್ನು ಹೊಸರೂಪ ಕೊಟ್ಟು ಮಾಡೋದು ಸೂಕ್ತ ಅಂತ ಹೇಳಿ ಮಾಡ್ತಾ ಹೋದೆ. ಹಾಗೆ ಒಂದೊಂದು ಕಲಿತು ಆಮೇಲೆ ನಿರ್ದೇಶನಕ್ಕೆ ಇಳಿದೆ.

* ನೀವು ರಂಗಭೂಮಿಗೆ ಹೇಗೆ ಬಂದಿರಿ?

– ನಾನು ಶುರು ಮಾಡಿದ್ದು ಹೇಗೆಂದರೆ, ನನಗೆ ಚಿತ್ರಗಳಲ್ಲಿ ನಟಿಸಬೇಕೆಂಬ ಹಂಬಲ ಇತ್ತು. ನಮ್ಮ ಮೇಷ್ಟ್ರು ಒಬ್ಬರು ಶಕ್ತಿ ಪ್ರಸಾದ್ ಅಂತ ಇದ್ದರು. ಅವರು ನನಗೆ ಈ ನಾಟಕಕ್ಕೆ ತೊಡಗಿಸಿಕೊಟ್ಟರು, ಅವರು ಟಿಪ್ಪುಸುಲ್ತಾನ್ ನಾಟಕ ಮಾಡಿದಾಗ ಟಿಪ್ಪುಸುಲ್ತಾನ್‌ನ ಮಕ್ಕಳಲ್ಲಿ ಒಬ್ಬನಾಗಿ ನನಗೆ ಪಾತ್ರ ಕೊಟ್ಟರು. ಹಾಗೆ ನಾಟಕ ಶುರುವಾಯಿತು. ಹೀಗೆ ಸಂಜೆ ಹೊತ್ತಲ್ಲಿ ಹೇಗೆ ನಾಟಕದಲ್ಲಿ ತೊಡಗಿಸಿಕೊಳ್ಳಬಹುದು ಅಂಥ ಇರಬೇಕಾದರೆ ನಾಗೇಶ್, ಶಿವಸ್ವಾಮಿ ಇವರೆಲ್ಲಾ ಸಿಕ್ಕಿದರು. ಅವರ ಜೊತೆಯಲ್ಲಿ ಟಿ.ಪಿ. ಕೈಲಾಸಂ, ಗುಂಡಣ್ಣ, ಪರ್ವತವಾಣಿ ನಾಟಕಗಳನ್ನು ಮಾಡಲಿಕ್ಕೆ ಶುರುಮಾಡಿದೆವು. ಮಾಡ್ತಾ ಮಾಡ್ತಾ ಟೆಕ್ನಿಕಲ್ ಥಿಂಗ್ಸ್ ಅನ್ನು ನಾವು ಊಹಿಸಿಕೊಂಡು ಬಿಟ್ವಿ



* ನೀವು ರಂಗಭೂಮಿಗೆ ಬಂದಾಗ ಆ ಕಾಲ ಯಾವ ರೀತಿ ಇತ್ತು?

– ಆಗಿನ ದಿವಸ 'ಡ್ರಾಯಿಂಗ್ ರೂಮ್' ನಾಟಕಗಳು ಅಂತ ಹೇಳ್ತಾರಲ್ಲ ಟಿ.ಪಿ. ಕೈಲಾಸಂ ನಾಟಕಗಳು, ಪರ್ವತವಾಣಿ ನಾಟಕಗಳು, ನಾಲ್ಕು ಫ್ಲಾಟ್ಸ್ ಹಾಕ್ಕೊಂಡು ಪರದೆಗಳನ್ನು ಹಾಕ್ಕೊಂಡು ಫ್ಲೆಡ್‌ಲೈಟ್ಸ್‌ನಲ್ಲಿ ನಾಟಕ ಮಾಡ್ತಿದ್ವಿ, ಆವಾಗ ಫ್ಯಾಕ್ಟರಿಗಳಲ್ಲಿ ಸಾಂಸ್ಕೃತಿಕ ತಂಡಗಳು ಹುಟ್ಟಿಕೊಂಡವು. ಆ ತಂಡಗಳಲ್ಲಿ ಫೆಸ್ಟಿವಲ್ ಮಾಡ್ತಾ ಇದ್ರು, ಅಲ್ಲೆಲ್ಲಾ ಬ್ಯಾಕ್ ಸ್ಟೇಜ್‌ನಲ್ಲಿ ವರ್ಕ್ ಮಾಡ್ತಾ ಇದ್ವಿ, ಆವತ್ತಿನ ವಾತಾವರಣ ಹೇಗಿತ್ತೆಂದರೆ, ಪ್ರೇಕ್ಷಕರನ್ನು ತೊಡಗಿಸಿಕೊಳ್ಳಲು ಒಂದು ತಂಡ ವರ್ಷದಲ್ಲಿ 5 ನಾಟಕ ಕೊಡ್ತೀವಿ ಅಂತ ಪ್ರೇಕ್ಷಕರಿಂದ ಸದಸ್ಯತ್ವ ಪಡೆದುಕೊಳ್ತಾ ಇತ್ತು. ಸುಮಾರು 800–900 ಜನ ಗ್ಯಾರಂಟಿಯಾಗಿ ಇರ್ತಾ ಇದ್ರು, ಹೀಗಾಗಿ ಪ್ರೇಕ್ಷಕರ ಕೊರತೆ ಇರಲಿಲ್ಲ.

* ಆವಾಗ ನೀನಾಸಂ ಕೇಂದ್ರ ಇರಲಿಲ್ಲ, ರಂಗಾಯಣ ಇರಲಿಲ್ಲ, ಎನ್‌ಎಸ್‌ಡಿ ಪ್ರವರ್ಧಮಾನಕ್ಕೆ ಬಂದಿರಲಿಲ್ಲ. ಆ ಸಂದರ್ಭದಲ್ಲಿ ನಿರ್ದೇಶಕರು ಯಾವ ರೀತಿ ಇದ್ರು? ಮತ್ತು ತಾಂತ್ರಿಕವಾಗಿ ಯಾವ ಥರ ಮಾಡ್ತಾ ಇದ್ರು?

– ಆವಾಗ ಬೇರೆ ದೇಶಗಳಿಂದ ನಾಟಕದ ತಂಡಗಳು ಬರ್ತಾ ಇದ್ವು, ನಾವು ಆ ನಾಟಕಗಳನ್ನು ನೋಡ್ತಾ ಅವರ ಪ್ರೊಫೆಷನ್ ಆಟಿಟ್ಯೂಡ್ ನೋಡಿ, ನಾವು ಅದೇ ರೀತಿ ಮಾಡ್ಬೇಕು ಅನ್ನುವ ಉದ್ದೇಶದಿಂದಾಗಿ ನಾಲ್ಕು ಐದು ಜನರ ತಂಡ ಮಾಡ್ಕೊಂಡು 'ಕನ್ನಡ ಸಾಹಿತ್ಯ ಕಲಾಸಂಘ'ದ ಮೂಲಕ ಬೇರೆ ಯಾವುದೇ ತಂಡ ನಾಟಕ ಆಡಿದ್ರೆ, ಆ ಟೆಕ್ನಿಕಲ್ ಥಿಂಗ್ಸ್‌ಗಳನ್ನೆಲ್ಲಾ ನಾವು ಮಾಡ್ತಾ ಇದ್ವಿ, ಹಾಗೆಯೇ ಭಿನ್ನ ಶೈಲಿಯಲ್ಲಿ ಮಾಡಲಿಕ್ಕೆ ಹೊರಟಿದ್ವಿ, ಆವಾಗ್ಲೇನೇ ರಿಯಾಲಿಸ್ಟಿಕ್ ಸ್ಟೇಜ್, ಸರ್ ರಿಯಾಲಿಸ್ಟಿಕ್ ಸ್ಟೇಜ್ ಮತ್ತು ಸಿಂಬಾಲಿಕ್ ಸ್ಟೇಜ್ ಇವೆಲ್ಲಾ ಮಾಡ್ತಿದ್ವಿ, ಹೀಗಿದ್ದಾಗ ಬಿ.ವಿ.ಕಾರಂತರು 65ರಲ್ಲಿ ನಮಗೆಲ್ಲಾ ಒಂದು ಶಿಬಿರ ಮಾಡಿದ್ರು, ಆ ಶಿಬಿರಕ್ಕೆ ವಿಗಡವಿಕ್ರಮರಾಯ ನಾಟಕ ಮಾಡ್ಸಿದ್ರು, ಅದರ ನಂತರ ಬೇರೆ ಫೆಸ್ಟಿವಲ್‌ಗಳಲ್ಲಿ ಕೆಲಸ ಮಾಡ್ತಿದ್ವಿ, ಒಮ್ಮೆ ಕಾರಂತರು ನಮ್ಮೊಂದಿಗೆ ಭೇಟಿಯಾದಾಗ ನಾನು ಕರ್ನಾಟಕದಲ್ಲಿ ಬಂದು ಕೆಲಸ ಮಾಡ್ಬೇಕು ಅಂತಾ ಇದ್ದೀನಿ, ನೀವು ಸಹಕಾರ ಕೊಟ್ರೆ ಬರ್ತೀನಿ ಅಂತ ಹೇಳಿದ್ರು, ಆ ನಂತರ 'ನೀಕೊಡೆ ನಾ ಬಿಡೆ' ನಾಟಕ 'ಕನ್ನಡ ಸಾಹಿತ್ಯ ಕಲಾಸಂಘ'ದಿಂದ ನಾವೇ ಮಾಡ್ಸಿದ್ವಿ, ಅದಾದ ನಂತರ ಅವರಿಗೆ ಒಂಥರಾ ಉತ್ಸಾಹ ಬಂತು. ತುಂಬಾನೇ ಭಿನ್ನಶೈಲಿಯಲ್ಲಿದ್ದರಿಂದ ಜನರು ಹೆಚ್ಚು ತೊಡಗಿಸಿಕೊಂಡ್ರು, ಆ ಸಮಯದಲ್ಲಿ ಯೂನಿವರ್ಸಿಟಿಯಲ್ಲಿ ಬಿ. ಚಂದ್ರಶೇಖರ್ ಇದ್ರು, ಅವರು ಬೆಂಗಳೂರಿನ ಎಲ್ಲಾ ತಂಡಗಳನ್ನು ಸೇರಿಸಿ ತುಘಲಕ್ ನಾಟಕ ಮಾಡಿಸಿದ್ರು, ಅದ್ಭುತವಾದ ಯಶಸ್ಸು ಸಿಕ್ಕಿತು ಅವರಿಗೆ. ಆ ಯಶಸ್ಸು ನೋಡಿ ಬಿ.ವಿ. ಕಾರಂತರು ಇವ್ರು ತರಬೇತಿ ಹೊಂದದೇ ಇಷ್ಟು ಕೆಲಸ ಮಾಡ್ಬೇಕಾದ್ರೆ ನಾವು ಇನ್ನೆಷ್ಟು ಕೆಲಸ ಮಾಡ್ಬೇಕು ಅಂತ ಹೆಚ್ಚು ಹೆಚ್ಚು ನಾಟಕ ಮಾಡಿಸಬೇಕು ಎಂದು ಬೆಂಗಳೂರಿಗೆ ಬಂದುಬಿಟ್ರು, ನಂತರ ವರ್ಷದಲ್ಲಿ ನಾಲ್ಕು ನಾಟಕ ಮಾಡಲಿಕ್ಕೆ ಶುರುಮಾಡಿದರು.

* ಬಿ.ವಿ. ಕಾರಂತರು ಮತ್ತು ನಿಮ್ಮ ನಡುವೆ ತುಂಬಾ ಒಳ್ಳೆಯ ಸಂಬಂಧ ಇತ್ತು. ಅವರ ಎಲ್ಲಾ ಪ್ರೊಡಕ್ಷನ್‌ಗಳ ಹಿಂದೆ ನೀವು ವರ್ಕ್ ಮಾಡ್ತಾ ಇದ್ರಿ ಅಂತ ಕೇಳಿದ್ದೇನೆ ಅದ್ರ ಬಗ್ಗೆ ಹೇಳಿ.

– ನಾನಾಗ ನಿರುದ್ಯೋಗಿಯಾಗಿದ್ದೆ. ನನಗೆ ಮನೆ ಕೂಡ ಇರ್ಲಿಲ್ಲ. ನಾನು ಕಲಾಕ್ಷೇತ್ರದಲ್ಲೇ ಹೆಚ್ಚು ತೊಡಗಿಸಿಕೊಂಡು ರಾತ್ರಿ ಹೊತ್ತು ಸ್ಟೇಜ್‌ಲೈಟ್ಸ್ ಮಾಡ್ತಾ ಇದ್ದೆ. ರಾತ್ರಿ ಎಲ್ಲಾ ಅಲ್ಲೇ ಕಳೀತಾ ಇದ್ದೆ. ಹಗಲು ಹೊತ್ತು ಸಣ್ಣ ಪುಟ್ಟ ಕೆಲಸಕ್ಕೆ ಹೊರಗೆ ಹೋಗ್ತಿದ್ದೆ. ಆ ಸಂದರ್ಭದಲ್ಲಿ ಕಾರಂತರು ಯಾವುದೇ ಒಂದು ನಾಟಕ ಆದ್ರೂನು ನಿಮ್ಮ ಸಹಕಾರ ನನಗೆ ಬೇಕು, ಪ್ರತಿಯೊಂದು ನೀವು ನೋಡಿಕೊಳ್ಳಬೇಕು ಅಂತ ಹೇಳಿದ್ರು, ಹಾಗಾಗಿ ಅವರ ಜೊತೆ ಇದ್ದುಬಿಟ್ಟೆ.

ಕಾರಂತರ ನಾಟಕ ಅಂದ್ರೆ ಡೈರೆಕ್ಷನ್ ಒಂದೇ ಅವರದು, ನೇಪಥ್ಯ ವೆಲ್ಲಾ ನಾನೇ ನೋಡಿಕೊಳ್ತಿದ್ದೆ. ಕಾರಂತರು ಬೇರೆ ಬೇರೆ ಎಕ್ಸ್‌ಪೆರಿಮೆಂಟ್ ಮಾಡ್ಲಿಕ್ಕೆ ಬೇರೆ ಮಾಧ್ಯಮಗಳ ಕಡೆ ಹೊರಳಿದ್ರಿಂದ ನಾನು ಲಂಕೇಶರ

ಜೊತೆಯಲ್ಲಿ ಹೊರಟೆ.

* ರಂಗಭೂಮಿ ಪತ್ರಿಕೆ ತರಬೇಕು ಅಂತ ಮನಸ್ಥಿತಿ ಹೇಗೆ ಬಂತು?

– ಮೊದಲಿಗೆ ಸ್ಫೂರ್ತಿ ಎಂದ್ರೆ, 1972ರಲ್ಲಿ ಪ್ರಸನ್ನ ಮುಕ್ತ ಅಂತ ಪತ್ರಿಕೆ ಶುರುಮಾಡಿದ್ರು, ಅವರು ಇನ್ನೂ ಎನ್‌ಎಸ್‌ಡಿ ಗೆ ಹೋಗಿರಲಿಲ್ಲ. ಪ್ರಸನ್ನ ಎನ್‌ಎಸ್‌ಡಿ ಗೆ ಹೋದ್ಮೇಲೆ ಪತ್ರಿಕೆ ನಡೆಸುವ ಜವಾಬ್ದಾರಿ ನಾನು ವಹಿಸಿಕೊಂಡೆ. ಆ ಒಂದು ಸಂದರ್ಭದಲ್ಲಿ ಮುಕ್ತ ಒಳಗುಟ್ಟುಗಳು ಅಂತ, ಒಳಗಡೆ ಏನು ನಡೀತಾಇದೆ? ಯಾಕೆ ಈ ಪಾರ್ಷಿಯಾಲಿಟಿ ಸ್ಟಾರ್ಟ್ ಆಗುತ್ತೆ, ಅನ್ನೋದರ ಬಗ್ಗೆ ಓಪನ್ನಾಗಿ ಬರೀತಿದ್ವಿ, ಅದರಲ್ಲಿ ಕುಂದುಕೊರತೆಗಳ ಬಗ್ಗೆ ಹೇಳಿದ್ರು, ಅಲ್ಲಿ ಒಂದು ಯಡವಟ್ಟಾಯಿತು. ನಾಟಕಗಳ ಏಳಿಗೆಗೆ ಶ್ರಮಿಸುವುದರ ಬಗ್ಗೆ ಬಿಟ್ಟು ಒಬ್ಬ ವ್ಯಕ್ತಿಯನ್ನು ಮಟ್ಟ ಹಾಕಲಿಕ್ಕೆ ನೋಡ್ತಾ ಇದ್ದಾರೆ ಅಂತ ಅನ್ನಿಸಿಬಿಟ್ಟಿತು ಎಲ್ಲರಿಗೂ. ಆಗ ಸರಿಯಾಗಿ ಹಣಕಾಸಿನ ವ್ಯವಸ್ಥೆಯೂ ಇರಲಿಲ್ಲ. ಈ ಒಂದು ಸಾಹಿತ್ಯಿಕ ಸಣ್ಣ ಸಣ್ಣ ಪತ್ರಿಕೆಗಳಿಗೆ ಯಾವುದೇ ರೀತಿಯ ಹಣಕಾಸಿನ ವ್ಯವಸ್ಥೆ ಇರುವುದಿಲ್ಲ. ಅದು ಜೀವಂತರವಾಗಿರಬೇಕಾದರೆ ಒಳ್ಳೆಯ ಲೇಖನಗಳು ಬೇಕು. ಅದೂ ಸಿಕ್ತಾ ಇರಲಿಲ್ಲ. ಹಾಗಾಗಿ ಅದನ್ನು ನಿಲ್ಲಿಸಬೇಕಾಯ್ತು. ಅಲ್ಲಿಂದಾಚೆಗೆ ಡೈರೆಕ್ಷನ್‌ನಲ್ಲಿ ತೊಡಗಿಸಿಕೊಂಡೆ. ಅಲ್ಲಿ ಎರಡು ಮೂರು ನಾಟಕ ತುಂಬಾ ಯಶಸ್ವಿಯಾಯಿತು. ಅವರು ತಿರುಕರಾಜ, ಸೂರ್ಯಶಿಕಾರಿ, ಶೂದ್ರತಪಸ್ವಿ, ಇವು ಮೂರು ನನಗೆ ಅದ್ಭುತ ಯಶಸ್ಸು ತಂದುಕೊಟ್ಟಿತು.

* ನಿರ್ದೇಶನದ ನಂತರ ಹೇಗೆ ಮುಂದುವರಿದಿರಿ?

– ಅಷ್ಟರಲ್ಲಿ ನಾಟಕ ಅಕಾಡಮಿಗೆ ನನ್ನನ್ನು ಸದಸ್ಯರನ್ನಾಗಿ ನೇಮಕ ಮಾಡಿದರು. ಆಗ ಮರಳುಸಿದ್ದಪ್ಪನವರು ಅಧ್ಯಕ್ಷರಾಗಿದ್ದರು. 70–80ರ ದಶಕದಲ್ಲಿ ಜನರು ನಾಟಕಗಳಿಗೆ ಮುಗಿಬೀಳ್ತಾ ಇದ್ರು, 90ರ ದಶಕದಲ್ಲಿ ಅದು ಕೆಳಗಡೆ ಬೀಳ್ತಾ ಹೋಯ್ತು. ನಾನು ಕರ್ನಾಟಕದಾದ್ಯಂತ ಒಂದು ಚಳುವಳಿ ಮಾಡಬೇಕಾದರೆ ಪತ್ರಿಕೆ ಮೂಲಕ ಮಾಡೋಣ ಅನ್ನೋ ಉದ್ದೇಶದಿಂದ ನಾಟಕ ಅಕಾಡೆಮಿಯಲ್ಲಿ ಮೂರು ವರ್ಷ ಆದ ನಂತರ ಪುನಃ ಪತ್ರಿಕೆಗೆ ತೊಡಗಿಕೊಂಡೆ.

* ಈ ರಂಗಭೂಮಿಯಲ್ಲಿ ಕೆಲಸ ಮಾಡಿ ರಿವ್ಯೂ ಮಾಡುವುದಕ್ಕೂ ದಿನಪತ್ರಿಕೆಗಳು ಮಾಡುವ ರಿವ್ಯೂಗು ಏನು ವ್ಯತ್ಯಾಸ?

– ಒಂದು ಪತ್ರಿಕೆ ರಂಗಭೂಮಿಗೆ ಸಂಬಂಧಪಟ್ಟದ್ದು ಇದ್ದರೆ ಅದರಲ್ಲಿ ಸಾಕಷ್ಟು ರಂಗಭೂಮಿಗೆ ಸಂಬಂಧಿಸಿದ ವಿಚಾರಗಳು ಸಿಗುತ್ತವೆ. ಇದು ಯಾವುದೇ ದಿನಪತ್ರಿಕೆಗಳಲ್ಲಿ ಸಿಗುವುದಿಲ್ಲ. ಇನ್ನೂ ಕೆಲವರು ರಂಗಭೂಮಿಯಲ್ಲಿ ಪಿಎಚ್‌ಡಿ ಮಾಡಲಿಕ್ಕೆ ಬರ್ತಾರೆ. ಅವರಿಗೆ ಇಂಥ ಒಂದು ಪತ್ರಿಕೆ ಇದ್ದಾಗ ಇಂಪ್ಯಾಕ್ಟ್ ಕ್ರಿಯೇಟ್ ಮಾಡುತ್ತೆ ಅನ್ನುವ ಉದ್ದೇಶದಿಂದ ನಾನು ಪತ್ರಿಕೆ ಮಾಡ್ತಾ ಬಂದೆ. ಹೀಗಿದ್ದಾಗ ಕೆಲವರು ಬೇರೆಯವರು ಕಳಿಸಿದ ವಿಮರ್ಶೆಯನ್ನ ಇದ್ದ ಹಾಗೆ ಹಾಕ್ತೀರಿ, ನೀವು ನಿಮ್ಮ ಕ್ರಿಟಿಕ್ಸ್ ಬರೆಯಿರಿ, ಅವರು ಬರೆದು ಕಳಿಸಿದ್ದನ್ನು ಹಾಗೇ ಹಾಕಿಬಿಟ್ರೆ ಏನು ಬೆಲೆ ಇದೆ? ಅನ್ನೋ ಮಾತು ಶುರುವಾಯಿತು. ಆಗ ನಾನು ಹೇಳಿದೆ, ಯಾರಾದ್ರು ನಾಟಕ ಮಾಡ್ಸಿದ್ರೆ ಬರವಣಿಗೆ ಬಲ್ಲವರ ಹತ್ತಿರ ಹೋಗಿ ಬರೆಸಿ ಎಂದು ಹೇಳುತ್ತಿದ್ದೆ. ಹೀಗೆ ಮಾಡುವಾಗ ಕೆಲವರಿಗೆ ಅವರನ್ನು ಹೊಗಳಿ ಬರೆದ್ರೆ ಮಾತ್ರ ಇಷ್ಟ ಆಗುತ್ತೆ, ಅವರ ಯಾವುದಾದರೂ ಒಂದು ನ್ಯೂನ್ಯತೆಯನ್ನು ತೋರಿಸಿದರೆ ಅವರಿಗೆ ಬೇಸರವಾಗುತ್ತದೆ. ಇಂತಾದ್ದೆಲ್ಲ ಹೆಚ್ಚಿದ್ರೂನು ನಾನು ಹತ್ತು ವರ್ಷಗಳ ಕಾಲ ಸತತವಾಗಿ ಅದೇ ದಿನಾಂಕಕ್ಕೆ ಪತ್ರಿಕೆಯನ್ನ ಕಳಿಸ್ತಾ ಇದ್ದೆ. ಇವತ್ತು ನನಗನ್ನಿಸ್ತಾ ಇರೋದಂದ್ರೆ ನಾಟಕಕ್ಕೆ ಜನ ಬರೋದಿಲ್ಲ ನಿಜ, ನಾಟಕಗಳ ಸುದ್ದಿ ಅವರಿಗೆ ಗೊತ್ತಿದ್ರೆ ತಾನೆ ಇದೆಲ್ಲ ಸಾಧ್ಯ.

* ಇತ್ತೀಚೆಗೆ ರಂಗಭೂಮಿಯ ಪತ್ರಿಕೆಗಳು ಹೆಚ್ಚಾಗುತ್ತಿವೆ. ನಿಮ್ಮ ಅನುಭವದ ನಡುವೆ ರಂಗಪತ್ರಿಕೆ ಹೇಗಿರಬೇಕು?

– ಇದೂ ಕೂಡ ರಂಗಭೂಮಿಯ ಬೆಳವಣಿಗೆ ಎನ್ನಬಹುದು. ರಂಗಭೂಮಿ ಮತ್ತು ಸಾಹಿತ್ಯಿಕ ಪತ್ರಿಕೆಗಳ ಬಗ್ಗೆ ಹೇಳುವುದಾದರೆ ತಜ್ಞರು ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡಿರುವವರು ಇದ್ದಾರೆ. ಇದರಲ್ಲಿ ಕನ್ನಡ ಪ್ರಾಧ್ಯಾಪಕರಿದ್ದಾರೆ, ನೀನಾಸಂ ಕಲಿತರವರಿದ್ದಾರೆ. ಆದರೆ ರಂಗಭೂಮಿಯಲ್ಲಿ ತೊಡಗಿಸಿಕೊಂಡಿರುವವರಿಗೆ ಬರವಣಿಗೆ ಇಲ್ಲ.

ನಾನಾಗ ನಿರುದ್ಯೋಗಿಯಾಗಿದ್ದೆ. ನನಗೆ ಮನೆ ಕೂಡ ಇರ್ಲಿಲ್ಲ. ನಾನು ಕಲಾಕ್ಷೇತ್ರದಲ್ಲೇ ಹೆಚ್ಚು ತೊಡಗಿಸಿಕೊಂಡು ರಾತ್ರಿ ಹೊತ್ತು ಸ್ಟೇಜ್‌ಲೈಟ್ಸ್ ಮಾಡ್ತಾ ಇದ್ದೆ. ರಾತ್ರಿ ಎಲ್ಲಾ ಅಲ್ಲೇ ಕಳೀತಾಇದ್ದೆ. ಹಗಲು ಹೊತ್ತು ಸಣ್ಣ ಪುಟ್ಟ ಕೆಲಸಕ್ಕೆ ಹೊರಗೆ ಹೋಗ್ತಿದ್ದೆ.

ಅವರಿಗೆ ಸ್ಟೇಜ್ ಕ್ರಾಫ್ಟ್, ಮೇಕಪ್, ಕ್ಯಾಸ್ಟೂಮ್ ಡಿಸೈನ್, ಆಕ್ಟಿಂಗ್, ನಿರ್ದೇಶನ ಗೊತ್ತಿರುತ್ತದೆ ಅಷ್ಟೇ. ಅದರಿಂದಾಗಿ ಉತ್ತಮ ಲೇಖನಗಳು ಸಿಗುವುದು ಕಷ್ಟ. ಬರವಣಿಗೆ ಬರುವವರೆಲ್ಲಾ ಇನ್ವಾಲ್ವ್ ಆಗಿ ಒಂದು ಪತ್ರಿಕೆಯನ್ನು ಮುಂದೆ ತರಬೇಕಾಗುತ್ತದೆ.

* ಈ ಕಾಲಘಟ್ಟದ ರಂಗಚಟುವಟಿಕೆ ನೋಡಿದರೆ ನಿಮಗೆ ಯಾವ ತರ ಅನುಭವ ಆಗುತ್ತದೆ?

– ಕೆಲವರು ಜಾನಪದವನ್ನು ಸಮಕಾಲೀನ ಮಾಡಲಿಕ್ಕೆ ಹೋಗಿ ಬಹಳ ಎಡವುತ್ತಿದ್ದಾರೆ, ಅದು ಏನೇ ಮಾಡಿದರೂ ಸ್ಕ್ರಿಪ್ಟ್‌ಗೆ ಮಾರಕವಾಗಬಾರದು ಎನ್ನುವುದು ನನ್ನ ಅಭಿಪ್ರಾಯ. ಆವಾಗ ಜನ ನಿಷ್ಠೆಯಿಂದ ಕೆಲಸ ಮಾಡ್ತಾ ಇದ್ರು, ಮತ್ತು ಶಿಸ್ತುಬದ್ಧವಾಗಿ ಬರುವುದರ ಮೂಲಕ ಎಲ್ಲವನ್ನೂ ಒಂದು ಯಜ್ಞದಂತೆ ಮಾಡ್ತಾ ಇದ್ರು, ಇತ್ತೀಚಿನ ದಿನಗಳಲ್ಲಿ ಆ ಮನಸ್ಥಿತಿ ಇಲ್ಲ. ಕೆಲವರು ಕಾಟಾಚಾರಕ್ಕೆ ಮಾಡ್ತಾರೆ. ಪ್ರತಿಯೊಬ್ಬರೂ ಹಣ ಬೇಕು ಅಂತ ಎಕ್ಸ್‌ಪೆಕ್ಟ್ ಮಾಡ್ತಾರೆ, ಈ ಹಣ ಸಿಕ್ಕಿದವರು ಬೇರೆ ರೀತಿಯಲ್ಲಿ ಕೆಲಸ ಮಾಡ್ತಾರೆ. ಉದಾಹರಣೆಗೆ ಆರ್‌ಆರ್‌ಸಿ ಯಲ್ಲಿ ಒಂದು ನಿಯಮ ಇದೆ. ಎನ್‌ಎಸ್‌ಡಿಯಿಂದ ಬಂದ ಡೈರೆಕ್ಟರ್‌ಗಳಿಗೆ ವರ್ಷದಲ್ಲಿ ಒಂದು ಡೈರೆಕ್ಷನ್‌ಗೆ 25 ಸಾವಿರ ಕೊಡ್ತಾರೆ. ಆಮೇಲೆ ಸಂಪನ್ಮೂಲ ವ್ಯಕ್ತಿಗಳಾಗಿ 1 ಗಂಟೆ ಶಿಬಿರ ಮಾಡಿದ್ರೆ 2500 ರೂಪಾಯಿ ಕೊಡ್ತಾರೆ. ಇಲ್ಲಿನವರು ಅದರಲ್ಲೇ ತೊಡಗಿಸಿಕೊಂಡಿದ್ದಾರೆ, ಅವರಿಗೆ ಒಂದು ಪೈಸೆ ಇಲ್ಲ, ಇದು ಎಷ್ಟು ಸರಿ? ಡೆಲ್ಲಿಯಿಂದ ಕರ್ನಾಟಕದಲ್ಲಿ ಒಂದು ಒಳ್ಳೆ ಕೆಲಸ ಆಗ್ತಾ ಇದೆ ಅಂತ ಇದನ್ನೆಲ್ಲಾ ಮಾಡಿದ್ರು, ಇವರದು ನೋಡಿದ್ರೆ ಐಷಾರಾಮಿ ಜೀವನ, ಈ ರೀತಿಯ ತಾರತಮ್ಯ ಬಂದಾಗ, ಒಬ್ಬರಿಗೊಬ್ಬರಿಗೆ ಮನಸ್ತಾಪ ಜಾಸ್ತಿ ಆಗಿ ನಾಟಕಕ್ಕಿಂತ ಟೀವಿಗೆ ಹೋಗೋದು ಒಳ್ಳೆಯದು ಅಂತ ಅಲ್ಲೇ ತೊಡಗುತ್ತಾರೆ. ಇಲ್ಲಿ ಒಳ್ಳೆ ರೀತಿಯ ನಿಯಮ ಇದ್ದಾಗ ಸರಿಯಾಗುತ್ತೆ.

* ರಂಗಬದುಕಿನಲ್ಲಿ ನಿಮಗೆ ಪ್ರಭಾವ ಬೀರಿದವರು ಯಾರ್‍ಯಾರು ನೆನಪಾಗ್ತಾರೆ?

– ನಾನು ರಂಗಭೂಮಿಯಲ್ಲಿ ಇರುವುದರಿಂದ ಮೊದಲಿಗೆ ನಾಗೇಶ್, ನಂತರ ಬಿ.ವಿ. ಕಾರಂತರು, ನಂತರ ಲಂಕೇಶ್, ಆಮೇಲೆ ಟಿ.ಎನ್. ಸೀತಾರಾಂ. ಇಷ್ಟೂ ಜನರ ಜೊತೇಲಿ ನಾನಿದ್ದೋನು. ಇವರೆಲ್ಲ ನನ್ನ ಬದುಕಿಗೆ ಸಹಾಯ ಮಾಡಿದವರೇ ಆಗಿದ್ದಾರೆ. ಟಿ.ಎನ್. ಸೀತಾರಾಂ ನನಗೆ ಯಾವುದೋ ಕಾರಣಕ್ಕೆ ಬಂಡವಾಳವಾಗಿ ಆ ಕಾಲದಲ್ಲೇ 25 ಸಾವಿರ ರೂಪಾಯಿ ಕೊಟ್ಟಿದ್ರು, ಅದರ ಮೂಲಕಾನೇ ನಾನು ಇಷ್ಟು ಬೆಳೆದಿರೋದು ಅಂತ ಹೇಳಬಹುದು. ಈಗಿನ ಕಾಲಕ್ಕೆ ಆ ಹಣ 25 ಲಕ್ಷ ರೂ ಆಗುತ್ತೆ. ಆ ನಂತರ ನಾನು ನಾಟಕ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರಬೇಕಾದ್ರೆ ಸಿಜಿಕೆ ಯವರು ಸಾಕಷ್ಟು ಸಹಾಯ ಮಾಡ್ತಾ ಇದ್ರು, ನಾನು ಮೊದಲಿನಿಂದ ನಂಬಿದ್ದು ಕೆಲಸವನ್ನು ಆದ್ದರಿಂದ ಹೆಚ್ಚು ಮಾತನಾಡುವುದಕ್ಕೆ ಹೋಗುತ್ತಿರಲಿಲ್ಲ. ಇತ್ತೀಚೆಗೆ ಗಮನಿಸಿದರೆ ಮಾತು ಬಲ್ಲವನೇ ಎಲ್ಲವನ್ನೂ ದಕ್ಕಿಸಿಕೊಂಡು ಅನುಭವಿಸುತ್ತಿದ್ದಾನೆ.

ಸಾಹಿತ್ಯರೂಪ
ಎ. ರಂಗನಾಥ್



ನಾನು ನಿಮ್ಮಷ್ಟು ಒಳ್ಳೆಯವಳಲ್ಲ

ನೀವು ನಿಯತ್ತಿನವರಂತೆ ವರ್ತಿಸುವ ನಿಮ್ಮ ಗುಣಗಳೇ ನನ್ನನ್ನು ನಿಮ್ಮಷ್ಟು ಒಳ್ಳೆಯವಳನ್ನಾಗಿ ಮಾಡಲಿಲ್ಲ. ಹೆಣ್ಣಿನ ಮನಸ್ಸು ಮತ್ತು ಅಸಹಾಯಕತೆಗಳೇ ಗಂಡಸರ ಶ್ರೇಷ್ಠತೆಯಾಗಿದೆ. ಮೌನದ ಒಡಲನ್ನು ಸೀಳಿ ಧ್ವನಿ ಏರಿಸಿ ಮಾತಿಗಿಳಿಯುವ ಹೆಣ್ಣು ಬಜಾರಿಯಾಗುತ್ತಾಳೆ ಎಂಬುದೇ ನಿಮ್ಮ ಗ್ರಹಿಕೆ, ನನ್ನ ಬದುಕಿನಲ್ಲಿ ಆದರದ್ದು ಅದೇ. ಈಗ ನನ್ನನ್ನು ಬಜಾರಿ, ಲೌಡಿ, ಹಾದರಗಿತ್ತಿ ಏನೆಲ್ಲಾ ಕರೆದು ಶಬ್ದಗಳಲ್ಲಿ ನಿಮ್ಮ ತೃಷೆಗಳನ್ನು ಇಂಗಿಸಿಕೊಳ್ಳುತ್ತೀರಿ. ಹೌದು ನೀವು ಕರೆಯುವ ಶಬ್ದಗಳೇ ನನ್ನನ್ನು ಹೆಚ್ಚು ಸ್ವತಂತ್ರಗೊಳಿಸಿದೆ. ನಿರಾಳವಾಗಿ ಬದುಕಲು ಪ್ರೇರೇಪಿಸಿವೆ.

ನನಗೆ ನೆನಪಿರುವ ಹಾಗೆ ಚಿಕ್ಕವಳಿದ್ದಾಗಿನಿಂದಲೂ ನಿಮ್ಮ ಪ್ರತಿಯೊಂದೂ ಮಾತಿನ ಅರ್ಥಗಳು ನಿಸ್ಸಹಾಯಕತೆ ಕಡೆ ಎಳೆಯುತ್ತಿದ್ದವು. ಕೂರುವುದು, ನಿಲ್ಲುವುದು, ನಡೆಯುವುದರಿಂದ ನಿಮ್ಮ ಭಾವನೆಗೆ ತಕ್ಕ ಹಾಗೆ ಇರಬೇಕಿತ್ತೇ ಹೊರತು, ನಮ್ಮ ದೇಹದ ಸ್ಥಿತಿ, ಮನಸ್ಸಿನ ಅನುಗುಣವಾಗಿ ಅಲ್ಲ. ನಮ್ಮ ಮನಸ್ಸು ಮತ್ತು ದೇಹವನ್ನು ಮುದುಡುವಂತೆ ಮಾಡಿ ನಿಮ್ಮ ಸೆರೆಯೊಳಗೆ ಹಾರಲು ಬಿಡುತ್ತೀರಿ. ನನ್ನ ತಾಯಿ ಹೇಳುತ್ತಿದ್ದ ಪ್ರತಿಯೊಂದು ಮಾತುಗಳು ಈಗಲೂ ನೆನಪಿದೆ. ಮನೆ. ಸಂಸಾರ. ಗಂಡ

ಮಕ್ಕಳು, ಬೇರೆ ಯೋಚಿಸಲು ಬಿಡುತ್ತಿರಲಿಲ್ಲ.

ತಂದೆಯ ಅಕ್ಕರೆಯೂ ಅಷ್ಟೇ ಸ್ವಾರ್ಥದಿಂದ ಕೂಡಿತ್ತು. ಅವರ ಮನೆತನ ಗೌರವಗಳನ್ನು ಕಾಪಾಡುವ ಯಂತ್ರವಾಗಿ ತಿರುಗಿದರೆ ಮಾತ್ರ ಮುದ್ದಿನ ಮಗಳೆಂದು ಬೀಗುವ ಹಮ್ಮನ್ನು ಉಳಿಸಿಕೊಂಡಿರುತ್ತಾರೆ. ಅಣ್ಣ, ತಮ್ಮ, ನೆರೆಯವರು, ಬಂಧುಗಳು ಎಲ್ಲಾರೂ ಅಷ್ಟೇ ನಮ್ಮ ಬದುಕಿಗೆ ಕಾವಲುಗಾರರಂತೆ ನಿಂತಿರುತ್ತಾರೆ. ಅವರ ಕಾವಲುಗಾರಿಕೆಗೆ ಒಂದಿಂಚೂ ಅಲುಗಿದರೂ ನಮ್ಮ ಮೈ ಮನಸ್ಸು ನಿತ್ರಾಣಗೊಳಿಸಿಬಿಡುತ್ತಾರೆ.

ಆದರೆ ನಾನು ತಾಯಿಯ ಹಿತವಚನಗಳನ್ನು ಪಾಲಿಸಲಿಲ್ಲ, ತಂದೆಯ ಅಕ್ಕರೆಯ ಮಗಳೂ ಆಗಲಿಲ್ಲ, ನೆರೆಹೊರೆಯವರಿಗೆ ತಗ್ಗಿಬಗ್ಗಿ ನಡೆಯಲೂ ಸಾಧ್ಯವಾಗಲಿಲ್ಲ, ಅದೇ ಕಾರಣಕ್ಕೆ ನಾನು ನಿಮ್ಮಷ್ಟು ಒಳ್ಳೆಯವಳೆಂದು ಭಾವಿಸಲಿಲ್ಲ, ನಿಮ್ಮ ಭಾವನೆ ವಿರುದ್ಧವಾಗಿ ನಡೆದುಕೊಂಡಿದ್ದರಿಂದ ಇಂದೂ ಕೂಡ ನನ್ನ ಮನಸ್ಸಿ ನಲ್ಲಿ ಏಳುವ ಬಣ್ಣ್ಗಳಿಗೆ ಆಕಾರಕೊಟ್ಟು ಕೊಳ್ಳುತ್ತೇನೆ. ಯೋಚಿಸಿದ್ದನ್ನೇ ಕನಸು ಕಾಣುತ್ತಾ, ಕನಸು ಕಂಡದ್ದನ್ನೇ ಬದುಕುತ್ತಾ ನಿಮ್ಮ ನಿಯಂತ್ರಣದ ಆಚೆ ಉಸಿರಾಡುತ್ತಿದ್ದೇನೆ. ಹೌದು, ನಾನು ನಿಮ್ಮಷ್ಟು ಒಳ್ಳೆಯವಳಲ್ಲ, ನಿಮ್ಮ ನುಡಿಗಳೊಳಗೆ ಒಂದಾಗದಿದ್ದರೆ ಮೌನದ ಹಗೆಯೊಳಗೆ ಕೊಳೆಯುತ್ತಿರುವ ಇಲ್ಲಿನ ಹೆಣ್ಣು ಮಕ್ಕಳ ಸ್ಥಿತಿಯಂತೆ ನಾನು ಬದುಕು ನೂಕಿಕೊಳ್ಳಬೇಕಾಗಿತ್ತು.

ಆದರೆ ನನ್ನ ಗಂಡನ ಆಸೆಯೊಳಗೆ ನನ್ನ ಭಾವನೆಗಳನ್ನು ಅದ್ದಲಿಲ್ಲ, ಅವನ ಕನಸ್ಸಿನೊಳಗೆ ನಾನು ಬಣ್ಣದ ಚಿಟ್ಟೆಯೂ ಆಗಲಿಲ್ಲ. ನನ್ನ ಗಂಡನ ಬದುಕಿನ ಶ್ರೇಯಸ್ಸಿಗೆ ನೊಗವಾಗಲಿಲ್ಲ. ಎಲ್ಲಾದ್ದಕ್ಕಿಂತ ಅವನ ವಂಶವೃಕ್ಷದ ಬೇರನ್ನು ನನ್ನ ಒಡಲೊಳಗೆ ಚಿಗುರಿಸುವ ಶಕ್ತಿ ಅವನಿಗೇ ಇರಲಿಲ್ಲ. ಹಾಗಂತ ನಾನು ಎಂದೂ ಗಂಡನನ್ನೂ ಹೀಯಾಳಿಸಲಿಲ್ಲ, ಅವನ ದುಃಖದೊಳಗೆ ನಗುವ ಬಿಂದುವಾಗುವ ಆಸೆ ಇತ್ತು. ಅವನ ದುಃಖದೊಳಗೆ ನಗುವ ಬಿಂದುವಾಗುವ ಆಸೆ ಇತ್ತು. ಅವನ ಕಷ್ಟದೊಳಗೆ ಪೊರಕೆಯಾಗುವ ಕನಸ್ಸಿತ್ತು. ಅವನೊಳಗೆ ನನ್ನನ್ನು ಬಿಟ್ಟುಕೊಳ್ಳಲೇ ಇಲ್ಲ. ದಿನ ರಾತ್ರಿ ದುಡಿಯುವ ರಾಟೆಯಂತೆ ಪಳಗಿಸಲು ಪ್ರಯತ್ನಿಸುತ್ತಿದ್ದ. ಅವನ ಶರೀರವೇ ಅವನೊಳಗೆ ವೀರ್ಯದ ಕಣಗಳನ್ನು ಉತ್ಪತ್ತಿಸಲು ನಿತ್ರಾಣವಾದಾಗ ನನ್ನನ್ನು ದಂಡಿಸುತ್ತಿದ್ದ. ಹೀಯಾಳಿಸುತ್ತಿದ್ದ. ಒಡಲಿನಲ್ಲಿದ್ದ ಕ್ರೌರ್ಯಗಳನ್ನು ದೇಹದ ಮೇಲೆ ಚಿಮುಕಿಸುತ್ತಿದ್ದ. ಗಾಢವಾದ ರಾತ್ರಿಗಳಲ್ಲಿ ನೋವನ್ನೇ ಹೆರುವ ಕಸುಬಾಗಿಸಿಕೊಂಡಾಗ ಗಂಡ ಗೊರಕೆಯ ಮೊರೆ ಹೋಗುತ್ತಿದ್ದ. ಹಗಲಾದರೂ ರಾತ್ರಿಯಲ್ಲಿ ಅನುಭವಿಸಿದ ದೃಶ್ಯಗಳೇ ಎದುರಾಗುತ್ತಿದ್ದಾಗ, ನೆರೆಹೊರೆಯವರು ಮಾವ, ಅತ್ತೆ, ಎಲ್ಲರೂ ಬಂಜೆ ಎಂದು ಕೂಗುತ್ತಿದ್ದರು, ಜರಿಯುತ್ತಿದ್ದರು. ಆದರೆ ಗಂಡನ ನಿಜಸ್ಥಿತಿಯನ್ನು ಹೇಳುವಂತಿರಲಿಲ್ಲ. ಗಂಡನ ಮನೆ, ಬಿಟ್ಟ ತವರಿಗೂ ಹೋಗಲಿಲ್ಲ. ದೇಹ, ಮನಸ್ಸು ಹದ ಮಾಡಿಕೊಂಡೆ, ಒಂದೇ ಕಡೆ ತಳ ಊರಲಿಲ್ಲ, ಎಲ್ಲೆಂದರಲ್ಲಿ ಅಲೆದೆ, ಬದುಕಿಗಾಗಿ ಎಡೆತಾಗಿ ನೆಲೆ ಕಾಣಲು.

ದಿನ ರಾತ್ರಿ ದುಡಿಯುವ ರಾಟೆಯಂತೆ ಪಳಗಿಸಲು ಪ್ರಯತ್ನಿಸುತ್ತಿದ್ದ. ಅವನ ಶರೀರವೇ ಅವನೊಳಗೆ ವೀರ್ಯದ ಕಣಗಳನ್ನು ಉತ್ಪತ್ತಿಸಲು ನಿತ್ರಾಣವಾದಾಗ ನನ್ನನ್ನು ದಂಡಿಸುತ್ತಿದ್ದ. ಹೀಯಾಳಿಸುತ್ತಿದ್ದ. ಒಡಲಿನಲ್ಲಿದ್ದ ಕ್ರೌರ್ಯಗಳನ್ನು ನನ್ನ ದೇಹದ ಮೇಲೆ ಚಿಮುಕಿಸುತ್ತಿದ್ದ.

ನೀವು ನಂಬಿಕೊಂಡು ಬರುತ್ತಿರುವ ನೈತಿಕ ಮೌಲ್ಯಗಳ ವಿರುದ್ಧವಾಗಿ ಚಲಿಸತೊಡಗಿದೆ. ಈಗ ನನ್ನ ಒಡಲೊಳಗೆ ಚಿಗುರಿದ ಮಕ್ಕಳಿದ್ದಾರೆ. ಗಂಡನಲ್ಲದಿದ್ದರೂ ಪ್ರೀತಿಸುವ ಗಂಡು ಜೀವವಿದೆ. ಹೆಣ್ಣು ಗಂಡಿನಲ್ಲಿರಬೇಕಾದ ಪ್ರೀತಿ ಆರ್ದತೆ ನಮ್ಮ ಬದುಕಿನಲ್ಲಿದೆ. ಹೌದು ನಿಮ್ಮ ನುಡಿಯಂತೆ ನಡೆಯದಿದ್ದೇ ನಾನು ನಿಮ್ಮಷ್ಟು ಒಳ್ಳೆಯವಳಾಗಲು ಸಾಧ್ಯವಾಗಲಿಲ್ಲ.

●



ಮಕ್ಕಳ ಮನೋರಂಗ

ಮಕ್ಕಳ ಮನೋರಂಗದಲ್ಲಿ ಅರಳುವ ಕಾಲ್ಪನಿಕ ಚಿತ್ರಣಗಳು ಅವರ ಯೋಚನೆ, ಮನಸ್ಥಿತಿ ಭೌದ್ಧಿಕ ಸೆಲೆಯಲ್ಲಿರುವ ವಾಸ್ತವಿಕ ಬದುಕಿನಿಂದಾಗಿಯೇ ನಿರ್ಧಾರವಾಗುತ್ತವೆ.

ಮಕ್ಕಳ ಮಾತು, ವರ್ತನೆಗಳು ನಡತೆಗಳು ತಮ್ಮಲ್ಲಿ ಮೂಡುವ ಆಸೆಗಳನ್ನು ಬರಿದು ಮಾಡಿಕೊಳ್ಳುವುದಕ್ಕೆ ವ್ಯಯಿಸುತ್ತಿರುತ್ತಾರೆ. ಈ ಹಂತದಲ್ಲಿ ಎರಡು ಬಗೆಯ ತಾಕಲಾಟಗಳು ಮಕ್ಕಳನ್ನು ಕಾಡುತ್ತಿರುತ್ತವೆ. ಮನೋರಂಗದಲ್ಲಿ ಹೊಳೆಯುವ ಆಸೆಗಳನ್ನು ತಂತ್ರಗಾರಿಕೆಯನ್ನು ಯಶಸ್ವಿಗೊಳಿಸುವುದು ಮತ್ತು ಆಸೆಗಳಲ್ಲಿ ರುವ ವಿಸ್ಮಯವನ್ನು ಕಡಿಮೆ ಮಾಡಿಕೊಳ್ಳುವುದು.

ಮಕ್ಕಳು ಅವಲಂಬಿತ ಬದುಕಿನಲ್ಲಿ ಸಾಗುವುದರಿಂದ ಬೇಕು ಬೇಡ, ಇಚ್ಛೆಗಳನ್ನೆಲ್ಲಾ ಪೋಷಕರಿಂದಲೇ ಈಡೇರಿಕೆ ಮಾಡಿಕೊಳ್ಳುವುದರಿಂದ, ಅದಕ್ಕೆ ಉಪಾಯ, ಕಪಟ, ಸುಳ್ಳುಗಳನ್ನು ಹೆಣೆಯುತ್ತಾ ಹೋಗುತ್ತಿರುತ್ತಾರೆ.



ತಮ್ಮ ಮನೋರಂಗದಲ್ಲಿ ಬಿತ್ತರಗೊಳ್ಳುವ ಬಣ್ಣ ಬಣ್ಣದ ಆಸೆಗಳು ಪೋಷಕರ ಗಮನಕ್ಕೆ ತರಲು ಛಿದ್ರಕಾರಿ ಮನಸ್ಥಿತಿ ಹೊಂದಿರುತ್ತಾರೆ. ಮಕ್ಕಳ ಆಸೆಗಳು ಅವರ ಬದುಕಿನ ಪರಿಸರ ಪೋಷಕರ ಜೀವನ ವಿಧಾನದಿಂದಲೇ ಉತ್ಪತ್ತಿಯಾಗುವುದರಿಂದ ಆಸೆಗಳಿಂದ ಬರುವ ಬೇಡಿಕೆಗಳೂ ಕೂಡ ಆರ್ಥಿಕ ಸ್ಥಿತಿಯನ್ನೇ ಅವಲಂಬಿಸಿರುತ್ತವೆ. ಮಕ್ಕಳು ದಿನ ನಿತ್ಯ ನೋಡುವ ಮುಟ್ಟಿ ಅನುಭವಿಸುವ, ಸವಿಯುವ ಪದಾರ್ಥಗಳನ್ನು ವಸ್ತುಗಳನ್ನು ಅಪೇಕ್ಷೆಗೆ ಬರುವಂತೆ ವಾಸ್ತವದಲ್ಲಿ ಪಡೆಯುವ ಹಂಬಲವುಳ್ಳವರಾಗಿರುತ್ತಾರೆ. ಶಬ್ದಗಳಿಂದ ಕೇಳಿದ ವಸ್ತುಗಳನ್ನು ಗಮನ ಹರಿಸಿ ಧಾರಣ ಮಾಡಿಕೊಂಡರೂ ತಮ್ಮ ಮನೋರಂಗದಲ್ಲಿ ಮೂಡದ ಹೊರತು ಮಕ್ಕಳು ಕುತೂಹಲವಹಿಸುವುದಿಲ್ಲ. ಇತರ ಮಕ್ಕಳಲ್ಲಿ ಕಂಡು ಬರುವ ಆಟಿಕೆಗಳು ವಸ್ತುಗಳು ಬಣ್ಣ ಬಣ್ಣದ ಹೊಳೆಯುವ ವಸ್ತುಗಳು ಮಕ್ಕಳಿಗೆ ಹೆಚ್ಚು ಅಕರ್ಷಣೀಯ ಮತ್ತು ಅವುಗಳನ್ನು ಆಪ್ತತೆಯಿಂದ ಪ್ರೀತಿಸುವ ವ್ಯವಧಾನ ಪಡೆದುಕೊಳ್ಳುವ ಮಕ್ಕಳು ಅಂತಹ ವಸ್ತುವನ್ನು ಪಡೆಯಲು ಪೋಷಕರನ್ನು ಒತ್ತಾಯಿಸುವುದು ಹಠ ಹಿಡಿಯುವುದು, ಅತ್ತು ಬಿಡುವುದು ಮಾಡಿ ಪಡೆದೇ ಪಡೆಯಬೇಕೆಂಬ ಮಹಾಕಾಂಕ್ಷೆ ಯಥೇಚ್ಛವಾಗಿ ಕಾಣಬಹುದು. ಇಂತಹ ಮನೋಕಲ್ಪನೆಗಳು ಹೊಂದಿದ ಮಕ್ಕಳ ಕಸರತ್ತು ತುಂಬಾ ಅಪಯಕಾರಿ ಹಾಗೂ ತುಂಟತನದಿಂದ ಕೂಡಿರುತ್ತದೆ.

ತಮಗೆ ಬೇಕಾದ ವಸ್ತುಗಳನ್ನು ಪಡೆಯಲು ಸುಳ್ಳು ನಟನೆ ಪುಸಲಾಯಿಸುವುದನ್ನು ಕರಗತ ಮಾಡಿಕೊಂಡ ಮಕ್ಕಳು ತಮಗೆ ಇಷ್ಟವಾದ ವಸ್ತುಗಳು ಇತರೆ ಮಕ್ಕಳಲ್ಲಿ ಕಂಡಾಗ ಆ ಮಕ್ಕಳನ್ನು ದ್ವೇಷಿಸುವ, ಮತ್ತು ಕೀಟಲೆ ಮಾಡುವ ಗುಣವನ್ನು ಹೊಂದಿರುತ್ತಾರೆ. ಪ್ರೇಕ್ಷಕರಿಂದ ಅದೇ ತರದ ವಸ್ತುವನ್ನು ಪಡೆದು ಆ ಮಕ್ಕಳಿಗೆ ತೋರಿಸಿ ಕಿಚಾಯಿಸುವ ಆಟವನ್ನೂ ಆಡಿಯೇ ತೀರುವ ಮಕ್ಕಳು ಅವರ ಮನೋರಂಗದಲ್ಲಿ ಆಗಲೇ ಹಲವಾರು ತರಹದ ಬದುಕಿನ ಜವಾಬ್ದಾರಿಯನ್ನು ಕಂಡು ಕೊಂಡಿರುತ್ತಾರೆ.

ಮಕ್ಕಳ ಆಸೆ ಆಕಾಂಕ್ಷೆಗಳು ಅವರ ಜೀವನದ ಸ್ವರೂಪವನ್ನು ಅವಲಂಬಿಸಿರುವುದರಿಂದ ಬಡವರ ಮಕ್ಕಳು ಮತ್ತು ಶ್ರೀಮಂತರ ಮಕ್ಕಳ ಆಸೆ ಆಕಾಂಕ್ಷೆ ತೀವ್ರತೆ ಒಂದೆ ಆದರೂ ಅವರು ಪಡೆದುಕೊಳ್ಳುವ ವಸ್ತುಗಳ ಗುಣಮಟ್ಟಗಳು ಬೇರೆಬೇರೆ ಯಾಗಿರುತ್ತವೆ. ಕುಟುಂಬ ವಾತಾವರಣದಲ್ಲಿನ ಜ್ಞಾನ, ಪ್ರತಿಷ್ಠೆ, ಅರ್ಥಿಕ ಸ್ಥಿತಿಗತಿ ಮತ್ತು ಮಕ್ಕಳ ವಿದ್ಯಾಭ್ಯಾಸ ಅರಿವು ತಾವು ಬದುಕುವ ಸಾಮಾಜಿಕ ಸ್ಥಿತಿಯಿಂದ ಅವರ ಮನೋರಂಗದಲ್ಲಿ ಬಯಕೆ ಅರಿವು ಉತ್ಪತ್ತಿಯಾಗುತ್ತದೆ.

ಶ್ರೀಮಂತರ ಮಕ್ಕಳು ಮತ್ತು ಬಡವರ ಮಕ್ಕಳಲ್ಲಿ ಜ್ಞಾನ ಮತ್ತು ಅವರು ಬಯಸುವ ವಸ್ತುಗಳು ಅಹಾರ, ಪದಾರ್ಥಗಳಲ್ಲಿ ವ್ಯತ್ಯಾಸವನ್ನು ಕಾಣಬಹುದು.

●

ಕಾಸ್ಟ್ಯೂಮ್ ವಿನ್ಯಾಸ ಪಾತ್ರಗಳ ಆಂತರಿಕ ಚಹರೆಯನ್ನೂ ಅರಿಯುವಂತಾದರೆ...

ಪಾತ್ರಗಳ ಮನಸ್ಥಿತಿಯನ್ನು ಬಾಹ್ಯವಾಗಿ ಸ್ಫೋಟಿಸಲು ಕಾಸ್ಟ್ಯೂಮ್ ವಿನ್ಯಾಸಗಳು ರೂಪಕ ಪ್ರಚ್ಛನ್ನತೆಯನ್ನು ಕೊಡುವುದಾದರೆ, ನಟನೆಯ ತೀವ್ರತೆಯನ್ನು ಪ್ರೇಕ್ಷಕರಿಗೆ ಅನುಭವಿಸುವಂತೆ ಮಾಡುತ್ತದೆ. ಪಾತ್ರಗಳ ಬಾಹ್ಯ ಸ್ವಭಾವವನ್ನು ಅರಿಯುವಂತೆ ಮಾಡುವ ಮತ್ತು ಮಾನಸಿಕ ಸ್ಥಿತಿಗಳನ್ನು ಚೋದ್ಯಗೊಳಿಸುವ ಕಾಸ್ಟ್ಯೂಮ್ ಕಸರತ್ತಾದರೆ ನಟನೆಯ ಉತ್ಪಲಗಳನ್ನು ಕಾಣಬಹುದು. ಪಾತ್ರಗಳ ಬಣ್ಣ, ವಯಸ್ಸು, ಅಂತಸ್ತು, ಕಾಲ, ಮನಸ್ಥಿತಿ, ಹವ್ಯಾಸ,



ಇಂದು ರಂಗಭೂಮಿಯಲ್ಲಿ ಕಾಸ್ಟ್ಯೂಮ್ ವಿನ್ಯಾಸದ ತಾಂತ್ರಿಕತೆಯು ನೈಜತೆಯನ್ನು ಮೀರಿ ತನ್ನ ಕುಶಲತೆಯನ್ನು ಕಂಡುಕೊಳ್ಳುತ್ತಿದೆ. ಜಾಗತಿಕ ಜಗತ್ತಿನ ರಂಗ ಸಾಧ್ಯತೆಯಲ್ಲಿ ಕಂಡು ಬರುತ್ತಿರುವ ಕಾಸ್ಟ್ಯೂಮ್ ವೈವಿಧ್ಯತೆಗಳ ಸೂಕ್ಷ್ಮತೆಗಳು ರಂಗ ವೈವಿಧ್ಯತೆಯನ್ನು ಕಡಿದು ಹಾಕಿ, ಏಕ ಪ್ರಕಾರದ ವಿನ್ಯಾಸದೊಳಗೆ ಮುಳುಗಿರುವುದನ್ನು ಕಾಣಬಹುದು.


ಇತರೆ ಸಂಬಂಧಗಳನ್ನು ಕಾಸ್ಟ್ಯೂಮ್ ಪ್ರಕಟಗೊಳಿಸುವುದರಿಂದ ನಟನೆಯ ಆಂತರಿಕ ಬಾಹ್ಯ ಶೋಧಗಳಲ್ಲಿ ಅಡಗಿರುತ್ತವೆ.

ನಾಟಕದ ಕಥಾವಸ್ತುವಿನ ಪರಿಕಲ್ಪನೆಯ ಅಡಿಯಲ್ಲೇ ಪಾತ್ರಗಳ ಕಾಸ್ಟ್ಯೂಮ್ ವಿನ್ಯಾಸಗಳು ರೂಪ ಪಡೆಯುವುದರಿಂದ ಅವುಗಳ ನಡತೆ ಹಾವ ಭಾವ, ಮಾತು, ಶಬ್ದಗಳನ್ನು ಸೂಚ್ಯಕವಾಗಿ ಪ್ರೇಕ್ಷಕರ ಅರಿವಿಗೆ ಬರುವಂತೆ ಮಾಡುತ್ತದೆ. ಮೇಕಪ್ ಮತ್ತು ಕಾಸ್ಟ್ಯೂಮ್ ವಿನ್ಯಾಸಗಳಲ್ಲಿ ಅಷ್ಟೊಂದು ಭಿನ್ನತೆ ಇಲ್ಲದಿದ್ದರೂ, ಇವೆರಡು ಪರಸ್ಪರ ಅಭಿನಯದ ಮತ್ತು ಪಾತ್ರಗಳ ಬಾಹ್ಯ ಮುಖಗಳನ್ನು ದರ್ಶಿಸುವಂತೆ ಮಾಡುವ ಹಾಗೂ ಮನಸ್ಸಿನ ಸ್ಥಿತ್ಯಂತರಗಳ ವಿವರಗಳನ್ನು ನೀಡುವ ತಾಂತ್ರಿಕ ಅಂಶಗಳು ಆಗಿರುತ್ತವೆ.

ಪಾತ್ರಗಳ ದೇಹ, ಆಕಾರ, ಬಣ್ಣಗಳನ್ನು ಮೇಕಪ್ ಮತ್ತು ಕಾಸ್ಟ್ಯೂಮ್‌ಗಳು ಪರಸ್ಪರ ಸಮತೋಲಗೊಳಿಸುವುದರೊಂದಿಗೆ ರಂಗ ಸಾಧ್ಯತೆಯಲ್ಲಿ ಹಲವು ಕ್ರಿಯೆಗಳಿಗೆ ಪೂರಕವಾಗಿ ತೊಡಗುತ್ತವೆ. ನಿರ್ದೇಶಕನ ಭೌದ್ಧಿಕ ನೆಲೆಗಳು ಮತ್ತು ಅವನ ಗ್ರಹಿತಗಳೇ ನಾಟಕ ಕೃತಿಯೊಳಗೆ ಅಡಗಿ ಕುಳಿತಿರುವ ಪಾತ್ರಗಳ ವಿಶೇಷತೆಗಳನ್ನು ರಂಗದ ಮೇಲೆ ಸ್ಫೋಟಿಸುವ ಕಲೆಯು ಆಗಿರುತ್ತದೆ. ವಾಸ್ತವಿಕ ಜೀವನದಲ್ಲಿ ಕಾಣುವ ದಿರಿಸುಗಳೇ ಪಾತ್ರಗಳ ಕಾಸ್ಟ್ಯೂಮ್‌ಗಳಾದರೆ, ಅಂತಹ ರಂಗಸ್ಥಳದಲ್ಲಿ ಯಾವ ತರದ ನಟನೆಯ ಮಜಲುಗಳನ್ನು ಕಾಣಬಹುದು ಮತ್ತು ಕಾಲ್ಪನಿಕ ಆಕಾರ ಬಣ್ಣಗಳಿಂದ ಕಾಸ್ಟ್ಯೂಮ್ ವಿನ್ಯಾಸವಾದರೆ, ಅಲ್ಲಿ ಪ್ರೇಕ್ಷಕನ ಕಲ್ಪನೆಯಲ್ಲಿ ಗ್ರಹಿತಗೊಳ್ಳುವ ಅಭಿನಯವು ಯಾವ ತೀವ್ರತೆಯನ್ನು ಪಡೆದುಕೊಂಡಿರುತ್ತದೆ. ಎನ್ನುವುದೇ ನಿರ್ದೇಶಕರ ಮತ್ತು ಕಾಸ್ಟ್ಯೂಮ್ ವಿನ್ಯಾಸಕನ ಕುಶಲತೆಯೂ ಆಗಿರುತ್ತದೆ.

ಪೌರಾಣಿಕ, ಐತಿಹಾಸಿಕ, ವಾಸ್ತವಿಕ ನಾಟಕಗಳಲ್ಲಿ ಬಳಕೆಯಾಗುತ್ತಿರುವ ವೇಷಭೂಷಣಗಳ ವಿನ್ಯಾಸಗಳಲ್ಲಿ ಹಲವು ರೀತಿಯ ವ್ಯತ್ಯಾಸ, ವೈರುಧ್ಯ, ವೈವಿಧ್ಯತೆಯನ್ನು ಕಾಣಬಹುದು. ಪೌರಾಣಿಕ ನಾಟಕಗಳಲ್ಲಿ ಪಾತ್ರಗಳಲ್ಲಿ ಪಾತ್ರಗಳಿಗೆ ತೊಡಿಸುವ ವೇಷಭೂಷಣಗಳು ಹೆಚ್ಚು ಆಕರ್ಷಣೆ, ರಂಜನೀಯ, ಅಮೂರ್ತತೆಯಿಂದ ನಟನ ಬಾಹ್ಯ ಆಕಾರವನ್ನು ಮುಚ್ಚಿ, ಪಾತ್ರಗಳನ್ನು ವಿಜೃಂಭಿಸಿ ಬಿಡುತ್ತದೆ. ಐತಿಹಾಸಿಕ ನಾಟಕಗಳ ಪಾತ್ರಗಳ ವೇಷ ಭೂಷಣಗಳು ಪೌರಾಣಿಕದಲ್ಲಿ ಬರುವ ಪಾತ್ರಗಳ ವೇಷಭೂಷಣಗಳಿಗಿಂತ ಹೆಚ್ಚು ಭಿನ್ನವಾಗಿರದೆ ಸಾಮ್ಯತೆಯಿಂದ ಕೂಡಿದ್ದರೆ ಆಕರ್ಷಣೆ ತೆಳು ವಾಸ್ತವಿಕ ಸೂಕ್ಷ್ಮಗಳನ್ನು ಪ್ರಚುರ ಪಡಿಸುತ್ತದೆ. ಪೌರಾಣಿಕ ಮತ್ತು ಐತಿಹಾಸ ನಾಟಕ ಪರಿಕಲ್ಪನೆಗಳು ವಾಸ್ತವಿಕ ಪಾತ್ರಗಳಿಗಿಂತ ಭಿನ್ನವಾಗಿರುವುದರಿಂದ ಅವುಗಳ ನಟನೆ, ವರ್ತನೆ, ಮಾತು ಸ್ವಭಾವ ಸ್ವರೂಪಗಳಲ್ಲಿ ನೈಜತೆಯನ್ನು ಹುಡುಕಲು ಸಾಧ್ಯವಾಗದಿದ್ದರೂ ಪಾತ್ರಗಳ ಮನಸ್ಥಿತಿಯಲ್ಲಿ ಹರಡಿಕೊಂಡಿರುವ ಉತ್ಕರ್ಷಗಳು ವಾಸ್ತವಿಕ ಬದುಕಿನ ಮನುಷ್ಯರ ನಡತೆಯ ಹೊಳಹುಗಳನ್ನು ಪ್ರೇಕ್ಷಕರಿಗೆ ಮನದಟ್ಟು ಮಾಡಿ ಕೊಡುತ್ತಿರುತ್ತವೆ. ಇವುಗಳ ವೇಷಭೂಷಣಗಳೂ ಕೂಡ ಅಭಿನಯದ ರೂಪಕ ಶಕ್ತಿಗಳನ್ನು ಅನುಭವಿಸುವಂತೆ ಮಾಡುತ್ತಿರುತ್ತವೆ. ಆದರೆ ವಾಸ್ತವಿಕ ನಾಟಕಗಳಲ್ಲಿ ಜನ್ಮ ತಳೆಯುವ ಪಾತ್ರಗಳು ನಿಜ ಜೀವನ ಪಾತ್ರಗಳಾಗಿರುವುದರಿಂದ ರಂಗದ ಮೇಲೆ ಬರುವ ಪಾತ್ರಗಳ ಕಾಸ್ಟ್ಯೂಮಿಗೂ ನಟರ ದಿರಿಸುಗಳಿಗೂ

ವಾಸ್ತವಿಕ ರಂಗ ಕಲ್ಪನೆಯ ಸೂಕ್ಷ್ಮತೆಗಳು ವಿದೇಶ- ದೇಶ, ಪ್ರಾದೇಶಿಕತೆ ಎನ್ನದೇ ಒಂದೇ ತೆರನಾದ ವಿನ್ಯಾಸಗಳನ್ನು ಶೋಧಿಸ ಹೊರಟಿವೆ. ಉದಾ:- ಜರ್ಮನಿಯಲ್ಲಿ ವಾಸ್ತವ ನಾಟಕವೊಂದರ ಕಾಸ್ಟ್ಯೂಮ್ ವಿನ್ಯಾಸಕ್ಕೂ ಬೆಂಗಳೂರಿನಲ್ಲಿ ನಡೆಯುವ ವಾಸ್ತವ ನಾಟಕವೊಂದರ ವಸ್ತ್ರ ವಿನ್ಯಾಸಕ್ಕೂ ಅಷ್ಟೊಂದು ವ್ಯತ್ಯಾಸ ಕಂಡು ಬರುವುದಿಲ್ಲ.



ಮತ್ತು ಪ್ರೇಕ್ಷಕರು ತೊಡುವ ಬಟ್ಟೆಗಳಿಗೂ ವ್ಯತ್ಯಾಸವಿರುವುದಿಲ್ಲ. ಹಾಗೆಯೇ ಪಾತ್ರಗಳ ಸ್ವಭಾವ, ನಟರ ವರ್ತನೆಗಳು ಮತ್ತು ಪ್ರೇಕ್ಷಕರ ನಡತೆಗಳು ಸಮಾನ ಆಶಯದೊಂದಿಗೆ ಇರುವುದರಿಂದ ರಂಗದ ಮೇಲೆ ಪಾತ್ರಗಳಿಗೆ ವಿನ್ಯಾಸಗಳನ್ನು ರೂಪಿಸುವುದೇ ರಂಗ ಸಾಧ್ಯತೆಯಲ್ಲಿ ಸೂಕ್ಷ್ಮತೆಯಾಗಿರುತ್ತದೆ.

ಇಂದು ರಂಗಭೂಮಿಯಲ್ಲಿ ಕಾಸ್ಟ್ಯೂಮ್ ವಿನ್ಯಾಸದ ತಾಂತ್ರಿಕತೆಯು ನೈಜತೆಯನ್ನು ಮೀರಿ ತನ್ನ ಕುಶಲತೆಯನ್ನು ಕಂಡುಕೊಳ್ಳುತ್ತಿದೆ. ಜಾಗತಿಕ ಜಗತ್ತಿನ ರಂಗಸಾಧ್ಯತೆಯಲ್ಲಿ ಕಂಡು ಬರುತ್ತಿರುವ ಕಾಸ್ಟ್ಯೂಮ್ ವೈವಿಧ್ಯತೆಗಳ ಸೂಕ್ಷ್ಮತೆಗಳು ರಂಗ ವೈವಿಧ್ಯತೆಯನ್ನು ಕಡಿದು ಹಾಕಿ, ಏಕಪ್ರಕಾರದ ವಿನ್ಯಾಸದೊಳಗೆ ಮುಳುಗಿರುವುದನ್ನು ಕಾಣಬಹುದು.

ವಾಸ್ತವಿಕ ರಂಗಕಲ್ಪನೆಯ ಸೂಕ್ಷ್ಮತೆಗಳು ವಿದೇಶ- ದೇಶ, ಪ್ರಾದೇಶಿಕತೆ ಎನ್ನದೇ ಒಂದೇ ತೆರನಾದ ವಿನ್ಯಾಸಗಳನ್ನು ಶೋಧಿಸ ಹೊರಟಿವೆ. ಉದಾ:- ಜರ್ಮನಿಯಲ್ಲಿ ವಾಸ್ತವ ನಾಟಕವೊಂದರ ಕಾಸ್ಟ್ಯೂಮ್ ವಿನ್ಯಾಸಕ್ಕೂ ಬೆಂಗಳೂರಿನಲ್ಲಿ ನಡೆಯುವ ವಾಸ್ತವ ನಾಟಕವೊಂದರ ವಸ್ತ್ರ ವಿನ್ಯಾಸಕ್ಕೂ ಅಷ್ಟೊಂದು ವ್ಯತ್ಯಾಸ ಕಂಡುಬರುವುದಿಲ್ಲ.

ಮನುಷ್ಯನ ಆಲೋಚನಾ ಮನಸ್ಥಿತಿಯೇ "ಕಾಲ" ದ ವರ್ತನೆಯಾಗಿ ಸಂಕೀರ್ಣಗೊಳ್ಳುವುದರಿಂದ ಅವನ ದೇಹ ಮನಸ್ಸು ಮತ್ತು ಸಮಾಜವನ್ನು ವಿಸ್ಮಯಗೊಳಿಸುವ ಸ್ವರೂಪದಲ್ಲೇ ಅವನ ಉಡುಗೆತೊಡುಗೆಗಳು ನಿರ್ಧಾರವಾಗುತ್ತವೆ. ಅದರಿಂದಲೇ ಇವತ್ತು ಕಲೆಯೊಂದರಲ್ಲಿ ಅರಳುವ ವಸ್ತ್ರ ವಿನ್ಯಾಸಗಳಿಗೂ ಮತ್ತು ವಾಸ್ತವ ಜೀವನದಲ್ಲಿ ತೊಡುವ ದಿರಿಸುಗಳಿಗೂ ವ್ಯತ್ಯಾಸವಿಲ್ಲದಿರುವುದನ್ನು ನೋಡಬಹುದು.

ಇಂದು ರಂಗ ಸಾಧ್ಯತೆಗಳಲ್ಲಿ ಆಗುತ್ತಿರುವ "ಕಾಸ್ಟ್ಯೂಮ್" ವಿನ್ಯಾಸದ ತಾಂತ್ರಿಕ ಮಾದರಿಗಳು ಜಾಗತಿಕ ಬಣ್ಣಗಳಲ್ಲಿ ಕರಗಿರುವುದನ್ನು ಗುರುತಿಸಬಹುದು. ರಂಗಭೂಮಿಯಲ್ಲಿ ದ್ರವ್ಯವಾಗಿ ಹರಿಯುವ ಅಭಿನಯದ ಸಾತ್ವಿಕತೆ ಕ್ಷೀಣಗೊಂಡು, ಬಾಹ್ಯ ವಸ್ತು ಮಾದರಿಗಳನ್ನೇ ಅಕರ್ಷಕಗೊಳಿಸುಕೊಳ್ಳುವಲ್ಲಿ "ಅನೇಕ" ರಂಗನಿರ್ದೇಶಕರು, ರಂಗಕರ್ಮಿಗಳು ವಿನ್ಯಾಸಕರು ನಿರತರಾಗಿದ್ದಾರೆ.

ಬಣ್ಣಬಣ್ಣದ ವಸ್ತು ವಿನ್ಯಾಸಗೊಳಿಸಿ, ಪ್ರೇಕ್ಷಕರಿಗೆ ಆನಂದವನ್ನುಂಟು ಮಾಡುವ ಇರಾದೆ ರಂಗ ಸಾಧ್ಯತೆಯಾಗಿರುವುದಿಲ್ಲ, ನಾಟಕಕೃತಿಯಲ್ಲಿನ ಪಾತ್ರಗಳ ವಿನ್ಯಾಸದೊಂದಿಗೆ ವಸ್ತ್ರವಿನ್ಯಾಸಗಳು ರಂಗದ ಮೇಲೆ ಅರಳುವುದಾದರೆ ಅಂತಹ ಕಾಸ್ಟ್ಯೂಮ್ ವಿನ್ಯಾಸಗಳ ಪಾತ್ರಗಳ ಆಂತರಿಕ ಅಂತಃ ಸತ್ವವನ್ನು ಪ್ರೇಕ್ಷಕರ ಕಣ್ಣು, ಕರುಳಿಗೆ ಹಿಂಡ ಬಲ್ಲದು.

ಹಾಲ್ಕುರಿಕೆ

ಸೆನ್ಸಾರ್ ಕಾಮೆಡಿ

ವಿದ್ಯಾರ್ಥಿ : ನಮ್ಮ ದೇಶದಲ್ಲಿ ಬಡವರಿಗಿಂತ ಸಮಾಜ ಸೇವಕರ ಸಂಖ್ಯೆ ಜಾಸ್ತಿ ಇದೆಯಲ್ಲ ಸಾರ್.

ಶಿಕ್ಷಕ : ಇದು ನಿನ್ನ ತಲೆಯಲ್ಲಿ ಹೇಗೆ ಹೊಳೆಯಿತು.

ವಿದ್ಯಾರ್ಥಿ : ಯಾರನ್ನು ನೋಡಿದರೂ "ಬಡವರ ಬಂಧು" ಸಮಾಜ ಸೇವಕ ಅಂತ ಕರೆಸಿಕೊಳ್ಳುತ್ತಿದ್ದರಲ್ಲ ಅದಕ್ಕೆ.

ಶಿಕ್ಷಕ : ಬಡವರಿಗೆ ಕಿಮ್ಮತ್ತು ಜಾಸ್ತಿಯಿದೆ.

ವಿದ್ಯಾರ್ಥಿ : ಅದು ಹೇಗೆ ಸಾರ್.

ಶಿಕ್ಷಕ : ಬಡವರಿರುವುದರಿಂದಲೇ ಸಮಾಜ ಸೇವಕರು ಹುಟ್ಟಿಕೊಂಡಿರುವುದು.

ವಿದ್ಯಾರ್ಥಿ : ಸಮಾಜ ಸೇವಕರಿಗೆ ಬಡವರನ್ನು ಕಂಡರೆ ಅಷ್ಟೊಂದು ಪ್ರೀತಿನಾ ಸಾರ್.

ಶಿಕ್ಷಕ : ವಿಪರೀತವಾಗಿದೆ.

ವಿದ್ಯಾರ್ಥಿ : ಮತ್ತೆ, ಇಷ್ಟೊಂದು ಸಮಾಜ ಸೇವಕರಿದ್ದಾರೆ ಆದರೂ ಬಡವರ ಸಂಖ್ಯೆ ಏರುತ್ತಾನೆ ಇದೆ.

ಶಿಕ್ಷಕ : ಸಮಾಜ ಸೇವಕರು ಅಂದರೆ ಬಡವರನ್ನು ನಿರ್ಮೂಲನ ಮಾಡುವುದಲ್ಲ, ಬಡತನವನ್ನು ಉತ್ಪತ್ತಿ ಮಾಡುವುದು.

ವಿದ್ಯಾರ್ಥಿ : ಸಾರ್ ಇದರಿಂದ ಸಮಾಜ ಸೇವಕರಿಗೆ ಏನು ಲಾಭ?

ಶಿಕ್ಷಕ : ಸಮಾಜದಲ್ಲಿ ಅವರು ಶ್ರೀಮಂತರಾಗಬೇಕಲ್ವ?

ವಿದ್ಯಾರ್ಥಿ : ಸಾರ್ ಇದು ತಪ್ಪಲ್ವ ಸಾರ್.

ಶಿಕ್ಷಕ : ತಪ್ಪು ಮಾಡದೇ ಇದ್ದರೆ ಸಮಾಜ ಸೇವಕ ಆಗುವುದಾದರೂ ಹೇಗೆ...?

ವಿದ್ಯಾರ್ಥಿ : ಸಾರ್ ತನ್ನ ತಲೆಗೆ ಏನು ಹೋಗ್ತಾ ಇಲ್ಲ.

ಶಿಕ್ಷಕ : ನೋಡಪ್ಪ, ಯಾವುದೇ ರಾಜಕಾರಣಿಗಳನ್ನು ನೋಡು, ಬಡವರ ಬಂಧು, ಬಡವರ ಹರಿಕಾರ ಅಂತ ಹೇಳಿಕೊಂಡು ತಿರುಗ್ತಾರೆ!

ವಿದ್ಯಾರ್ಥಿ : ಹೌದು ಸಾರ್. ಚುನಾವಣೆಯಲ್ಲಂತೂ ಬಡವರದೇ ಕಾರುಬಾರು.

ಶಿಕ್ಷಕ: ಇಡೀ ದೇಶದಲ್ಲಿ ಎಷ್ಟು ಲಕ್ಷ ಜನ ರಾಜಕಾರಣಿಗಳಿದ್ದಾರೆ, ಸಮಾಜ ಸೇವಕರಿದ್ದಾರೆ, ಆದ್ರೂ ಬಡವರು, ಬಡತನ ಹೋಗಿದೆಯಾ?

ವಿದ್ಯಾರ್ಥಿ : ಇವರೆಲ್ಲ ಸೇರಿಕೊಂಡು ಬಡವರಿಗೆ ಮೋಸ ಮಾಡುತ್ತಿದ್ದಾರೆ ಅಲ್ವಾ ಸಾರ್?

ಶಿಕ್ಷಕ : ಬಡವರಿಗೆ ಅಷ್ಟೇ ಅಲ್ಲ, ದೇಶಕ್ಕೇ ಮೋಸ ಮಾಡುತ್ತಿದ್ದಾರೆ.

ವಿದ್ಯಾರ್ಥಿ : ಇದು ನಿಜಾನಾ ಸಾರ್!

ಶಿಕ್ಷಕ : ಮತ್ತಿನ್ನೇನು...

ಕನ್ನಡ ಕಾವ್ಯದಲ್ಲಿ ಕವಿ ಎಂದೇ ಪರಿಚಿತರಾಗಿರುವ ನಾಗಣ್ಣ ಕಿಲಾರಿಯವರು 'ಲಂಕೇಶರ ನೀಲು ಕಾವ್ಯದಲ್ಲಿ ಪ್ರೇಮದ ಆಖ್ಯಾನ' ಎಂಬ ಅಂಕಣವನ್ನು ಬರೆಯುತ್ತಿದ್ದು, ಈಗಾಗಲೇ ಎರಡು ಅಂಕಣ ಪ್ರಕಟಗೊಂಡಿದೆ ಎಂದು ಓದುಗರ ಗಮನಕ್ಕೆ ತರುತ್ತಿದ್ದೇವೆ.

ಲಂಕೇಶರ ನೀಲು ಕಾವ್ಯದಲ್ಲಿ ಪ್ರೇಮದ ಆಖ್ಯಾನ –3

ಲಂಕೇಶರು ಮೂರು ಕಾದಂಬರಿಗಳನ್ನು ಬರೆದಿದ್ದಾರೆ. 'ಬಿರುಕು' (1967), 'ಅಕ್ಕ (1991),' 'ಮುಸ್ಸಂಜೆಯ ಕಥಾ ಪ್ರಸಂಗ' (1978). ಬಿರುಕು ನವ್ಯಪ್ರಜ್ಞೆಗೆ ಸಾಕ್ಷಿಯಾದರೆ ಲಂಕೇಶರ ನವ್ಯತೆಯನ್ನು ಮೀರಿದ ಅಥವಾ ಅವರ ಬೌದ್ಧಿಕ ಬೆಳವಣಿಗೆಯನ್ನು, ಸೂಕ್ಷ್ಮತೆಯನ್ನು ಹಿಡಿದ ಕಾದಂಬರಿ 'ಮುಸ್ಸಂಜೆಯ ಕಥಾ ಪ್ರಸಂಗ' ಆಗಿದೆ. ಕಾದಂಬರಿಕಾರರಾಗಿ ಲಂಕೇಶರು ಮೂರು ಕಾರಣಗಳಿಂದಾಗಿ ಮುಖ್ಯರಾಗುತ್ತಾರೆ. ಇವುಗಳಲ್ಲಿ ಅತ್ಯಂತ ಮಹತ್ವದೆಂದರೆ ಮನುಷ್ಯನನ್ನು ಅರ್ಥಮಾಡಿಕೊಳ್ಳುವಲ್ಲಿ ಅವರು ದೊರಕಿಸಿಕೊಂಡ ಯಶಸ್ಸು. ನಾಗರಿಕತೆಯ ಕವಚದಲ್ಲಿ ಮುಚ್ಚಿಹೋದ ಮನುಷ್ಯನ ನಿಜವಾದ ಸ್ವರೂಪದ ಅರಿವು. ಇದು ಅವರ ನಿರಂತರ ಶೋಧದ ವಸ್ತು. ಆ ಮುಖೇನ ಒಳನೋಟಗಳು ಇವರಲ್ಲಿ ಹೇರಳವಾಗಿ ಸಿಗುತ್ತವೆ. ಮನುಷ್ಯನ ದ್ವಂದ್ವಗಳು, ಅವನ ಆಕ್ರಮಣಶೀಲತೆ, ಅವಮಾನಗಳನ್ನು ಎದುರಿಸುವ ವಿಧಾನಗಳು, ಮಾನವೀಯ ಸಾಧ್ಯತೆಗಳು – ಹೀಗೆ ಹಲವಾರು ದಿಕ್ಕುಗಳಲ್ಲಿ ಮೂಲಭೂತವಾದ ಶೋಧ ನಡೆಯುತ್ತದೆ. ಎರಡನೆಯದು– ವ್ಯವಸ್ಥೆಯ ಬಗ್ಗೆ ಅವರಲ್ಲಿರುವ ಪ್ರಾಮಾಣಿಕ ಅನುಮಾನಗಳು. ವ್ಯವಸ್ಥೆಯ ಕ್ರೌರ್ಯ, ಭ್ರಷ್ಟತೆಗಳನ್ನು ಅವರು ಥಟ್ಟನೆ ಗುರುತಿಸಿಬಿಡುತ್ತಾರೆ. ಇದರಿಂದಾಗಿ ಅವರ ಎಲ್ಲ ಬರಹಗಳು ರಾಜಕೀಯ ಸ್ವರೂಪ ತನ್ನಿಷ್ಟಕ್ಕೆ ತಾನೇ ಬಂದು ಬಿಡುತ್ತದೆ. ಈ ಅನುಮಾನ ಸಿದ್ಧಾಂತ, ಮೌಲ್ಯ, ಭಾವನೆಗಳನ್ನೂ ಒಳಗೊಳ್ಳುತ್ತದೆ. ಆದರೆ ಮಹತ್ವದ ಸಂಗತಿಯೆಂದರೆ, ಈ ಎಲ್ಲ ಅನುಮಾನಗಳನ್ನೂ ಮೀರಿದ ಪ್ರೀತಿಯ ನೈಜತೆಯನ್ನೂ ಅವರು ಅಲ್ಲಗೆಳೆಯುವುದಿಲ್ಲ. ಮೂರನೆಯದು– ಅವರ ಪ್ರಯೋಗಶೀಲತೆ. ಲಂಕೇಶರು ಮೂರೇ ಕಾದಂಬರಿಗಳನ್ನು ಇದುವರೆಗೆ ಬರೆದಿದ್ದರೂ ಒಂದು ಇನ್ನೊಂದರಂತಿಲ್ಲ. ಲಂಕೇಶರ ಮೂರೂ ಕಾದಂಬರಿಯನ್ನು ಸೂಕ್ಷ್ಮವಾಗಿ ಗಮನಿಸಿ ಜಿ.ಎಸ್.ಆಮೂರ್ ಅವರು ಅಭಿಪ್ರಾಯ ಪಟ್ಟಿದ್ದಾರೆ. ಹಾಗೆ ಭಾಷೆಯ ವಿಚಾರದಲ್ಲಿ ಕೂಡ ಇಂತಹ ಪ್ರಾಯೋಗವನ್ನು ಕಾಣಬಹುದಾಗಿದೆ. 'ಅಕ್ಕ' ಕಾದಂಬರಿಯಲ್ಲಿ ಆರಂಭಕ್ಕೂ ಮೊದಲು ಲೇಖಕರ ಮಾತು ಹೇಳುವಾಗ ಈ ವಿಚಾರವನ್ನು ಸ್ಪಷ್ಟಪಡಿಸುತ್ತಾರೆ. ಶಿಷ್ಟತೆ ಅಲ್ಲದ ಭಾಷೆ ಗ್ರಾಮ್ಯ-ಕ್ಯಾತನ ಸಹಜತನಕ್ಕೆ ಹತ್ತಿರವಾಗಲು ಕಥೆ ನಗರದಲ್ಲಿ ನಡೆಯುತ್ತಿದ್ದರೂ ಅವನನ್ನು ಬೆಳೆಸಿದ, ರೂಪಿಸಿದ, ಭಾಷಿಕತೆಯನ್ನು ಉಳಿಸಿಕೊಳ್ಳಲಾಗಿದೆ. ಹಾಗೆ ಇನ್ನುಳಿದ ಎರಡು ಕಾದಂಬರಿಗೂ ವಸ್ತು, ಕಾಲಘಟ್ಟದ ಪ್ರಭಾವ, ಕಥನದ ಪರಿಣಾಮಕ್ಕಾಗಿ ಭಾಷೆಯಲ್ಲೂ ಪ್ರಯೋಗಗಳು ನಡೆಸಿರುವುದು ಸ್ಪಷ್ಟವಾಗಿದೆ. ಸದಾ ಆ ಕುರಿತು ಎಚ್ಚರದಿಂದ ಇರುತ್ತಾರೆ.

ಬಿರುಕು (1967) ಕಾದಂಬರಿ ಬರೆದ ಹನ್ನೊಂದು ವರ್ಷಗಳ ನಂತರ 'ಮುಸ್ಸಂಜೆಯ ಕಥಾ ಪ್ರಸಂಗ' (1978) ಪ್ರಕಟವಾಗಿದೆ. ನವ್ಯ ಪ್ರಜ್ಞೆಯ ಕೃತಿ 'ಬಿರುಕು'. ನವ್ಯದ ಮಿತಿಯನ್ನು ಮೀರಿ ಅದರ ಕೆಲವು ಒಳ್ಳೆಯ ಗುಣಗಳನ್ನು ಅರಗಿಸಿಕೊಂಡು ಬೆಳೆದ ಕೃತಿ 'ಮುಸ್ಸಂಜೆಯ ಕಥಾ ಪ್ರಸಂಗ'. ಈ ಕಾದಂಬರಿ ಶಿವಮೊಗ್ಗದ ಹತ್ತಿರದ ಕಂಬಳ್ಳಿಯಲ್ಲಿ ಜರುಗುತ್ತದೆ. ಈ ಕಂಬಳ್ಳಿಯ ಜನರ ಮುಖ್ಯ ಕಸುಬು ಬೇಸಾಯ ಮತ್ತು ಹಾಲು ಹೈನು ತೆಗೆದುಕೊಂಡು ಹೋಗಿ ಶಿವಮೊಗ್ಗೆಯಲ್ಲಿ ಮಾರುವುದು. ಇದು ಹಿಂದಿನಿಂದಲೂ ಬಂದದ್ದು. ಆ ಊರಿಗೆ ಒಂದು ಹಿಟ್ಟು ಮತ್ತು ಹಕ್ಕಿಯ ಹಲ್ಲರ್ ಬಂದಿವೆ. ಶಿವಮೊಗ್ಗೆಯ ನಗರದ ಪ್ರಭಾವದಿಂದ ವರದಕ್ಷಿಣೆ, ಹೆಂಡ, ಜೂಜು, ಪುಢಾರಿತನಗಳು

ಇಲ್ಲಿಗೂ ಚಾಚಿಕೊಂಡಿವೆ. ಜಾತಿಯ ಹೆಸರಲ್ಲಿ ಸೂಕ್ಷ್ಮವಾಗಿ ಹಲಬಗೆಯ ಸಾಹಸಗಳು ನಡೆದು ದಟ್ಟವಾಗಿ ಆವರಿಸುತ್ತಿವೆ. ಇಂತೆಲ್ಲ ಪ್ರಭಾವದಿಂದ ಬದುಕಿನಲ್ಲಿ ಉಂಟಾಗುತ್ತಿರುವ ಹಲವು ಸೂಕ್ಷ್ಮ ಮತ್ತು ಸಮಗ್ರ ಬದಲಾವಣೆಯ ಕಾರ್ಯಗಳು ಇವೆ. ಇಂತಹವುಗಳು ಇಂತಹ ಬದಲಾವಣೆಗಳು ಎಂದು ಸಮಾಜಶಾಸ್ತ್ರ, ಇತಿಹಾಸದ ರೀತಿಯಲ್ಲಿ ಅಥವಾ ಗಣಿತದ ಲೆಕ್ಕಚಾರ ರೀತಿಯ ಪಟ್ಟಿ ವಿಂಗಡಣೆ ಕೊಡಲಾಗದು. ಸಾಹಿತ್ಯ ಯಾವಾಗಲೂ ಅಂತಹ ಕೆಲಸ ಮಾಡುವುದೂ ಇಲ್ಲ. ಈ ಸೂಕ್ಷ್ಮತೆಗಳನ್ನು ಬಿಚ್ಚಿಡುವ ನಿಮಿತ್ತವಾಗಿ ಲೇಖಕರು ರಂಗವ್ವ ಎಂಬ ವಿಧವೆಯೊಬ್ಬಳ ಸಂಸಾರದ ಮೂಲಕ ಕಟ್ಟಿಕೊಟ್ಟಿದ್ದಾರೆ. ತಮ್ಮ ಕಾದಂಬರಿಯ ರಚನೆಯ ಬಗ್ಗೆ, ಅದರ ಉದ್ದೇಶದ ಬಗ್ಗೆ, ಒಟ್ಟಿನಲ್ಲಿ ಬದುಕಿನ ಬಗ್ಗೆ ಲಂಕೇಶರು ಕಾದಂಬರಿಯಲ್ಲಿ ಮೇಲಿಂದ ಮೇಲೆ ಪ್ರಸ್ತಾಪ ಮಾಡುತ್ತಾರೆ. ಇವು ಮುಸ್ಸಂಜೆಯನ್ನೂ ಅರ್ಥ ಮಾಡಲು ಅನುಕೂಲತೆ ಗಳನ್ನೊದಗಿಸುವುದರಿಂದ ಅವುಗಳನ್ನು ಗಮನಿಸುವುದು ಲಾಭಕರವಾಗಬಲ್ಲುದು. 'ಮುಸ್ಸಂಜೆಯ ಕಥಾ ಪ್ರಸಂಗ' ಕಾದಂಬರಿಯ ಆರಂಭದಲ್ಲಿಯೇ ಈ ಹೇಳಿಕೆ ಬರುತ್ತದೆ."


ನಾಗಣ್ಣ ಕಿಲಾರಿ

ಈ ಕಂಬಳ್ಳಿ ಗ್ರಾಮದಲ್ಲಿ ಮುಖ್ಯವಾಗಿ ಹಣ ಮತ್ತು ಪ್ರೇಮದಿಂದಾಗಿ ನಡೆದ ಕೆಲವು ಘಟನೆಗಳು ಮತ್ತು ಕೆಲವು ಬದಲಾವಣೆಗಳನ್ನೂ ಆದಷ್ಟು ಸಂಗ್ರಹವಾಗಿ ದಾಖಲೆಗೊಳಿಸುವುದು ಈ ಲೇಖಕನ ಉದ್ದೇಶ. ಬರೆಯುತ್ತಾ ಹೋದಂತೆ ಕೆಲವೊಮ್ಮೆ ವಾತಾವರಣ ಹಾಗೂ ಪಾತ್ರಗಳ ಒತ್ತಾಯದಿಂದ ಲೇಖಕ ನುಚ್ಚುನೂರಾಗುವ ಅಪಾಯಗಳಿಗೆ ಸಿಕ್ಕಿಕೊಂಡಿದ್ದಾನೆ. ಅನೇಕ ಜನ ಮನುಷ್ಯರಿರುವ ಈ ಹಳ್ಳಿಯನ್ನು ಕೆಲವೇ ಪಾತ್ರಗಳಿಗೆ ಇಳಿಸುವುದಾಗಲಿ, ಕೇಂದ್ರದ ಪಾತ್ರವೆನ್ನಿಸಿಕೊಳ್ಳುವ ಒಬ್ಬ ನಾಯಕ ನಾಯಕಿಯ ಹಂಗಿಗೆ ಒಳಗಾಗಿ ಅವನ ಅಥವಾ ಅವಳ ಸುತ್ತ ಮಿಕ್ಕದ್ದನ್ನು ಹೆಣೆಯುವುದಾಗಲಿ ಕಂಬಳ್ಳಿಯ ಒಟ್ಟಾರೆ ಗುಣಕ್ಕೆ ಅನ್ಯಾಯ ಮಾಡೀತು ಎಂಬಂತಹ ನಂಬಿಕೆಯಿಂದ ಹಲವಾರು ಜನ ಮನುಷ್ಯರ ಕ್ರಿಯೆಗಳನ್ನೂ ಕ್ರಿಯಾಶಾಲಿಗಳಲ್ಲದ ಮನುಷ್ಯರ ಅನಿಸಿಕೆಗಳನ್ನೂ ಮುಂದೆ ಕೊಡಲಾಗಿದೆ.

ನಾಗರಿಕತೆ ಬೆಳೆಸುತ್ತಿರುವ ಸಹಜತೆಯ ಬಗೆಗೆ ಲಂಕೇಶರಿಗೆ ಮಾತ್ರ ವಿರೋಧ. ವ್ಯಕ್ತಿಯ ಮನಸ್ಸು ಸುಲಭವಾಗಿ ಬಿಟ್ಟು ಮತ್ತೊಂದು ಪೊರೆಯನ್ನು ಧರಿಸುವ ಅಥವಾ ತನ್ನೊಳಗಿನಿಂದಲೇ ನಾಗರೀಕತೆಯ ಪ್ರಭಾವದಲ್ಲಿ ಬೆಳೆಯಿಸಿಕೊಳ್ಳುವ ಕುರಿತು ಸಿಟ್ಟು, ಪರಕೀಯ ಪ್ರಜ್ಞೆ ಉಂಟುಮಾಡುತ್ತಿರುವ ವ್ಯವಸ್ಥೆ, ಇಂತಹ ವ್ಯವಸ್ಥೆಯ ಆಮೀಷಕ್ಕೆ ಈಡಾಗದಂತೆ ಬದುಕಲು ಹೋರಾಡುವ ವೃತ್ತಿ, ಕೆಲವೊಮ್ಮೆ ವ್ಯವಸ್ಥೆಯ ಒಂದು ಭಾಗವೇ ಆಗಿಬಿಡಲು ಹೊರಟುಬಿಡುವ ಮುನ್ನ ವ್ಯಕ್ತಿತ್ವವನ್ನೇ ಮೀರಬೇಕಾಗಿರುವ ಸ್ಥಿತಿಯ ವಿರುದ್ಧ ವ್ಯಕ್ತಿ ಅಸ್ತಿತ್ವವಾದಿಯರಾಗಬೇಕಾಗುತ್ತದೆ. ವ್ಯಕ್ತಿಯಲ್ಲಿರುವ ಅಹಂಕಾರ ಜನಿತವಾಗಿ ಉಳಿದರೂ ಸುಲಭವಾಗಿ ಗುರುತಿಸಬಲ್ಲ ವ್ಯಕ್ತಿತ್ವದ ತೋರಿಕೆಯ ರೂಪವನ್ನು ಚಿತ್ರಿಸುವುದಿಲ್ಲ; ಅರ್ಥಂಬರ್ಥ ಹೊಳೆಯುತ್ತಿರುವ, ಬೇರೆಯವರಿಗೆ ಕಾಣದೆ ಇರುವ ಒಳರೂಪವನ್ನು, ಒಳ ಮನಸ್ಸಿನಲ್ಲಿ ವ್ಯವಸ್ಥೆಯಿಂದಾಗಿ ಅನುಭವಿಸುತ್ತಿರುವ ವಿಕೃತತೆ, ಅದರಿಂದ ಉಂಟಾಗುತ್ತಿರುವ ನೋವು, ವಿಷಾದ ವ್ಯಕ್ತಿಯೊಳಗೇ ಇರುವ ಪರಕೀಯ ಪ್ರಜ್ಞೆ, ಇದು ಇವರ ಕಾದಂಬರಿ ನಾಟಕದಂತೆ ಕಾವ್ಯದಲ್ಲಿ ಕೂಡ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಇವರು ಕಾವ್ಯವನ್ನು ಕಾದಂಬರಿ, ಲೇಖನ, ಕಥೆ ರೀತಿಯಲ್ಲಿ ಧಾಳಾಗಿ ಬರೆಯಲಿಲ್ಲ. ಬರೆದರೂ ಸಂಖ್ಯೆಯಲ್ಲಿ ಕಡಿಮೆಯಾದರೂ ಗುಣಮಟ್ಟದಲ್ಲಿ ಕನ್ನಡದ ಶ್ರೇಷ್ಠ ಕವಿತೆಗಳಲ್ಲಿ ನಿಲ್ಲುವವುಗಳಾಗಿವೆ. ಅವ್ವ, ನನ್ನ ಸುತ್ತ, ಅಕ್ಕ-ತಮ್ಮ ಇಂತಹ ಕವಿತೆಗಳು ವ್ಯವಸ್ಥೆ ಮತ್ತು ವ್ಯಕ್ತಿತ್ವವನ್ನು ಕುರಿತು ಪರಾಮರ್ಶೆ ಮತ್ತು ಆರೋಗ್ಯಕರ ಅನುಸಂಧಾನ ನಡೆಸುತ್ತವೆ.

ಪಿ. ಲಂಕೇಶ್ ನವ್ಯ ಬರಹಗಾರರಲ್ಲಿ ಒಬ್ಬರು ಎಂಬುದು ಯಾಂತ್ರಿಕ ವಿಭಜನೆಯ ಕ್ರಮವಾದರೂ, ಅದರ ಶ್ರೇಷ್ಠ ಗುಣಗಳನ್ನು ಮೀರಿದ ಬರಹಗಾರ. ನವ್ಯ ಪ್ರಜ್ಞೆಯನ್ನು ಮೈಗೂಡಿಸಿಕೊಂಡು ಅಥವಾ ಬೆಳೆದು ಬರೆದವರು; ನವ್ಯದ ಮಿತಿ ಮತ್ತು ಉತ್ತಮ ಗುಣಾವಗುಣಗಳನ್ನು ಬಹುಬೇಗನೆ ಪರಾಮರ್ಶಿಸಿಕೊಂಡರು. ಆ ಕಾರಣವಾಗಿ ನವ್ಯತೆಯ ವ್ಯಸನ ಮೀರಲು ಸಾಧ್ಯವಾಗುತ್ತದೆ.

ಇವರ ಸಮಕಾಲೀನರಾದ ಪೂರ್ಣಚಂದ್ರ ತೇಜಸ್ವಿ ಅವರು 'ಅಬಚೂರಿನ ಪೋಸ್ಟಾಫೀಸು' – ಕಥಾ ಸಂಕಲನಕ್ಕೆ ಮುನ್ನುಡಿ ಬರೆಯುತ್ತಾ "ಹೊಸದಿಗಂತ"ದೆಡೆಗೆ ದಾರಿ ತೆರೆದರು. ಲಂಕೇಶರು ಆ ರೀತಿಯ ಘೋಷಣೆಯನ್ನು ಮಾಡದೆ ನವ್ಯ ಬರಹಗಾರರಾಗಿ ಬರೆಯುತ್ತಿರುವಾಗಲೇ ಒಂದು ಬಗೆಯ ಅಘೋಷಿತ ನವ್ಯದಾಚೆಯ ದಿಗಂತ ಒಳಗೇ ಇತ್ತು ಎಂದು ಕಾಣುತ್ತದೆ. ಇದು ನವ್ಯದ ಬಗ್ಗೆ ಅವರಿಗಿದ್ದ ನಂಬಿಕೆಯಂತೆಯೇ, ಆಳದಲ್ಲಿ ಅನುಮಾನವನ್ನೂ ಹೊಂದಿದ್ದರೆಂದು ಕಾಣುತ್ತೆ. ಈ ಹಿನ್ನೆಲೆಯಲ್ಲಿ ಅವರ 'ಅವ್ವ', ಅಕ್ಕ–ತಮ್ಮ, ಕವಿತೆ ಗಮನಿಸಬಹುದಾಗಿದೆ. ಕುವೆಂಪು, ಲಂಕೇಶ್ ಮುಂತಾದ ಬ್ರಾಹ್ಮಣೇತರ ಬರಹಗಾರರಿಗೆ ಬಹುಬೇಗನೆ ಒಂದು ಅಪವಾದ ತಗುಲುವ ಕ್ರಮ ಇದೆ. ಬ್ರಾಹ್ಮಣತ್ವದ ಕಡೆ ನಡೆಯುತ್ತಿರುವವರು ಎಂದು. ಕುವೆಂಪು 'ಕಾನೂರು ಹೆಗ್ಗಡತಿ' ಕಾದಂಬರಿಯಲ್ಲಿ ಹೂವಯ್ಯನಂತಹ ಆದರ್ಶೀಕ್ರಮದ ಪಾತ್ರ ಸೃಷ್ಟಿಸಿದಾಗ ಕುವೆಂಪು ಅವರ ತಹತಹ ಮತ್ತು ಹೂವಯ್ಯನ ಮನಃಸ್ಥಿತಿ ಬ್ರಾಹ್ಮಣಿಕೆಯದು. ಶೂದ್ರರ ಬದುಕಿನ ಸ್ವರೂಪವೆಲ್ಲ ಗೊಡ್ಡು ನಂಬಿಕೆಗಳ ಜಗತ್ತು ಎಂಬ ತುಚ್ಚೀಕರಣ ಇತ್ತು. ಇಂತಹ ಕ್ರಮವನ್ನು ಮುರಿಯುವ ಅಥವಾ ವೈರುಧ್ಯದ ಕ್ರಮದಲ್ಲಿ ಎಂಬಂತೆ ಲಂಕೇಶ್ ಅವರ ಅವ್ವ, ಅಕ್ಕ–ತಮ್ಮ ಮುಂತಾದ ಕವಿತೆಗಳನ್ನು ಗಮನಿಸಬಹುದಾಗಿದೆ. 'ಅವ್ವ' ಕವಿತೆ ಶುದ್ಧತೆ, ಸಂಪ್ರದಾಯ, ಸಂಕೇತಗಳು, ಬ್ರಾಹ್ಮಣಿಕೆಯ ಲಕ್ಷಣಗಳು ಇವುಗಳನ್ನು ಪಕ್ಕಾ ಮೀರಿದ್ದು ಆಗಿದೆ. 'ಲಂಕೇಶರ ಪದ್ಯದಲ್ಲಿ ಅವ್ವನ ಜೊತೆ ಕವನದ ನಾಯಕನಿಗಿರುವ ಸಂಬಂಧ ನೋಡಿ. ಅಲ್ಲಿರುವ ಪ್ರತಿಯೊಂದು ಸಾಲು ಹೇಗಿವೆಯೆಂದರೆ; ಇವಳು ಹುಡುಕಿಕೊಂಡು ಹೊರಟಿದ್ದು ಏನೋ ಒಂದು ಧರ್ಮಕ್ಕಾಗಿ ಅನ್ನುವ ಆಕೆಯನ್ನು ಪ್ರಚೋದಿಸಿ 'ಕಳೆದು ಹೋದ ಎಮ್ಮೆಗಾಗಿ' ಅನ್ನುತ್ತಾರೆ. ಅಂದರೆ ಸಂಸ್ಕೃತೀಕರಣದ ಮೌಲ್ಯಗಳನ್ನು ಅಪೇಕ್ಷಿಸುವಂಥ ಸಾಲುಗಳನ್ನು ಸೃಷ್ಟಿಸಿ, ಅವುಗಳ ಕೊನೆಯಲ್ಲಿ ಅವಳು ಬರೇ ಕಾರ್ಯಜೀವಿಯಾಗಿದ್ದನ್ನು ತೋರಿಸಿ ಅದನ್ನೇ ಕೀರ್ತಿಸುತ್ತಾರೆ. ಈ ಹುಡುಕಾಟ ಅಥವಾ ಶೋಧನಾ ಕಾರ್ಯ ಪ್ರಮುಖವಾದದ್ದು, ಅದು ಬದುಕನ್ನ, ಜೀವಗಳನ್ನ, ಪ್ರೀತಿಯನ್ನ ಹುಡುಕುವುದು. ಕುವೆಂಪು ಅವರ 'ಬಾ ಫಾಲ್ಗುಣ ರವಿದರ್ಶನಕೆ' ಕವಿತೆಯಲ್ಲಿ ಸಹೃದಯರನು ಆಹ್ವಾನಿಸುವ, ತೋರಿಸುವ, ಕಾಣುವ ಕುತೂಹಲದಂತೆ. ಬೇಂದ್ರೆಯವರ 'ಬೆಳ(ಗು)ಕ'ನ್ನು ಕಾಣುವ ಬೆರಗು ಕಣ್ಣು ಓದುಗನೊಳಗೆ ಎಚ್ಚರಗೊಳಿಸುತ್ತೆ.

ಸತಿ ಸಾವಿತ್ರಿ, ಜಾನಕಿ, ಊರ್ಮಿಳೆಯಲ್ಲ;
ಚರಿತ್ರೆ ಪುಸ್ತಕದ ಶಾಂತ, ಶ್ವೇತ, ಗಂಭೀರೆಯಲ್ಲ;
ಗಾಂಧೀಜಿ, ರಾಮಕೃಷ್ಣರ ಸತಿಯರಂತಲ್ಲ;
ದೇವರ ಪೂಜಿಸಲಿಲ್ಲ; ಹರಿಕತೆ ಕೇಳಲಿಲ್ಲ;
ಮುತ್ತೈದೆಯಾಗಿ ಕುಂಕುಮ ಕೂಡ ಇಡಲಿಲ್ಲ

– ಅವ್ವ – ಚಿತ್ರ ಸಮೂಹ

ಪ್ರಾಣಿ ಜಗತ್ತು, ಸಸ್ಯ ಜಗತ್ತು ಮತ್ತು ತನ್ನ ಸಂಸಾರ ಜಗತ್ತುಗಳ ಸ್ವರೂಪ ಕುರಿತ ಸಾವಯವ ಬೆಸುಗೆಯ ರೂಪವಾಗಿದೆ. ಹಾಗೆ ಪುರಾಣ, ಚರಿತ್ರೆ, ಚಾರಿತ್ರಿಕ ಹಿರಿಯ ವ್ಯಕ್ತಿಗಳನ್ನು ಆದರ್ಶಿಕವಾಗಿ ಒಪ್ಪುವುದಿಲ್ಲ. ಅವರ ಬಗ್ಗೆ ಗೊತ್ತಿಲ್ಲವೆಂದು ಕವಿತೆಯ ನಾಯಕ ನೆನಪಿಸುವ ಮೂಲಕ ಈಕೆಯ ಶಕ್ತಿಯನ್ನು ಕುರಿತು ಧ್ಯಾನಿಸುತ್ತಾರೆ. 'ಭಗವದ್ಗೀತೆ ಇತ್ಯಾದಿ ಬೇಡ' ಎನ್ನುತ್ತಾರೆ. ಎಲ್ಲಿ ಒಂದು ದ್ವಂದ್ವ ಮತ್ತು ಘರ್ಷಣೆ ಹುಟ್ಟಿಕೊಳ್ಳಬಹುದಿತ್ತೋ ಅಲ್ಲಿ ಇವರು ಶೂದ್ರತ್ವವನ್ನು ಅದು ಇರುವಂತೆಯೇ ಒಪ್ಪಿಕೊಳ್ಳುವ ನಿಲುವಿನಲ್ಲಿ ನಿಂತು ಸಂಕೋಚವನ್ನು ಮೀರುತ್ತಾರೆ. ಹೀಗೆ ಬೀರಲು, ಸಾಧ್ಯವಾಗಿರುವುದರಿಂದಲೇ ಲಂಕೇಶರು ನವ್ಯವನ್ನು ದಾಟುವುದು. 'ಬಿರುಕು' ಕಾದಂಬರಿ ಬರೆದವರು 'ಮುಸ್ಸಂಜೆಯ ಕಥಾ ಪ್ರಸಂಗ' ಬರೆಯಲು ಸಾಧ್ಯವಾದದ್ದು. 'ನಾನಲ್ಲ' ಕಥೆ ಬರೆದವರು ರೊಟ್ಟಿ–ಸ್ಟೆಲ್ಲಾ ಎಂಬ ಹುಡುಗಿ– ಮುಂತಾದ ಕಥೆಗಳನ್ನು ರಚಿಸಲು ಸಾಧ್ಯವಾಗಿದೆ. ಬಿಚ್ಚು, ನನ್ನ ಸುತ್ತ... ಪದ್ಯ ಬರೆದವರು ಅವ್ವ, ಅಕ್ಕ–ತಮ್ಮ, ಅನ್ನಾಕರೆನಿನಾ, ಅಲ್ಲದೆ ನೀಲುವಿನಂತಹ ಸಾವಿರಾರು ಪದ್ಯಗಳನ್ನು ಬರೆದರು. ಅಕ್ಕ–ತಮ್ಮ ಕವಿತೆಯಲ್ಲಿ ಸಂಕೋಚವನ್ನು ಮೈಗೂಡಿಸಿಕೊಂಡ ನಂತರ ಅದನ್ನು ಗೆಲ್ಲುವ ಅಥವಾ ಮೀರುವ ಸ್ಥಿತಿಯನ್ನು ಸ್ಪಷ್ಟವಾಗಿ ಕಾಣಬಹುದು. ಸಂಕೋಚದ ಒಳಗೇ ಸಿಕ್ಕು ಬಳಲುವುದಿಲ್ಲ. ವ್ಯಕ್ತಿಕೇಂದ್ರಿತ ಅಹಮಿಕೆಯನ್ನು ಮೀರುವ ಕ್ರಮ ಇದೆ. ನವ್ಯದ ನಾಯಕ ಪಾತ್ರದಂತೆ ತೊಳಲುವ ಬದಲು ಬದುಕಿನ ಚೈತನ್ಯದಾಯವಾದ ನಡೆಯನ್ನು ಕಂಡುಕೊಳ್ಳಲಾಗಿದೆ. ಇದು ಲಂಕೇಶರ ಬರವಣಿಗೆಯ ಬೆಳವಣಿಗೆ ಕ್ರಮ ಕೂಡ ಆಗಿದೆ. ಅಕ್ಕ–ತಮ್ಮ ಕವಿತೆಯು ಲಂಕೇಶರ ದೈತ್ಯ ಪ್ರತಿಭೆಯ ವಿಕಸನಕೆ ಸಾಕ್ಷಿ.

1956ರಲ್ಲಿ ಲಂಕೇಶ್ ಅವರ ಮೊದಲ ಕವನ ಸಂಕಲನ 'ಇಂಚರ' ಪ್ರಕಟವಾದದ್ದು 1980ರ

'ಲಂಕೇಶರ ಪದ್ಯದಲ್ಲಿ ಅವ್ವನ ಜೊತೆ ಕವನದ ನಾಯಕನಿಗಿರುವ ಸಂಬಂಧ ನೋಡಿ. ಅಲ್ಲಿರುವ ಪ್ರತಿಯೊಂದು ಸಾಲು ಹೇಗಿವೆಯೆಂದರೆ; ಇವಳು ಹುಡುಕಿಕೊಂಡು ಹೊರಟಿದ್ದು ಏನೋ ಒಂದು ಧರ್ಮಕ್ಕಾಗಿ ಅನ್ನುವ ಆಕೆಯನ್ನು ಪ್ರಚೋದಿಸಿ 'ಕಳೆದು ಹೋದ ಎಮ್ಮೆಗಾಗಿ' ಅನ್ನುತ್ತಾರೆ.

ಜೊತೆಗೆ ಸಾಕಷ್ಟು ಬರವಣಿಗೆಯಲ್ಲಿ ತೊಡಗಿದ್ದರು. ಲಂಕೇಶರು ಮಗ್ಗಲು ಬದಲಾಯಿಸುವುದರ ಮೂಲಕ ಹೆಚ್ಚು ಹೆಚ್ಚು ತೀವ್ರವಾಗಿ ಬದುಕುವ ಬರೆಯುವ ಹಠವನ್ನೂ ಧರಿಸುತ್ತಿದ್ದವರು. "ಹತ್ತಾರು ವರ್ಷ ಅಧ್ಯಾಪಕನಾಗಿ ಕೆಲಸ ಮಾಡಿದ್ದರಿಂದ ಕೇವಲ ನಾಲಗೆ ಮಾತ್ರ ಚುರುಕಾಗಿ ವ್ಯಕ್ತಿತ್ವ ಟೊಳ್ಳಾಗುವ ಭಯ ಆವರಿಸತೊಡಗಿದಾಗ ಆಕಸ್ಮಿಕವೆಂಬಂತೆ ಸಿನೆಮಾ ಮಾಡಿ, ನಂತರ ಪತ್ರಿಕೋದ್ಯಮಕ್ಕೆ ಇಳಿದರು ಲಂಕೇಶರು.

'ನೀಲು' ಕವಿತೆಗಳ ದೃಷ್ಟಿಯಿಂದ ಇದು ಬಹಳ ಮಹತ್ವದ ವಿಚಾರ. 'ಲಂಕೇಶ್ ಪತ್ರಿಕೆ' ಕರ್ನಾಟಕದ ಬದುಕಿನಲ್ಲಿ ಸುಮಾರು 20 ವರ್ಷ ಮಹತ್ತರ ಪಾತ್ರ ನಿರ್ವಹಿಸಿದೆ. ಸಾಮಾಜಿಕ, ರಾಜಕೀಯ, ಭಾಷಿಕ, ಸಾಹಿತಿಕ ಮುಂತಾಗಿ ನಿರ್ವಹಿಸದ ಪಾತ್ರ ಪ್ರಮುಖವಾಗಿದೆ. ಸಾಮಾಜಿಕ ಕಾಳಜಿಯ ಮತ್ತು ಅನುಭವದ ಆಘಾತಗಳು ನಿರಂತರ ತಲ್ಲಣಗೊಳಿಸುವ ಸಂಗತಿಗಳು ಆಗಿದ್ದವು. ಪತ್ರಿಕೆ ಮತ್ತು ಓದುಗರನ್ನು ಎಚ್ಚರಿಸುವ, ರೂಪಿಸುವ, ಅಭಿರುಚಿಯನ್ನು ಕಾಪಾಡುವ, ನೈತಿಕ ಜವಾಬ್ದಾರಿಯನ್ನುಂಟು ಮಾಡುವುದು, ಜೊತೆಗೆ ಪತ್ರಿಕೆ ವ್ಯಾಪಾರದ ದೃಷ್ಟಿಯಿಂದ ಬದುಕುವ ಬಯಕೆಗಾಗಿ ಆಕರ್ಷಕ, ಕುತೂಹಲದ ನೆಲೆಗಳನ್ನೂ ಕಾಪಾಡಿಕೊಳ್ಳುವುದು ಕೂಡ ಮುಖ್ಯವಾದ ಸಂಗತಿ. ಈ ವ್ಯಾಪಾರದ ನೆಲೆಗೆ ನಿಲ್ಲುವುದು ಒಂದು ರೀತಿಯಲ್ಲಿ ಹೇಳಬೇಕಾದ ಸಂಗತಿಯನ್ನು ಮಸುಕುಗೊಳಿಸುವ ಸಾಧ್ಯತೆ ಇರುತ್ತದೆ. ಯಾಕೆ ಈ ಮಾತು ಹೇಳುತ್ತಿದ್ದೇನೆಂದರೆ, 'ಲಂಕೇಶ್ ಪತ್ರಿಕೆ'ಯ ರೀತಿಯಲ್ಲಿ ಬದುಕುವುದು ಕಷ್ಟ. ಜಾಹೀರಾತು ಇಲ್ಲದೆ; ತನ್ನ ಓದುಗರನ್ನೇ ನೆಚ್ಚಿಕೊಂಡಿರುವುದು ಸುಲಭದ ಸಂಗತಿಯಲ್ಲ. ದೈನಿಕ ಓದುಗರಿಲ್ಲದ ಕಾಲ. ಅಕ್ಷರ ಕಲಿತವರೂ ಪತ್ರಿಕೆಗಳನ್ನು ಓದುವ ಹವ್ಯಾಸ ಜನರಲ್ಲಿ ಅಷ್ಟಾಗಿ ಇಲ್ಲದ ದಿನಗಳು. ಇದ್ದರೂ ಅದು ತೀರಾ ತೀರ ಕಡಿಮೆ.

1959ರಿಂದ 1962ರ ವರೆಗೆ ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿದ್ದ ಲಂಕೇಶರು ಅನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮತ್ತು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿ, 1978ರಲ್ಲಿ ಅಧ್ಯಾಪಕ ವೃತ್ತಿಗೆ ರಾಜೀನಾಮೆ ನೀಡಿ; ಸಿನೆಮಾರಂಗದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅಧ್ಯಾಪಕ ವೃತ್ತಿಗೆ ರಾಜೀನಾಮೆ ನೀಡುವ ಮುನ್ನವೇ ಸಿನೆಮಾ ನಿರ್ದೇಶಕರಾಗಿದ್ದ ಲಂಕೇಶರು 1977ರಲ್ಲಿ 'ಪಲ್ಲವಿ' ಚಿತ್ರ ನಿರ್ದೇಶಿಸಿದರು. ಈ ಚಿತ್ರ ನಿರ್ದೇಶನಕ್ಕೆ ಅವರಿಗೆ 'ರಾಷ್ಟ್ರಪ್ರಶಸ್ತಿ' ಬಂತು. ಅವರ ಈ ಮೊದಲ ಪ್ರಯತ್ನವೇ ಅತ್ಯಂತ ಯಶಸ್ಸನ್ನು ತಂದುಕೊಟ್ಟಿತು. 1980ರ ವೇಳೆಗೆ ಅವರ ನಾಲ್ಕನೇ ಚಿತ್ರ 'ಎಲ್ಲಿಂದಲೋ ಬಂದವರು' ಬಿಡುಗಡೆಯಾಯಿತು. ಅನಂತರ ಅದೂ ಬೇಸರವಾಯಿತು ಎಂದು ಕಾಣುತ್ತದೆ. ತಮ್ಮೆಲ್ಲ ತೀವ್ರತೆಯನ್ನು ಹಂಚಿಕೊಳ್ಳುವ ತಹತಹದಿಂದ ಮತ್ತು ಕ್ರಿಯಾಶೀಲ ಮನಸ್ಸಿನ ಹಂಬಲಕ್ಕೆ 'ಲಂಕೇಶ್ ಪತ್ರಿಕೆ' ಆರಂಭಿಸಿದರು. 1980ರಲ್ಲಿ ಆರಂಭವಾದ ಈ ಪತ್ರಿಕೆ ಕರ್ನಾಟಕದ, ರಾಜಕೀಯ, ಸಾಂಸ್ಕೃತಿಕ ಸನ್ನಿವೇಶದಲ್ಲಿ ಪ್ರಧಾನ ಪಾತ್ರ ವಹಿಸಿತು.


ಬೌದ್ಧಿಕವಾದ, ನೈತಿಕ, ಸಾಮಾಜಿಕ ಜವಾಬ್ದಾರಿಗಳನ್ನು ಉಳಿಸಿಕೊಂಡಿರಲು ಅವರು ತಮ್ಮ ಬರವಣಿಗೆಯಲ್ಲೇ ಪ್ರಯೋಗಗಳನ್ನು ನಡೆಸಬೇಕಾಯಿತೆಂದು ಕಾಣುತ್ತದೆ. ಆ ಕಾರಣಕ್ಕಾಗಿ ಟೀಕೆ-ಟಿಪ್ಪಣಿ, ಮರೆಯುವ ಮುನ್ನ, ನಿಮ್ಮಿಕಾಲಂ, ನೀಲು, ಈ ಸಂಚಿಕೆ, ತುಂಟಾಟ.... ಮುಂತಾಗಿ. ಅಲ್ಲದೆ ನಾಡಿನ ಹೊಸ ಪ್ರತಿಭೆ ಹಾಗೂ ಕೆಲವು ವಿಶಿಷ್ಟ ಪ್ರತಿಭೆಗಳಿಗೆ ಅಂಕಣಗಳನ್ನು ನೀಡಿದ್ದು ಇದೆ. ರೂಪಕ ಲೇಖಕ, ಗಾಳಿ ಬೆಳಕು, ಶಿಲ್ಲಾಂಗ್ ಸ್ಪಂದನ, ಹುಬ್ಬಳ್ಳಿಯಾಂವ, ಬಯಲುಸೀಮೆ ಕಟ್ಟೆ ಪುರಾಣ.... ಮುಂತಾಗಿ. ಇದು ಪತ್ರಿಕೆಯ ಸಮೃದ್ಧತೆಯ, ಅಕ್ಷರಲೋಕದ ಪತ್ರಿಕೆಯ ವೈವಿಧ್ಯಮಯ ಪರಿಯಾಗಿದೆ. ಇಂತಹ ತುಡಿತದ ಆರಂಭದಲ್ಲೇ 'ನೀಲು' ಕಾವ್ಯಕ್ಷಣ ರೂಪು ತಳೆದು ಸುಮಾರು 20 ವರ್ಷ, ಹತ್ತು ಸಾವಿರಕ್ಕೂ ಹೆಚ್ಚು ಪದ್ಯಗಳು ಒಂದು ದೈನಿಕ ಮಹಾಕಾವ್ಯದಂತೆ ನಿರಂತರವಾಗಿ ಪತ್ರಿಕೆಯಲ್ಲಿ ಪ್ರಕಟಗೊಂಡಿವೆ.



ಭಾರತೀ ದೇವಿ

ತಿಂಗಳ ಕಾವ

ಪಂಜರ




ಹಸಿರು ಭೂಮಿಯನ್ನು
ಜಗಿದು ಉಗಿದಿರುವ
ರಾಕ್ಷಸ ರಸ್ತೆ
ಕೆಂಪು ಧೂಳಲ್ಲಿ ತೊಯ್ದು
ರಕ್ತಸಿಕ್ತವಾಗಿ ಒರಗಿದ
ಕಟ್ಟಡಗಳ ತುಂಡು ತುಂಡು
ರಣ ರಂಗದಲ್ಲಿ ರುಂಡ, ಮುಂಡ,
ಕೈಕಾಲುಗಳ ಕಳಕೊಂಡು
ಧರೆಗುರುಳಿದ ಯೋಧನಂತ
ಮರಗಳು
ಎತ್ತೆತ್ತಲೂ ಧಗೆ... ಮೋಟಾರು
ಹೊಗೆ....

ಇವೆಲ್ಲವುಗಳ ನಡುವೆ ಜೀವಾತ್ಮ
ಕಂಗೆಡುವಾಗ
ಕದ ತಟ್ಟಿ, ಕಿವಿಗೊಟ್ಟು ಕೇಳಿದರೂ
ಕ್ಷಣವೊಂದರಲ್ಲೇ ಕೋಟೆ
ವಿಳುಸುತ್ತಿನದಾಗಿ
ಒಳಗಿನ ದನಿ ದುರ್ಬಲವಾಗಿ ಆಗಿ
ಕೊನೆಗೊಂದು ದಿನ
ಇಲ್ಲವಾಯಿತು

ಅನಾದಿಯಿಂದಲೂ,
ನಮ್ಮಾತ್ಮಸಾಕ್ಷಿಗೆ ಒರೆಗಲ್ಲಾಗಿ
ಕಾಪಿಟ್ಟು ಪೊರೆಯುತ್ತಿದ್ದ
ನಮ್ಮ ಹಿರಿಯರ ಗಳಿತ ಆತ್ಮಗಳು
ಈಗ
ಅನಾಥವಾಗಿ ಬೊಬ್ಬಿರಿಯುತ್ತಿವೆ...
ಅವ್ಯಾವುವೂ ನಮಗೆ
ಕೇಳಿಸುವುದಿಲ್ಲ,
ಕ್ಷಮಿಸಿ, ನಾವು ವ್ಯಾಪ್ತಿ ಪ್ರದೇಶದ
ಹೊರಗಿದ್ದೇವೆ
ಪ್ರಗತಿಯ ಹೆಜ್ಜೆ ಲಯತಪ್ಪಿರುವಾಗ
ಮುಂಬರುವ ದಿನಗಳಿಗೆ
ಮುನ್ನುಡಿಯಾಗಿ


ಮನುಕುಲದ ಕಣ್ಣಪಾಪೆಗಳೆಲ್ಲ
ಕರಟಿದ ಬತ್ತಿಯಾಗಿ ಉದುರುತ್ತವೆ
ಕಾಣುವ ಕಣ್ಣೇ
ಮಾರಿಕೊಂಡವನಿಗೆ,
ಮನಸ್ಸನ್ನೇ ಮಾರಿ ಮನೆ
ತುಂಬಿಸಿಕೊಂಡು ಬೀಗ
ಜಡಿದವನಿಗೆ
ಸಾವು ನೋವು, ಸುಖ ದುಃಖ,
ಕತ್ತಲೆ ಬೆಳಕು
ಎಲ್ಲ ಒಂದೇ...
ಅದಕ್ಕೇ ನಾವು
ಸಾವಿನ ವಾಸನೆ ಧಾಳಾಗಿ
ಹೊಡೆಯುತ್ತಿರುವ ಈ ಜಗದಲ್ಲಿ
ನಿರ್ಭಾವದಿಂದಿದ್ದೇವೆ...

ತಲೆಕಡಿದುರುಳಿದ ಮರಗಳ
ನಡುವೆ
ನಡೆದಾಡುವಾಗೆಲ್ಲ
ಗಾಯಗೊಳ್ಳುವ
ನನ್ನಾತ್ಮಪಕ್ಷಿಯನ್ನು
ಯಾರೋ ಧುತ್ತನೆ ಸೆಳೆದು
ಪಂಜರದೊಳಗೆ
ಬಂಧಿಯಾಗಿಸುತ್ತಾರೆ
ಇತ್ತೀಚೆಗೆ, ದಿನದಿಂದ ದಿನಕ್ಕೆ ಆ
ಪಂಜರ ಹಿಗ್ಗುತ್ತಲೇ ಇದೆ...


ನೇತ್ರಾವತಿ ಕೆ.ವಿ.

ಬಿಡಗುಡುವ ಮರುಭೂಮಿಯ
ಬಿಸಿಗಾಳಿಯ ತಾಪಕ್ಕೆ
ತಂಪಾಗುತ್ತಿದೆ ದೇಹ
ಇಂಪು ಸೂಸುವ ಇಬ್ಬನಿಗಳು
ಇಣುಕಿ ನೋಟುತ್ತಿವೆ
ಕೆಂಡಕಾರುತ್ತಾ ಅನುಮಾನದಿಂದ
ಅಲ್ಲಿ
ರಾಮ ರಹೀಮ ನಾನಕ್
ಬುದ್ಧ ಕ್ರಿಸ್ತ ಮಹಾವೀರ
ಲಗೋರಿ ಆಡುತ್ತಾರೆ.
ಎದೆಯ ನೀರನು ಚೆಲ್ಲಿ
ಕನಸುಗಳ ಬಿತ್ತುತ್ತಾರೆ
ಕಣ್ಣಾ ಮುಚ್ಚಾಲೆ ಆಡುತ್ತಾ
ಕಣ್ಣ ಪರೆಯ ಸರಿಸಿ
ಸಂಬಂಧಗಳ ಬೆಸೆಯುತ್ತಾರೆ
ಅತ್ತು ಅತ್ತು ಸಾಕಾಗಿ ಭುವಿ
ಬಾಯಿ ಬಿಡುತ್ತಾ
ಮನಸ್ಸುಗಳ ಕತೆ ಹೇಳುತ್ತಾಳೆ... ಅವರಿಗೆ
ಮಲಗಿಸುತ್ತಾಳೆ. ಜೋಗುಳ ಹಾಡುತ್ತಾಳೆ...
ಅವರು ಮಲಗುವುದೇ ಇಲ್ಲ
ಪ್ರಶ್ನೆ ಕೇಳುತ್ತಾರೆ
ಕತ್ತಲು ಬೆಳಕುಗಳನ್ನು
ಹುಡುಕುತ್ತಾ ಹೊರಟ
ನಮಗೆ
ವಿಷದ ಬಟ್ಟಲು ಸಿಕ್ಕಿದ್ದು
ಹೇಗೆ
ಉತ್ತರ ಕೊಡಲಾಗದೇ
ಒದ್ದಾಡುತ್ತಾಳೆ.
ಅವಳು ಹೀಗೆ... ಯೇ... ಎದುಸಿರು ಬಿಡುತ್ತಾ
ಆಕಾಶ ನೋಡುತ್ತಾಳೆ
ಎದೆ ದಿಕ್ಕು ತಪ್ಪುತ್ತಿದೆ
ಕತ್ತಲು ಬೆಳಕಿನ ಸಂಕರತೆಗೆ
ವಿಷದ ಒಳಗೂ ದ್ರಾಕ್ಷಾರಸ ಹನಿಗಳ
ಹುಡುಕುತ್ತಾಳೆ
ವಿಷವನ್ನೇ ದ್ರಾಕ್ಷಾರಸವಾಗಿಸುವ ತಂತ್ರ
ಹೂಡುತ್ತಾಳೆ.
ನಿರುಮ್ಮಳಾಗುತ್ತಾಳೆ
ಇಲ್ಲಗಳ ನಡುವೆ ಎಲ್ಲವುಗಳು ಇದ್ದು
ತಂಪು ಸೂಸುತ್ತಿರುವ ವಿಷದ ಧನ್ಯತಾಭಾವಕ್ಕೆ

ವಿಷದ ಧನ್ಯತಾ ಭಾವಕ್ಕೆ...



ನೀಲಿಗ್ಯಾನ 3


ಕಳೆದ ಎರಡು ಸಂಚಿಕೆಗಳ ನನ್ನ ಬರಹದ ಬಗ್ಗೆ ತುಂಬಾ ಪ್ರತಿಕ್ರಿಯೆಗಳು ಬರುತ್ತಿವೆ ಈಗಲೂ. ಸಾಹಿತ್ಯವನ್ನು ಬದುಕಿನ ಜೀವಜಲದಂತೆ ಬಳಸುವ ಕೆಲ ಮಂದಿ ನನ್ನ ಬರಹವನ್ನು ತುಂಬಾ ಸೀರಿಯಸ್ಸಾಗಿ ತೆಗೆದುಕೊಂಡಿರುವುದು ನನಗೆ ಭಯ ಹಾಗೂ ಸಂತೋಷಗಳೆರಡನ್ನೂ ತಂದಿದೆ. ಆದರೆ ಹೀಗೆ ಬರೆಯುವ ಹೊತ್ತಿಗೇ ನನಗೆ ನನ್ನ ಮಿತಿಗಳು ನೆನಪಿಗೆ ಬರುತ್ತವೆ. ಕಳೆದ ಸಂಚಿಕೆಗೆ ನಾನು ಕಳಿಸಿದ ಬರಹವನ್ನು ನೋಡಿದ ತಕ್ಷಣ ಹಾಲ್ಕುರಿಕೆಯವರು ಫೋನ್ ಮಾಡಿ 'ತುಂಬಾ ಚೆನ್ನಾಗಿದೆ. ಮೂಡಿಸಿತ್ತು. ಇರಲಿ. ಅವರೊಳಗಿನದ್ದನ್ನೇ ನಾನು ಸ್ವಲ್ಪ 'ರಂಜಕ'ವೆನಿಸುವ ಭಾಷೆಯಲ್ಲಿ ಹೇಳಿರಬಹುದು.

ಈ ಸಲ ನಾನೊಂದು ಕತೆ ಹೇಳುತ್ತೇನೆ. ಕತೆಯೆಂದರೆ ನಮ್ಮೂರಿನಲ್ಲಿ ನಡೆದ ಘಟನೆ. ನಮ್ಮೂರಲ್ಲಿ ನನಗಿಂತ ಒಂದು ವರ್ಷ ದೊಡ್ಡವನಾದ ಕೃಷ್ಣ ಎಂಬವನೊಬ್ಬನಿದ್ದ. ದಲಿತರ ಹುಡುಗ. ಅವನನ್ನು ಎಲ್ಲರೂ 'ಕರಿಯ' ಎನ್ನುತ್ತಿದ್ದರು. ಈ ಹೆಸರು ಅವನಿಗೆ ಯಾರೋ 'ಉತ್ತಮ'ರಿಂದ ಬಂದದ್ದು. ತನ್ನ ವಯಸ್ಸಿಗಿಂತ ಸಣ್ಣವರಾದ ಕೆಲ ಗೆಳೆಯರೊಂದಿಗೆ ಊರಿನ ಉತ್ತಮರ ಮನೆಗಳಿಗೆ ಬೆಳ್ಳಂಬೆಳಗ್ಗೆ

ಮತ್ತೆ ಮತ್ತೆ ನೆನಪಾಗುವ ಕತೆ..

ಹೀಗೇ ಮುಂದುವರಿಸಿ; ಯಾರು ಹೇಳಿದರೂ ಸಾಫ್ಟ್ ಆಗಬೇಡಿ.' ಅಂದರು. ಅಲ್ಲಿಗೆ ನನ್ನ ಬರಹದ 'ಒರಟುತನ' ಹಾಲ್ಕುರಿಕೆಯವರಿಗೆ ಗೋಚರಿಸಿತ್ತು. ಅದರೊಂದಿಗೆ ಅವರಿಗೆ ಆ ಒರಟುತನದ ಒಳಗೂ ಅರ್ಥವಾಗಿತ್ತು. ನಾನು ಯಾಕೆ ಸಾಫ್ಟ್ ಆಗಬಾರದೆಂಬುದನ್ನು ಅವರು ನನಗೆ ಸಮರ್ಥವಾಗಿ ಅರ್ಥ ಮಾಡಿಸಿದರು. ಇದರೊಟ್ಟಿಗೆ ನನ್ನೊಂದಿಗೆ ಸಾಹಿತ್ಯದ ಬಗ್ಗೆ ಮುಖ್ಯವಾಗಿ ಚರ್ಚಿಸುವ, ನನ್ನ ಪ್ರಜ್ಞೆಯ ಭಾಗವೇ ಆಗಿರುವ ಕೆಲ ಗೆಳೆಯರು ನಾನು 'ಹಾಗೆ' ಬರೆಯಬಾರದಿತ್ತು ಎಂಬಂತೆ ಮುಖ ಸಿಂಡರಿಸಿಕೊಂಡರು. ಇದು ನನಗೆ ನಿಜಕ್ಕೂ ನನ್ನ ಬಗ್ಗೆ ಬೇಸರ

ಹೋಗಿ ದನ-ಕರುಗಳ ಕಸ ಬಾಚಿಹಾಕಿ ಅವರು ಕೊಡುವ ತಂಗಳನ್ನ ಮುಂತಾದ 'ಭಕ್ಷ್ಯ'ಗಳಿಂದ ತೃಪ್ತನಾಗುವುದರೊಂದಿಗೆ ಅವನ ದಿನಚರಿ ಶುರುವಾಗುತಿತ್ತು. ಅಲ್ಲಿಂದ ಕತ್ತಲಾಗುವಷ್ಟರಲ್ಲಿ ಊರ ಸುತ್ತಲಿನ ಹಳ್ಳ ದಿಣ್ಣೆ, ಕಾಡು ಮೇಡುಗಳಲ್ಲಿ ಅಲೆದು ಜೇನು ಕೀಳುವುದು. ಹಲಸಿನಹಣ್ಣು ಕದಿಯುವುದು (ತಿನ್ನಬೇಕು ಎಂದು ಕೇಳಿದರೆ ಕೊಡದಿರುವವರ ಮರಗಳಲ್ಲಿ). ಹೊಂಗೆಕಾಯಿ. ಸೀಗೆಕಾಯಿ. ಹಿಪ್ಪೆಬೀಜ ಕೂಡಿಟ್ಟುಕೊಂಡು ಭಾನುವಾರದ ಸಂತೆಯಲ್ಲಿ ಮಾರಿ ಬೋಂಡ ತಿನ್ನುವುದು. ಸಂತೆ ಬಂತೆಂದರೆ ಬೆಲ್ಲದ ಮೂಟೆಗೆ ಮುತ್ತುವ ನೊಣ ಹೊಡೆಯುವ ಕೆಲಸ ಗಿಟ್ಟಿಸಿಕೊಂಡು



ಹುಲಿಕುಂಟೆ ಮೂರ್ತಿ

ಕವಿ ಮತ್ತು ಬರಹಗಾರರಾದ ಹುಲಿಕುಂಟೆ ಮೂರ್ತಿಯವರು 'ನೀಲಿಗ್ಯಾನ' ಅಂಕಣವನ್ನು ಪ್ರಾರಂಭಿಸಿದ್ದು ಈಗಾಗಲೇ ಎರಡು ಅಂಕಣ ಪ್ರಕಟವಾಗಿದೆ ಎಂದು ಓದುಗರ ಗಮನಕ್ಕೆ ತರುತ್ತಿದ್ದೇವೆ.

ದೇವರಿಗೂ ಅರಿವಾಗದೋಪಾದಿಯಲ್ಲಿ ಬೆಲ್ಲ ಎಗರಿಸಿ ಶಿಷ್ಯಂದಿರ ಜೇಬು ತುಂಬಿಸುವುದು, ಶಾಲೆಯ ಬಯಲಿನಲ್ಲಿ ಸೈಕಲ್ ಏರಿ ಚಿತ್ರ ವಿಚಿತ್ರ ಭಂಗಿಗಳಿಂದ ತನ್ನ ಜೂನಿಯರ್‌ಗಳ ಮುಖದಲ್ಲಿ ಬೆರಗು ಮೂಡಿಸುವುದು, ಶಾಲಾ ಕಟ್ಟಡಗಳ ಮೇಲೇರಿ ಮಂಗನಂತೆ ಕಟ್ಟಡದಿಂದ ಕಟ್ಟಡಕ್ಕೆ ಎಗರುವುದು, ಆದಿಮಾನವನಂತೆ ಕೆಳಕ್ಕೆ ಜಿಗಿಯುವುದು, ಊರಿನ ಟ್ರಾನ್ಸ್‌ಫರ್ಮರ್‌ನಲ್ಲಿ ಫ್ಯೂಸ್ ಹೋದರೆ, ಕ್ಷಣಾರ್ಧದಲ್ಲಿ ಊರಿಗೆ ಬೆಳಕು ಬರುವಂತೆ ಮಾಡುವುದು... ಹೀಗೆ ಅವನ ದಿನಗಳು ರಸವತ್ತಾಗಿ, ರೋಚಕವಾಗಿ ಕಳೆಯುತ್ತಿದ್ದವು. ಅವನ ಶಕ್ತಿಯನ್ನು ಕಂಡವರು ಕ್ಷಣಕಾಲ ಅವಕ್ಕಾಗುತ್ತಿದ್ದರು.

ನಾವು 'ಹಟ್ಟಿ ಹುಡುಗರು' ಅವನ ಟೀಮ್ ಸೇರಲು ಇನ್ನಿಲ್ಲದ ಹರಸಾಹಸ ಮಾಡಿ, ಅವನ ಗಮನ ಸೆಳೆಯುವಂತೆ ಏನಾದರೊಂದು ಸಾಹಸ ಮಾಡುವ ಚಿಂತೆಯಲ್ಲಿದ್ದರೆ, ಇಡೀ ಊರಿನ 'ಉತ್ತಮ'ರ ಹೊಟ್ಟೆಗಳೊಳಗೆ ಅವನನ್ನು ಕಂಡಾಗಲೆಲ್ಲಾ ಬೆಂಕಿ ಹೊತ್ತಿಕೊಳ್ಳುತ್ತಿತ್ತು. ಏನಾದರೂ ಕದ್ದು ಸಿಕ್ಕಿ ಬಿದ್ದರಂತೂ ಅವನು, ಅವನ ಅಮ್ಮ, ಅಕ್ಕ, ಜಾತಿ ಎಲ್ಲವೂ ಬೀದಿಗೆ ಬರುತ್ತಿದ್ದವು. 'ಎಂಥೆಂತವ್ಕೋ ಸಾವು ಬತ್ತದೆ ಈ ದರಿದ್ರ ನನ್ ಮಕ್ಕಳಿಗೆ ಬರಲ್ವೇ.... ಹಿಂಗೇ ಮೆರೀಲಿ, ದೇವ್ರು ಸರಿಯಾಗ್ ಇಕ್ತಾನೆ....' ಇಂಥವು ಅದೆಷ್ಟೋ... ಇಂಥಾ 'ಉತ್ತಮ'ರ ಮಾತುಗಳನ್ನು ಅದ್ಯಾವ ದರಿದ್ರ ದೇವರು ಕೇಳಿಸಿಕೊಂಡನೋ, ಒಂದು ದಿನ ಊರಲ್ಲಿ ಕರೆಂಟು ಕೈಕೊಟ್ಟಿದ್ದನ್ನು ಕಂಡು ಶಾಲಾ ಆವರಣದಲ್ಲಿದ್ದ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಕಂಬಕ್ಕೆ ಮುಳುಗುತ್ತಿರುವ ಸೂರ್ಯನನ್ನು ಜುಟ್ಟು ಹಿಡಿದು ಮೇಲಕ್ಕೆತ್ತಿ ಊರಿಗೆ ಬೆಳಕು ಚೆಕ್ಕಿಸುವವನಂತೆ ಹತ್ತಿದ ಕರಿಯ ಶಾಕ್ ಹೊಡೆದು ಕೆಳಗೆ ಬಿದ್ದ. ಆ ಘಟನೆಯಿಂದ ಅವನ ಸೊಂಟದ ಇಡೀ ಕೆಳಭಾಗ ಮರಗಟ್ಟಿಹೋಯ್ತು. ಕೈಯೊಂದು ತಿರುಚಿಕೊಂಡಿತು. ಐದಾರು ತಿಂಗಳ ಗೌರ್ಮೆಂಟ್ ಆಸ್ಪತ್ರೆ ಶುಶ್ರೂಷೆಯಿಂದ ಎಲ್ಲವನ್ನು ಸಹಜ ಸ್ಥಿತಿಗೆ ತಂದುಕೊಂಡ ಕರಿಯ ಮೊದಲಿನಂತೆ ರೋಮಾಂಚನ ಹುಟ್ಟಿಸುವ ಯಾವುದನ್ನೂ ಮಾಡದಾದ. ಅವುಗಳೆಲ್ಲಾ ಈಗ ಅವನಿಗೂ ಕನಸುಗಳಂತೆ.. ನಮಗೂ... ಈಗ ಕೊಂಚ ಹೆಳವನಂತೆ ಕಾಣುತ್ತಾನೆ.

ಆದರೆ, ಕರಿಯನಿಗೆ ಹಾಗಾದದ್ದು ಇಡೀ ಊರಿನ ಜನತೆಗೆ ಹಾಲು ಕುಡಿದಷ್ಟು ಸಂತೋಷವಾಯಿತು. 'ಮೆರೀತಿದ್ದ ಸರಿಯಾಗ್ ಆಯ್ತು, ದೇವ್ರಿಗೂ ಗೊತ್ತಾತದೆ; ಯಾರ್ನ ಎಲ್ಲಿಕ್ಬೇಕು ಅಂತಾ.....' ಊರ ಬಾಯಲ್ಲಿ ದೇವರಿಗೆ ಥ್ಯಾಂಕ್ಸ್‌ಗಳು..

ಇದಾದ ಕೆಲ ತಿಂಗಳುಗಳ ನಂತರ ಊರಿನಲ್ಲಿ ಅಂಥಾದ್ದೇ ಇನ್ನೊಂದು ಘಟನೆ ನಡೆಯಿತು. ಆಗ ಕರಿಯನ ಸ್ಥಾನದಲ್ಲಿ ಅವನದೇ ವಯಸ್ಸಿನ 'ಉತ್ತಮ'ರ ಹುಡುಗನಿದ್ದ. ಅವನು ಉತ್ತಮರ ಹುಡುಗ ಅಷ್ಟೇ.. ನಮ್ಮ ಯಾರ ಕಣ್ಣುಗಳಲ್ಲಿಯೂ ಅವನು ಕರಿಯ ಸೃಷ್ಟಿಸಿದ್ದ ರೋಮಾಂಚನಗಳನ್ನು ಸೃಷ್ಟಿಸಿರಲಿಲ್ಲ. ಅವನು ಅಷ್ಟು ರೋಚಕ ವ್ಯಕ್ತಿಯೂ ಅಲ್ಲ. ಆದರೆ, ಕರಿಯ ಆಸ್ಪತ್ರೆಗೆ ಸೇರಿದಾಗ ಅವನ ಸಾವನ್ನು ಕನಸುತ್ತಿದ್ದ ಜನ 'ಉತ್ತಮ'ರ ಹುಡುಗ ಆಸ್ಪತ್ರೆಗೆ ಸೇರಿದಾಗ ಇಡೀ ಊರಿಗೇ ಆಪತ್ತು ಬಂದಂತೆ ರೋಧಿಸಿತು. ಆತ ಆಸ್ಪತ್ರೆಯಲ್ಲಿದ್ದ ಅಷ್ಟು ದಿನವೂ ಕ್ಯೂನಿಂತು ಹರಸಿತು. ಅವನಿಗೆ ಏನೂ ಆಗಲಿಲ್ಲ. ಕೆಲ ದಿನಗಳಲ್ಲೇ ಸರಿಯಾದ.

ಇದು ನನ್ನ ನೆನಪಿಗೆ ಬಂದಾಗಲೆಲ್ಲಾ, ನಾನು ಬದುಕುತ್ತಿರುವ ಸಮಾಜದ ರೂಪಕಗಳು

ಕರಿಯನಿಗೆ ಹಾಗಾದದ್ದು ಇಡೀ ಊರಿನ ಜನತೆಗೆ ಹಾಲು ಕುಡಿದಷ್ಟು ಸಂತೋಷವಾಯಿತು. 'ಮೆರೀತಿದ್ದ ಸರಿಯಾಗ್ ಆಯ್ತು. ದೇವ್ರಿಗೂ ಗೊತ್ತಾತದೆ; ಯಾರ್ನ ಎಲ್ಲಿಕ್ಬೇಕು ಅಂತಾ.....' ಊರ ಬಾಯಲ್ಲಿ ದೇವರಿಗೆ ಥ್ಯಾಂಕ್ಸ್‌ಗಳು..

ಇಷ್ಟು ಕ್ರೂರವಾಗಿರುತ್ತವಲ್ಲಾ ಎಂಬ ಭಾದೆ ಆವರಿಸುತ್ತದೆ.

ಕಳೆದ ಕೆಲ ತಿಂಗಳುಗಳ ಹಿಂದೆ ಬೆಂಗಳೂರಿನ ಕ್ರೈಸ್ಟ್ ಕಾಲೇಜಿನಲ್ಲಿ ನಡೆದ ಒಂದು ಸೆಮಿನಾರಿನಲ್ಲಿ ಚಿಕ್ಕಂದಿನಿಂದ ಚಳುವಳಿಯಲ್ಲಿ ಗುರುತಿಸಿಕೊಂಡಿರುವ ಪೀರ್‌ಬಾಷಾ ಹೊಸ ತಲೆಮಾರಿನ ಕವಯಿತ್ರಿಯೊಬ್ಬರ ಕಾವ್ಯ ರಚನೆ ಬಗ್ಗೆ ಮಾತನಾಡುವಾಗ ಆಕೆಯ ಕವಿತೆಯೊಂದರಲ್ಲಿ ಬರುವ 'ದಿವಂಗತ ಕವಿ' ಎಂಬ ಸಿದ್ದಲಿಂಗಯ್ಯನವರ ಬಗೆಗಿನ ಸಾಲೊಂದನ್ನು ಉದ್ಧರಿಸಿದರು. ಚರ್ಚೆಯ ವೇಳೆಯಲ್ಲಿ ಸಿದ್ದಲಿಂಗಯ್ಯನವರ ವಿದ್ಯಾರ್ಥಿಯಾಗಿದ್ದು, ಅವರ ಒಂದು ತರಗತಿಯನ್ನೂ ಕೇಳದ ಒಬ್ಬರು ಬಾಷಾರ ಮಾತಿಗೆ ಆಕ್ಷೇಪವೆತ್ತಿದರು. ಅವರೊಂದಿಗೆ ಸೇರಿಕೊಂಡ ಕೆಲ ಸಾಹಿತ್ಯದ ಪಂಡಿತರು ಬಾಷಾ ದೊಡ್ಡ ತಪ್ಪು ಮಾಡಿದರೇನೋ ಎಂಬಂತೆ ಲೇವಡಿ ಮಾಡತೊಡಗಿದರು. ಎನ್. ಕೆ.ಹನುಮಂತಯ್ಯರ ಮಾತಿನಿಂದ ಎಲ್ಲರೂ ಸುಮ್ಮನಾದರು.

ಬಾಷಾ ಉಲ್ಲೇಖಿಸಿದ ಕವಯಿತ್ರಿಯ ಸಾಲು 'ಸಿದ್ದಲಿಂಗಯ್ಯ ಏನೂ ಬರೆಯುತ್ತಿಲ್ಲ.. ಆ ಮೂಲಕ ಅವರು ದಸಂಸ ಮತ್ತು ದಲಿತ ಸಮುದಾಯ ಕೊಟ್ಟ ಸ್ಥಾನ ಮಾನವನ್ನಷ್ಟೇ ಬಳಸಿಕೊಂಡು, ನಿಜಾರ್ಥದಲ್ಲಿ ಸಮುದಾಯ, ಚಳುವಳಿಗಳಿಗೆ ವಿಮುಖರಾಗಿದ್ದಾರೆ...' ಎಂಬ ತಿರುಳುಳ್ಳದ್ದು. ಅದನ್ನು ವಿರೋಧಿಸಿದ ಕಿ.ರಂ. ಥರದ ಸಾಹಿತ್ಯಕ ದಿಗ್ಗಜರ ವಾದ 'ಸಿದ್ದಲಿಂಗಯ್ಯ, ದೇವನೂರು ಅಂಥವರು ಅವರ ಹಿಂದಿನ ಬರವಣಿಗೆಗಳಿಂದಲೇ ಸಾಕಷ್ಟು ಸಾಧಿಸಿದ್ದಾರೆ, ಓದುಗರಿಗೆ ಸಾಹಿತಿಯೊಬ್ಬರ ಸಾಹಿತ್ಯ ರಚನೆ ಮಾತ್ರ ಮುಖ್ಯವೇ ಹೊರತು, ಅವರ ವೈಯಕ್ತಿಕ ಬದುಕಲ್ಲ...' ಈ ವಾದ ಕೇವಲ ಸಾಹಿತ್ಯಕ ನೆಲೆಯಿಂದಷ್ಟೇ ಹುಟ್ಟಿರುವಂಥದ್ದು. ಆದರೆ, ಪೀರ್‌ಬಾಷಾ ಮತ್ತು ಅವರು ಉಲ್ಲೇಖಿಸಿದ ಕವಯಿತ್ರಿಯ ಪ್ರಶ್ನೆಗಳು ಕೇವಲ ಸಾಹಿತ್ಯ ಕ್ಷೇತ್ರಕ್ಕೆ ಸಂಬಂಧಪಟ್ಟವಲ್ಲ ಎಂಬುದು ಕಿರಂ ಥರದ ಸಾಹಿತ್ಯ ಜಿಜ್ಞಾಸುಗಳಿಗೆ ಅರಿಯದ ಸಂಗತಿಯೇನಲ್ಲ.

ಇದನ್ನು ಹೇಳುವ ಮೂಲಕ ನಾನು ಮೇಲಿನ 'ಕರಿಯ ಕತೆ'ಗೆ ಹೇಗೆ ಕನೆಕ್ಟ್ ಮಾಡಬೇಕೋ ತಿಳಿಯುತ್ತಿಲ್ಲ. ಆದರೆ, ಸಿದ್ಧಲಿಂಗಯ್ಯ ಮತ್ತು ದೇವನೂರರಂಥವರ ಬಗ್ಗೆ ಪೀರ್‌ಬಾಷಾರ ರೀತಿಯಲ್ಲೇ ಮಾತನಾಡುವ ಜನರಿದ್ದಾರೆ. ಅವರಿಗೆ, ಸಾಹಿತ್ಯ, ಚಳುವಳಿ ಯಾವುದೂ ಮುಖ್ಯವಲ್ಲ. ಆದರೆ, ಅವುಗಳ ಹೆಸರಿನಲ್ಲೇ ಮಾನಸಿಕ ವಿಕಾರಗಳನ್ನು ಕಕ್ಕಿಕೊಳ್ಳುವ ಜಾತಿಗೆ ಸೇರಿದವರು. ಇಂಥವರು ಇಷ್ಟಪಡುವ 'ದೊಡ್ಡ ದೊಡ್ಡ ಸಾಹಿತಿಗಳು' ಕಳೆದ ಕೆಲವು ದಶಕಗಳಿಂದ ಉಪಯುಕ್ತವಾದ ಒಂದು ಸಾಲನ್ನು ಬರೆಯದಿದ್ದರೂ, ಅವರ ಸಾಹಿತ್ಯಕ ಸಾಹಸಗಳನ್ನು ಬ್ಲಾಗ್‌ಗಟ್ಟಲೆ ಕೊಂಡಾಡುವಂತೆಯೇ, 'ಎಲ್ರೀ ಇದೆ ದಲಿತ– ಬಂಡಾಯ...? ಯಾರ್‍ರೀ ಇದ್ದಾರೆ ಬರೀಲಿಕ್ಕೆ...?' ಎಂದು ವರಲುತ್ತಾರೆ. 'ಏನಾದ್ರೂ ಬರೀತಿದ್ದೀರಾ ಸಾರ್..?' ಅಂದ್ರೆ ಕೈಯಲ್ಲಿ ಬೀಡಿ ಹಿಡಿದುಕೊಂಡು 'ನಮ್ಮ ತೋಟದಲ್ಲಿ ಈ ಸಲ ಒಳ್ಳೆ ಬೆಳೆ ಬಂದಿದೆ ಅದರ ಬಗ್ಗೆ ಮಾತಾಡೋಣ' ಎಂದು ಈ ಕಾಲದ ತಲ್ಲಣಗಳಿಗೆ ತಣ್ಣಗೆ ರೂಪಕಗಳನ್ನು ಸೃಷ್ಟಿಸುವ ಮಹಾದೇವ, ಸಮಾಜದ ಹುಣ್ಣುಗಳಿಗೆ ತಳ ಸಮುದಾಯದ ಬೇರುಗಳಲ್ಲಿ ಮುಲಾಮು ಹುಡುಕುತ್ತಿರುವ ಕೆ.ರಾಮಯ್ಯನಂಥವರು ಇಂಥವರಿಗೆ ಕಾಣಿಸುವುದಿಲ್ಲ.

ನಿಲ್ಲಿಸುತ್ತೇನೆ... ಅದ್ಯಾಕೋ ನಮ್ಮೂರ ಕರಿಯನ ಕತೆ ಮತ್ತೆ ನೆನಪಾಗುತ್ತಿದೆ.

●



ಜಾನಪದದ ನಿಜದ ಸೆಲೆ ಪಾಶ್ಚಾತ್ಯದ ಸಿದ್ಧಾಂತಗಳಲ್ಲಿ

ಜಾನಪದ ಎಂದಾಕ್ಷಣ ಎಷ್ಟೋ ಜನರ ಅರಿವಿಗೆ ಬಾರದ ಪರಿಕಲ್ಪನೆಗಳೇ ಹೆಚ್ಚು. ಈಗಲೂ ಜನಪದವನ್ನು ಹಾಡು, ಹಸೆ, ಕುಣಿತ, ನಾಟಕಗಳೆಂದೇ ಹೇಳುವ ರೂಢಿ ಇದೆ. ಜಾನಪದ ಅಧ್ಯಯನದ ಆಳ- ಅಗಲ: ಎತ್ತರ ಬಿತ್ತರಗಳನ್ನು ನಮ್ಮ ಅನನ್ಯ ಸಂಸ್ಕೃತಿಯ ಬೆಳಕಿನಲ್ಲಿ ಇನ್ನಷ್ಟು ತಿಳಿಯುವ, ಅಧ್ಯಯನವನ್ನು ವಿಸ್ತರಿಸುವ, ಸ್ಪಷ್ಟಪಡಿಸುವ ಅಗತ್ಯತೆಯಿದೆ.

ಜಾನಪದ ಅಧ್ಯಯನದ ಇತಿಹಾಸ ದಿಢೀರನೇ ನೇರವಾಗಿ ಸಮಾಜಕ್ಕೆ ತಿಳಿಯುವಂಥಾದ್ದಲ್ಲ. ಅದರ ಹಿಂದೆ ಕಟ್ಟುನಿಟ್ಟಾದ, ಶಿಸ್ತುಬದ್ಧ ಅಧ್ಯಯನದ ಪರಿಶ್ರಮವಿದೆ. ಆ ಶ್ರಮದ ಹಿಂದಿನ ಪರಿಳಿತ ಮಿಡಿತದ ಮುತ್ತು ರತ್ನಗಳೇ ಅನಕ್ಷರಸ್ಥ ಸಮುದಾಯ. ಅವರೇ ಆ ಸಮುದಾಯದ ಸಂಸ್ಕೃತಿಗೆ ಉಸಿರಾದವರು ಎಂದರೆ ತಪ್ಪಾಗಲಾರದು. ಆ ಉಸಿರಿಗೂ ಒಂದು ಕಲೆ- ನೆಲೆ- ಬೆಲೆ ಇದೆ ಎಂದು ಗುರುತಿಸಿಕೊಟ್ಟವರು ಅನಕ್ಷರಸ್ಥರು.

ಈ ಈರ್ವರ ಸಮಾಗಮದ ಗಾಲಿಯಿಂದಲೇ 'ಜನಪದದ ತೇರು' ಇಲ್ಲಿಯವರೆಗೂ ಸಾಗಿ ಬಂದಿದೆ. ಅರಂಭ ಕಾಲದಲ್ಲಿ ಪಳೆಯುಳಿಕೆಗಳ ಅಧ್ಯಯನ ರೂಪದಲ್ಲಿದ್ದ ಜಾನಪದ ಆನಂತರ ದಿನಗಳಲ್ಲಿ ಕೃಷಿ ಸಂಬಂಧವಾದ ಮೌಖಿಕ ಅಭಿವ್ಯಕ್ತಿ ಜಾನಪದ ಅಧ್ಯಯನದ ತೆಕ್ಕೆಗೆ ಒಳಗೊಂಡಂತೆಲ್ಲಾ, ಜನಪದ ತನ್ನ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಾ ಸಾಗಿತು.

ಇಂದು, ಜನಪದ ಮಾನವನ ಬದುಕಿನ ವೈವಿಧ್ಯಮಯ ಅಸ್ತಿತ್ವದಲ್ಲಿ ತಾನೂ ಒಂದು ಅವಿಭಾಜ್ಯ ಅಂಗವೆಂಬುದನ್ನು

ಜಾನಪದ ಕಾಲ ಕಳೆದಂತೆಲ್ಲಾ ಹೊಸಹೊಸ ಅವಿಷ್ಕಾರಗಳನ್ನು ತನ್ನೊಳಗೆ ತುಂಬಿಕೊಳ್ಳುತ್ತಿದ್ದರೂ, ಒಂದೆಡೆ ಜಾನಪದದ ನಿಜದ ಸೆಲೆ ಪಾಶ್ಚಾತ್ಯರು ರಚಿಸಿದ ಸಿದ್ಧಾಂತದೊಳಗಿದೆ ಎಂಬ ಸಂಗತಿಯನ್ನು ವಿಚಾರಮಾಡಬೇಕಾಗಿದೆ.

ಸಾಬೀತುಪಡಿಸಿದೆ. ಮಾನವಶಾಸ್ತ್ರ, ಸಮಾಜ ಶಾಸ್ತ್ರ, ಇತಿಹಾಸ, ಭಾಷಾ ವಿಜ್ಞಾನ, ಸಾಹಿತ್ಯ ಮುಂತಾದ ಮಾನವಿಕಗಳ ಮತ್ತು ಸಮಾಜ ವಿಜ್ಞಾನಗಳಲ್ಲಿ ರೂಪುಗೊಂಡ ಸಿದ್ಧಾಂತಗಳನ್ನು ಜಾನಪದ ಅಧ್ಯಯನ ಅರಗಿಸಿಕೊಂಡಿದೆ.

ಇತ್ತೀಚೆಗೆ ದೇಸೀತನದ ಹೊಸ ನೆಲಗಟ್ಟಿನಡಿಯಲ್ಲಿ ಜನಪದದ ಅಧ್ಯಯನ ಗಣಿತವಿಜ್ಞಾನ. ಗಣಕವಿಜ್ಞಾನ. ಆಹಾರ ಮತ್ತು ತಂತ್ರಜ್ಞಾನ, ಪರಿಸರವಿಜ್ಞಾನ, ಪ್ರಾಣಿವಿಜ್ಞಾನ ಮುಂತಾದ ಅಧ್ಯಯನ ವಿಭಾಗಗಳೆಡೆಗೆ ಜಾನಪದ ಮುಖ ಮಾಡಿ ನಿಂತಿದೆ.

ಜಾನಪದ ಕಾಲ ಕಳೆದಂತೆಲ್ಲಾ ಹೊಸಹೊಸ ಅವಿಷ್ಕಾರಗಳನ್ನು ತನ್ನೊಳಗೆ ತುಂಬಿಕೊಳ್ಳುತ್ತಿದ್ದರೂ, ಒಂದೆಡೆ ಜಾನಪದದ ನಿಜದ ಸೆಲೆ ಪಾಶ್ಚಾತ್ಯರು ರಚಿಸಿದ ಸಿದ್ಧಾಂತದೊಳಗಿದೆ ಎಂಬ ಸಂಗತಿಯನ್ನು ವಿಚಾರಮಾಡಬೇಕಾಗಿದೆ.

ಜಾನಪದ ಅಧ್ಯಯನ ಕ್ಷೇತ್ರದೊಳಗೆ 'ಕಬ್ಬಿಣದ ಕಡಲೆ' ಎನಿಸಿಕೊಂಡಿರುವುದು ಯೂರೋ-ಅಮೇರಿಕನ್ ಪಾಶ್ಚಾತ್ಯದ ಜಾನಪದ ಸಿದ್ಧಾಂತಗಳು ಹಾಗೂ ಆ ಸಿದ್ಧಾಂತಗಳ ರೂಪವಾಗಿ ಹೊರ ತೆರೆದಿಟ್ಟ ಜನಪದ ಕಥಾವರ್ಗದ ಕ್ರಮ ಹಾಗೂ ಮಾದರಿಗಳು. ಕನ್ನಡ ಜನಪದ ವಿದ್ಯಾರ್ಥಿಗಳಿಗೆ, ಆ ಕ್ಷೇತ್ರದ ಆಸಕ್ತರೆಲ್ಲರಿಗೂ ಸಂಕೀರ್ಣವಲ್ಲದ ಪಾರದರ್ಶಕ ಶೈಲಿಯಲ್ಲಿ ಪರಾಮರ್ಶನ ಕೈಗೊಂಡು ಈ ಕಬ್ಬಿಣದ ಕಡಲೆಯನ್ನು ಕರಗಿಸುವಲ್ಲಿ, ಅಖಂಡ ಜನಪದವನ್ನು ಸಂಪೂರ್ಣವಾಗಿ ಪರಿಚಯಿಸುವಲ್ಲಿ, ಓದುಗರಿಗೆ ತಿಳುವಳಿಕೆ ಮೂಡಿಸುವಲ್ಲಿ ಕನ್ನಡದ ನಿದರ್ಶನಗಳಿಗೆ ಅನ್ವಯಿಸಿ ಅಧ್ಯಯನ ಮಾಡುವಲ್ಲಿ ಪ್ರೊ. ಅಂಬಳಿಕೆ ಹಿರಿಯಣ್ಣ ಅವರ ಕನ್ನಡ ಜಾನಪದ ಕೃತಿಗಳು ನೆರವಾಗುತ್ತಿವೆ. ಅಂತರ್‌ರಾಷ್ಟ್ರೀಯ ವಿಚಾರವೆನಿಸಿರುವ ಪಾಶ್ಚಾತ್ಯರ ಸಿದ್ಧಾಂತದ ಒಲವು ನಿಲುವುಗಳನ್ನೆಲ್ಲಾ ಓದುಗರ ಮುಂದೆ ಸರಳವಾಗಿ ತೆರೆದಿಟ್ಟ ಕನ್ನಡ ಜನಪದ ಕೃತಿಗಳ ರಚನಕಾರರು ಅವರು.

ಅವರು ರಚಿಸಿದ ಹಲವಾರು ಕೃತಿಗಳ ಪೈಕಿ ಪಾಶ್ಚಾತ್ಯರ ಒಲವು ನಿಲುವುಗಳಿಗೆ ಸವಾಲೆನಿಸಿ ಕೊಂಡ ಕೃತಿಗಳು- ಸೈದ್ಧಾಂತಿಕ ಜಾನಪದ, ಜನಪದ ಸಾಮೂಹಿತ, ಜಾನಪದ ವಿವಕ್ಷೆ, ಜಾನಪದ ಸಿದ್ಧಾಂತಗಳು ಹಾಗೂ ವಿಧಾನಗಳು- ಹೀಗೆ ಅವುಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಆದರೆ 'ಜಾನಪದ ರಾಚನಿಕ ಅಧ್ಯಯನ' ಕೃತಿ ಸರಳ ಸ್ವರೂಪದಲ್ಲಿ ಮತ್ತಷ್ಟು ವಿಭಿನ್ನ, ಹೊಸ ವಿಚಾರಗಳನ್ನು ತೆರೆದಿಟ್ಟಿದೆ. ವಿ.ಜೆ.ಪ್ರಾಪ್, ಕ್ಲಾಡ್ ಲೆವಿಸ್ಟ್ರಾಸ್, ಹಾಗೂ ಅಲನ್ ಡಂಡಸ್‌ರವರಂಥವರ ವಿಚಾರಧಾರೆಗಳನ್ನು ಕನ್ನಡ ಜಾನಪದ ಓದುಗರಿಗೆ ತಿಳಿಸಿಕೊಟ್ಟಿದ್ದಾರೆ.

ಜನಪದ ಸಾಹಿತ್ಯ ರೂಪಗಳಾದ ಗದ್ಯ ಕಥನಗಳ ಬಗೆಗೆ, ಅವುಗಳ ಅಧ್ಯಯನದ ಬಗ್ಗೆ ತೀವ್ರ ಆಸಕ್ತಿ ತಳೆದ ಜನಪದ ವಿದ್ವಾಂಸರು ನಮ್ಮ ನಡುವೆ ಹಲವರು ಇದ್ದಾರೆ. ಆದರೆ, ವ್ಲಜಿಮೀರ್ ಜೆ. ಪ್ರಾಪ್ ಅವರಂತೆ ಜನಪದ ಕಥೆಗಳ ರೂಪ ರಚನಾತ್ಮಕತೆಯನ್ನು ಅದರ ಒಟ್ಟು ರಚನೆಯಲ್ಲಿ ತೋರಿ ಬರುವ ವಿಭಿನ್ನ ಕಾಲಿಕ ಅಂಶಗಳನ್ನು, ಅಂಥ ಕತೆಗಳಲ್ಲಿ ಬರುವ ಮಾದರಿ ಮತ್ತು ಆಶಯಗಳ ಪರಿಕಲ್ಪನೆಯನ್ನು ಸೂಕ್ಷ್ಮವಾಗಿ ಆಲೋಚಿಸಿದವರಿಲ್ಲ. ಆರ್ನೆ ಅಂಟಿ. ಸ್ಟಿಥ್ ಥಾಂಸನ್ ಅವರ ವರ್ಗೀಕರಣ ಕ್ರಮವನ್ನು ಪಲ್ಲಟಗೊಳಿಸಲಿಕ್ಕಾಗಿಯೇ ಪ್ರಾಪ್‌ರವರು ರಷ್ಯನ್ ಕಿನ್ನರ ಕಥೆಗಳನ್ನು ಅಭ್ಯಸಿಸಿ 'morphology of the folk tale' ಎಂಬ ಕೃತಿ ರಚಿಸಿ ಜನಪದ ಗದ್ಯ ಕಥನಗಳ ಹಾದಿಯ ಪ್ರತಿ ಸೂಕ್ಷ್ಮತೆಗಳನ್ನು ಪರಿಗಣಿಸಿ ಜನಪದ ಇತಿಹಾಸಕ್ಕೆ ಒಂದು ಹೊಸ ತಿರುವನ್ನು ಒದಗಿಸಿಕೊಟ್ಟರು. ವಿ.ಜೆ. ಪ್ರಾಪ್‌ರವರ ಈ

ಮಾದರಿಯ ರಚನಾತತ್ವ ಜನಪದ ಕ್ಷೇತ್ರದಲ್ಲೇ ಮೈಲಿಗಲ್ಲಾಗಿ ನಿಂತಿದೆ. ಪ್ರಾಪ್ ಅವರ ಈ ರಚನಾತತ್ವದ ಆಕಾರ ಜನಪದದ ಹೊರಗೆ ಮತ್ತು ಒಳಗಿನ ನೆಲೆಗೆ ಸಂದಿದ ವಿಶಿಷ್ಟವಾದ ಕೊಡುಗೆಯಾಗಿದೆ.

ಇಂಥ ರಚನಾತತ್ವವನ್ನು ಬೇರೆಬೇರೆ ರೂಪು-ರೇಷೆಗಳಿಗೆ ಹೋಲಿಸಿ, ವಿಶ್ಲೇಷಿಸಿ, ಸ್ಪಷ್ಟ ಪರಿಕಲ್ಪನೆಯನ್ನು ಕನ್ನಡಿಗನಿಗೆ ಒದಗಿಸಲಿಕ್ಕಾಗಿ ಒಂದು ಸಮತೋಲನ ಬರವಣಿಗೆಯ ಮೂಲಕ ಇಂದಿನ ಪ್ರಸ್ತುತತೆಗೆ ಸ್ಪಂದಿಸುವ ರೀತಿಯಲ್ಲಿ ಪ್ರಾಪ್‌ರವರ ರಾಚನಿಕ ವಿಧಾನವನ್ನು ಅವರ ಮಾದರಿಯನ್ನು ಅಂಬಳಿಕೆ ಹಿರಿಯಣ್ಣನವರು ರೂಪ ರಚನಾತ್ಮಕವಾಗಿ ಆ ಕಾಲಕ್ಕೆ ಅನ್ವಯವಾಗುವ ರೀತಿಯಲ್ಲಿ ಸ್ಥಳೀಯ ಕಾವ್ಯವಾದ 'ಮಲೆಮಾದೇಶ್ವರ ಕಾವ್ಯ'ದ ಕೆಲವು ಕಥಾನಕಗಳನ್ನು ಹಾಗೂ ಜನಪದ ರಾಮಾಯಣದ ಕೆಲವು ಭಾಗಗಳನ್ನು ಪ್ರಾಪ್‌ರವರ ಮಾದರಿಯಲ್ಲಿ ಜೋಡಿಸಿ ವಿಶ್ಲೇಷಿಸಿದ್ದಾರೆ.


ಒಟ್ಟಿನಲ್ಲಿ ಯೂರೋ ಅಮೇರಿಕನ್ ವಿದ್ವಾಂಸರ ದೃಷ್ಟಿ ಧೋರಣೆಗಳನ್ನು ಬದಿಗಿರಿಸಿ, ದೇಶೀಯ ಐಸಿರಿಯನ್ನು ಎಲ್ಲೆಡೆ ಹೊತ್ತೊಯ್ಯಬೇಕೆಂಬ ಸಂಕಥನಗಳ ಧ್ವನಿ, ಚರ್ಚೆ, ಗೊಂದಲ ಜನಪದದೊಳಗಿದೆ. ಆದರೆ, ಸಂಸ್ಕೃತಿ ಅಧ್ಯಯನವನ್ನು ಗುರಿಯಾಗಿಟ್ಟುಕೊಂಡು ಜನಪದ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿ ಅಧ್ಯಯನಕ್ಕೆ ತೊಡಗಿಕೊಳ್ಳುವವರೆಲ್ಲಾ ಪಾಶ್ಚಾತ್ಯರ ಸಾಮಗ್ರಿಗಳೆಡೆಗೆ ಕಣ್ಣರಳಿಸಿಯೇ ನಿಲ್ಲ ಬೇಕಾಗುತ್ತದೆ. ಇಂಥ ಸಾಮಗ್ರಿ ಸ್ವರೂಪಕ್ಕೆ ಹೊಸ ತಿರುವು, ಹೊಸ ಪರಿವರ್ತನ ನೀಡಿದ ಕನ್ನಡ ಜಾನಪದ ವಿದ್ವಾಂಸರಲ್ಲಿ ಹಿರಿಯಣ್ಣನವರು ಉಲ್ಲೇಖಾರ್ಹರು.

ಕನ್ನಡ ಜನಪದ ಕ್ಷೇತ್ರದೊಳಗೆ ಪಾಶ್ಚಾತ್ಯರ ಚಿಂತನೆಗಳು ಚಲಾವಣೆಯಲ್ಲಿ ನಿಂತಿದ್ದರೆ, ಅದಕ್ಕೆ ಅಂಬಳಿಕೆಯವರು ಬಳಸಿಕೊಂಡ ಜಾನಪದ ಪರಿಭಾಷೆ. ಆ ಚಿಂತನೆಗಳನ್ನು ಮುನ್ನಡೆಸಿದ ವಿಧಿವಿಧಾನಗಳು ಅಪೂರ್ವ ಎನಿಸಿವೆ.

ಈ ಮೇಲಿನ ಎಲ್ಲ ನಿಲುವುಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಜನಪದದ ನಿಜದ ಸೆಲೆ ಇನ್ನೂ ಸಿದ್ಧಾಂತದೊಳಗಿದೆ ಎಂಬ ವಿಚಾರವನ್ನು ನಾವು ಒಪ್ಪಿಕೊಳ್ಳಲೇಬೇಕಾಗುತ್ತದೆ.

ಯು.ಜಿ.ಸಿ ಒಳಗೊಂಡಂತಹ ಹಲವಾರು ಸ್ಪರ್ಧಾತ್ಮಕ ಹಾಗೂ ಸಾಮಾನ್ಯ ಪರೀಕ್ಷೆಗಳಿಗೆ ಮತ್ತು ಸಂದರ್ಶನಗಳಿಗೆ ಈ 'ಫೋಕ್‌ಲೋರಿಸ್ಟಿಕ್ ಥಿಯರಿ' ಹಾಗೂ ಮೆಥಡಾಲಜೀಸ್‌ಗಳ ರೂಪದಲ್ಲಿ ಪ್ರಶ್ನೆ ಪತ್ರಿಕೆ ಮಾದರಿಗಳಾಗಿ ಆಸಕ್ತ ವಿದಾರ್ಥಿಗಳಿಗೆ ಎದುರಾಗಿವೆ. ಆಯಾಕ್ಷೇತ್ರದ ಆಸಕ್ತ ಅಧ್ಯಯನಕಾರನಿಗೆ ಪಾಶ್ಚಾತ್ಯರ ಸಮಗ್ರ ಪರಿಚಯವನ್ನು ಕನ್ನಡ ಜನಪದ ಓದುಗರಿಗೆ ಮನದಟ್ಟು ಮಾಡುವಲ್ಲಿ ಹಿರಿಯಣ್ಣನವರ ಕನ್ನಡ ಅನುವಾದಿತ ಕೃತಿಗಳು ನೆರವಾಗಿರುವುದು ಸಂತಸದ ವಿಷಯ.

ಅದೇನೇ ಇರಲಿ, ಇಂಥ ವಿಸ್ತೃತ ಅಧ್ಯಯನವನ್ನೊಳಗೊಂಡಿರುವ ಜನಪದಕ್ಕೆ ತನ್ನದೆ ಆದ ವಿಶ್ವವಿದ್ಯಾನಿಲಯದ ಅವಶ್ಯಕತೆಯಿದೆ. ಪ್ರಥಮ ಬಾರಿಗೆ ಜಾನಪದ ಹಾಗೂ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಗೊ.ರು. ಚನ್ನಬಸಪ್ಪನವರು ಹಾಗೂ ಅವರ ಸದಸ್ಯ ಮಂಡಳಿ ಜಾನಪದ ವಿಶ್ವವಿದ್ಯಾನಿಲಯ ಆಗಲೇಬೇಕೆಂಬ ಧ್ವನಿಯನ್ನು ಸರ್ಕಾರದ ಮುಂದೆ ಪ್ರಸ್ತುತ ಪಡಿಸಿದೆ. ಆಗ್ರಹ ಪೂರ್ವಕವಾಗಿ ಒತ್ತಾಯಿಸಿದಾರೆ. ಈ ಧ್ವನಿ ಸ್ವಾಗತಾರ್ಹವಾದುದು. ಜಾನಪದ ಕಲಾವಿದರ ಸ್ಥಿತಿಯಷ್ಟೇ ಅಧೋಗತಿ ತಲುಪಿರುವ ಜಾನಪದ ವಿದ್ಯಾರ್ಥಿಗಳ ಭವಿಷ್ಯಕ್ಕೆ ಈ ಧ್ವನಿ ಕೋಲ್ಮಿಂಚಿನಂತೆ ಬೆಳಕು ಹೊಮ್ಮಿಸಿದೆ. ಈ ಧ್ವನಿ ಅಕಾಡೆಮಿಯ ಧ್ವನಿಯಷ್ಟೇ ಅಲ್ಲ. ಇದು 'ಜಾನಪದಗಳ ಧ್ವನಿ' ಜಾನಪದ ಓದುತ್ತಿರುವ, ಜಾನಪದದ ನೆರಳಿಗೆ ತಲೆಯೊಡ್ಡಿರುವ ಪ್ರತಿಯೊಬ್ಬ ಜಾನಪದೀಗರ 'ಜಾಗೃತ ಧ್ವನಿ'.



ಎಂ. ಕನ್ನಿಕಾ
ಜಾನಪದ ಹಿರಿಯ ಸಂಶೋಧಕಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು

* ಮಾತೆ ಮಾದೇವಿ ವಚನಕಾರ್ತಿ ಅಕ್ಕಮಹಾದೇವಿಯ ಅಂಕಿತವನ್ನು ಬದಲಾಯಿಸಿ ಬರೆದಿದ್ದಾರೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯ?

– ಆ ರೀತಿಯ ವಚನಾಂಕಿತಗಳನ್ನು ಬದಲಾಯಿಸುವುದು ಏಕಪಕ್ಷೀಯವಾದ ನಿಲುವು ಆಗಿರುತ್ತದೆ. ಮತ್ತು ಅದು ಒಂದು ರೀತಿಯಲ್ಲಿ ಸಾಹಿತ್ಯ ಪರಂಪರೆಗೆ ನಾವು ಮಾಡುವಂತಹ ಅಪಚಾರ. ಏಕೆಂದರೆ ವಚನಾಂಕಿತ ಎನ್ನುವುದು ಆಥರ್‌ಶಿಪ್. ಅದು ಯಾರು ಬೇಕಾದರೂ ತನ್ನ ಆಶಯಗಳನ್ನು ತನ್ನ ಕಾವ್ಯನಾಮದ ಮೂಲಕ ಹೇಳಿರಬಹುದು. ವಚನಾಂಕಿತದ ಮೂಲಕ ಹೇಳಿರಬಹುದು, ತನ್ನದೇ ಹೆಸರಲ್ಲಿ ಹೇಳಿರಬಹುದು. ಅದು ಹಾಗೇ ಇರಬಾರದು. ಹೀಗೆ ಪ್ರೆಸೆಂಟ್ ಮಾಡ್ತೀನಿ ಅಂತ ಹೇಳಿದ್ರೆ ಸುಳ್ಳು. ಇವರು ಮಾಡುವಾಗ ಶ್ರೀವಿಜಯ ಬರೆದಿರುವ ಅಂತ ಹಾಕ್ತೀವಿ. ಆ ದ್ವಂದ್ವದ ಬಗ್ಗೆ ಚರ್ಚೆ ಎತ್ತಬಹುದು. ಸ್ವತಃ ನಿರಾಕಾರ ದೇವರ ಪೂಜಕಿಯಾಗಿದ್ದ ಅಥವಾ ಆ ಸಿದ್ಧಾಂತವಾಗಿ ಹೊಂದಿದ್ದ ಅಕ್ಕಮಹಾದೇವಿ ತನ್ನ ವಚನಾಂಕಿತವಾಗಿ ಯಾವುದೋ ಒಂದು ಸ್ಥಾವರವನ್ನು ಇಟ್ಟುಕೊಂಡಿದ್ದಳಲ್ಲ ಅಂತ ನಾವು ಚರ್ಚೆ ಮಾಡಬಹುದೇ ಹೊರತು, ಅಕೆ ರಚಿಸಿರುವ ವಚನಗಳನ್ನು ನಾವೂ ಏಕಪಕ್ಷೀಯವಾಗಿ ಹೇಗೆ ಬದಲಾಯಿಸುವುದಕ್ಕೆ ಸಾಧ್ಯವಾಗುತ್ತದೆ. ಅದೇ ಆಶಯಾತ್ಮಕವಾಗಿಯಾಗಿರಲಿ, ಹೇಗೇ ಆಗಿರಲಿ ಅದು ತಪ್ಪು. ಆ ರೀತಿಯ ಸ್ವಾತಂತ್ರ್ಯವನ್ನು ನಾವು ಬಳಸುವುದಕ್ಕೆ ಆಗಲ್ಲ. ಒಂದು ಪಠ್ಯಕ್ಕೆ ಅದರ ಏರುಪೇರುಗಳು ಏನಿದ್ದವೋ ಅವು ಅದರ ಕಾಲಘಟ್ಟವನ್ನು ಬಿಂಬಿಸುತ್ತದೆ. ಹಾಗೇ ನಾವು

ಸಂದರ್ಶನ – 3

ಸಾಂಸ್ಕೃತಿಕ ಚಳುವಳಿಯೇ ವಿಸ್ಮೃತಿಯಿಂದ ಹೊರಗೆ ಬರುವ ಪ್ರಯತ್ನ

ಯಾರೊ ಬೇರೆಯವರು ಆಮೇಲೆ ಸೇರಿಸಿದರೆ ಇದಕ್ಕೆ ಸೂಕ್ಷ್ಮವಾದ ಸಂಶೋಧನೆ ಮತ್ತು ವಿಶ್ಲೇಷಣೆಯನ್ನು ಮಂಡಿಸಬೇಕು. ಅದನ್ನು ಚರ್ಚೆಗೆ ಬಿಡಬೇಕು. ಬಿಟ್ಟು ಅದನ್ನು ಸಂಸ್ಕೃತಿಯ ವಲಯ ಮತ್ತೆ ಸಾಹಿತ್ಯವಲಯ ಹೇಗೆ ಚರ್ಚೆಯಾಗಿ ಸ್ವೀಕರಿಸುತ್ತೆ ಏನೇನು ಮಾಡುತ್ತೆ ಇದರ ಆಧಾರದ ಮೇಲೆ ಕಡೆಗೆ ಒಂದು ನಿಲುವಿಗೆ ಬಂದಾಗ ಅದರಿಂದ ಇದು ರುಜುವಾತು ಆದ ಸಂಶೋಧನೆ ಆಗುತ್ತೆ. ಅದರಿಂದ ಈ ಅಂಕಿತ ಅನ್ನುವುದೇ ಪ್ರಕ್ಷಿಪ್ತ. ಏಕೆಂದರೆ ಕೆಲವು ಸಲ ಹಾಗೆ ಇರುತ್ತೆ 'ಆಥರ್ ಶಿಪ್' ಬಗ್ಗೆ ಚರ್ಚೆಗಳಿರುತ್ತವೆ. ಕವಿರಾಜಮಾರ್ಗವನ್ನು ಬರೆದವನು ಶ್ರೀವಿಜಯನೇ ಇಲ್ಲ ನೃಪತುಂಗನೇ ಗೊತ್ತಿಲ್ಲ. ಅಕಸ್ಮಾತ್ ಈಗ ಒಂದು ಎಡಿಟೆಡ್ ಕಾಪಿಯಲ್ಲಿ ನೃಪತುಂಗ ಅಂತ ಹಾಕಿರುತ್ತೆ ಅಥವಾ ಶ್ರೀವಿಜಯ ಅಂತ ಏನಾದರೂ ಪ್ರೂ ಆಯ್ತು ಅಂದರೆ ನಾವು ಮುಂದಿನ ಸಲ ಪ್ರಿಂಟ್ ನೋಡಬೇಕು. ಇವರಿಗೆ ಬೇಕಿದ್ದರೆ ಹೊಸದಾಗಿ ಬರೆಯಬೇಕು ಅಷ್ಟೇ. ಇವರು ಸೂಕ್ತವಾದ ವಚನಾಂಕಿತವೋ ಸೂಕ್ತವಾದ ಆಶಯಗಳನ್ನು ಪ್ರತಿಬಿಂಬಿಸುವುದಕ್ಕೆ ಅದನ್ನು ಮಾಡದೆ ಅಕ್ಕಮಹಾದೇವಿ ವಚನಗಳ ಅಂಕಿತವನ್ನು ಮಾತೆಮಹಾದೇವಿ ಶುದ್ಧೀಕರಿಸುತ್ತಾರೆ ಅಂದರೆ ಯಾವುದು ಶುದ್ಧೀಕರಣ ಮಾಡುತ್ತಿರುವುದು ಸಾಹಿತ್ಯ ಸಂಗ್ರಹವಾಗಲಿ, ಸಂಪಾದನೆಯಾಗಲಿ ಅಲ್ಲ. ಅದರ ಅಶಯವನ್ನು ನಾನು ಶುದ್ಧೀಕರಿಸುತ್ತೇನೆ. ಅಂತ ಹೇಳಿದರೆ ಅದು ಸರಿಯಲ್ಲ. ಅಕ್ಕನ ವಚನಗಳಾಗಲೀ ಬಸವಣ್ಣನ ವಚನಗಳಾಗಲಿ ಬರೀ ಒಂದು ಜಾತಿಯ ಅಥವಾ ಒಂದು ಸಾಂಸ್ಕೃತಿಕ ಪಂಥದ ವಸ್ತುಗಳಾಗಿ ಉಳಿದಿಲ್ಲ. ಕನ್ನಡ ಸಾಹಿತ್ಯ ಪಂಥದ ಅವಿಭಾಜ್ಯ ಅಂಗವಾಗಿ ಬೆಳೆದಿದೆ. ಆದ್ದರಿಂದ ಆ ಸಾಹಿತ್ಯದ ವಾರಸುದಾರಿಕೆ ಇಡೀ ಕರ್ನಾಟಕದ ಎಲ್ಲಾ ಸಮುದಾಯಗಳಿಗೆ

ಇದೆ. ಧರ್ಮಸುಧಾರಕರಲ್ಲಿ ಹುಟ್ಟಿ ಬಂದಿರುವ ನೆಲೆಗಳು ಬಹಳ ಭಿನ್ನವಾಗಿರುತ್ತವೆ. ಅವರು ಪ್ರತಿನಿಧಿಸುವ ಪಂಗಡಗಳು ಎಲ್ಲ ಭಿನ್ನವಾಗಿವೆ. ಹೀಗಿರುವಾಗ ಇವರು ಹೇಗೆ ಸ್ವಾತಂತ್ರ್ಯವನ್ನು ವಹಿಸಿ ತಿದ್ದಿ ಮುದ್ರಿಸಿ ಬಿಡುತ್ತಾರೆ ಎಂಬುದೇ ಅಶ್ಚರ್ಯ. ಈಗ ಅನುದೇವಾ ಸಂಧರ್ಭದಲ್ಲಿ ನಾನು ಅದನ್ನು ಒಂದು ತಾತ್ವಿಕ ಪ್ರಶ್ನೆಯಾಗಿ ಮಂಡಿಸಿದ್ದೇನೆ. ನನಗೆ ಕಾಣಿಸುತ್ತಿರುವ ವಿಧಾನ ಇದು.

ಬಸವಣ್ಣ ಮೂಲದ ಹುಟ್ಟಿನಲ್ಲಿ ಈಗ ಕಟ್ಟಿಕೊಂಡಿರುವ ಕಥನಗಳ ಪ್ರಕಾರ ಬ್ರಾಹ್ಮಣ ಉಪನಯನ ನಂತರ ಜನಿವಾರ ಕಿತ್ತು ಹಾಕಿದ ಅಂತ ಹೇಳಿರುವುದು ಸೂಕ್ತ ಕಥನವಾಗಿಲ್ಲ. ಅದಕ್ಕೆ ಕಾರಣ ಏನೆಂದರೆ ಕಥನದೊಳಗಡೆ ಇರುವ ಬಿರುಕುಗಳು, ಅದರೊಳಗೆ ಹೊರಬಿಡುವ ಸುಳುಹುಗಳು, ಅದರಿಂದ ನಾನು ಇದನ್ನು ಪ್ರಜ್ಞಾವಿಮರ್ಶಕರು ಮತ್ತಷ್ಟು ಸಂಶೋಧನೆಗೆ ಒಳಪಡಿಸಬೇಕು, ಚರ್ಚೆ ಮಾಡಬೇಕು ಎಂಬುದು ನನ್ನ ಆಶಯ.

*** ಕರ್ನಾಟಕದಲ್ಲಿ ದಲಿತ ಚಳುವಳಿ ಮತ್ತು ಹೋರಾಟಗಳು ತನ್ನ ಬಿರುಸನ್ನು ಕಳೆದುಕೊಳ್ಳಲು ಕಾರಣ ಏನು?**

– ಬಹಳ ಮುಖ್ಯವಾಗಿ ದಲಿತ ಚಳುವಳಿ ಆರಂಭಗೊಂಡಾಗ ಅದು ಕೆಲವು ಕಾರ್ಯಸೂಚಿಯನ್ನು ಇಟ್ಟುಕೊಂಡಿತ್ತು. ಕಾರ್ಯಸೂಚಿಗಳು ಹಲವಾರು ಇತ್ತು ಮತ್ತು ಸಮಗ್ರವಾಗಿ ಕೂಡ ಇತ್ತು. ಆದರೆ ಬರುಬರುತ್ತಾ ಅಂದರೆ 10 ವರ್ಷಗಳಲ್ಲಿ ಉಳಿದ ಕಾರ್ಯಸೂಚಿಗಿಂತ ಪ್ರಧಾನವಾಗಿ ಲಭ್ಯ ಅವಕಾಶಗಳನ್ನು ದಕ್ಕಿಸಿಕೊಡುವ ಮಧ್ಯವರ್ತಿತನದ ಒಂದು ಕಾರ್ಯಸೂಚಿ ಇತ್ತಲ್ಲ ಅದೊಂದೇ ಪ್ರಧಾನವಾಗಿ ಮುಂಚೂಣಿಗೆ ಬಂದು ಬಿಟ್ಟಿತು. ಅಂದರೆ ಸರ್ಕಾರ ಕೆಲವು ಸವಲತ್ತುಗಳನ್ನು ಪ್ರಕಟಿಸಿತು. ಧ್ವನಿ ಇಲ್ಲದಿರುವ ದಲಿತ ಸಮುದಾಯಗಳಿಗೆ ದಕ್ಕಿಸಿ ಕೊಡುವುದಕ್ಕೆ ಕೆಲವು ಮುಖಂಡರು ಅಲ್ಲಲ್ಲಿಯೇ ಸ್ಥಳೀಯ ಕಾರ್ಯಚರಣೆಯನ್ನು ಶುರುಮಾಡಿದರು. ಅದೂ ಕೂಡ ಮುಖ್ಯವಾದ ಕೆಲಸವೇ ಆಗಿತ್ತು. ಅದರಲ್ಲಿ ಏನೂ ತಪ್ಪಿಲ್ಲ. ಅದು ಬಹಳ ದೊಡ್ಡ ಅಂಶ. ಏಕೆಂದರೆ ಲಭ್ಯವಿರುವ ಅವಕಾಶಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಮೂಲಕ ಸಮುದಾಯದ ಚೈತನ್ಯವನ್ನು ಜಾಸ್ತಿಮಾಡುವುದು. ಬಹಳ ಸಲ ಆ ರೀತಿಯ ಕಾರ್ಯಾಚರಣೆಗೆ ಇಳಿದ ದಲಿತ ನಾಯಕರಾದ ಕೆಲವರಿಗೆ ಒಟ್ಟಾರೆ ಚಳುವಳಿಯ ನಾಯಕತ್ವ ಹೊಂದಿರುವ ತ್ಯಾಗ, ಗುಣ ಅಥವಾ ಸಮುದಾಯಕ್ಕೆ ಒದಗಿಸಬಹುದಾದ ಸೌಲಭ್ಯಗಳನ್ನು ಒದಗಿಸಿಕೊಟ್ಟು ತಾನು ಅದಕ್ಕೆ ನಿಮಿತ್ತ ಮಾತ್ರವಾಗಿ ಉಳಿದುಕೊಳ್ಳಬೇಕಾಗಿರುವ ಒಂದು ಬಹಳ ದೂರದೃಷ್ಟಿಯ ನಾಯಕತ್ವ ಗುಣ ಕಳೆದು ಹೋಯಿತು. ಮಾಮೂಲಿ ಸಮಾಜದಲ್ಲಿ ಇದ್ದ ಮಧ್ಯವರ್ತಿಗಳು ಏನೇನೋ ಮಾಡುತ್ತಿದ್ದರು. ಸರ್ಕಾರಿ ಅವಕಾಶಗಳನ್ನು, ಸೌಲಭ್ಯಗಳನ್ನು ಜನರಿಗೆ ಕೊಡಿಸಬೇಕಾದರೆ


- ಬಂಜಗೆರೆ ಜಯಪ್ರಕಾಶ್

ಮಧ್ಯವರ್ತಿಗಳಾಗಿದ್ದು ಜನರಿಗೆ ಒದಗಿಸಿಕೊಟ್ಟು ಅದರಿಂದ ಒಂದು ರೀತಿಯ ಪ್ರತಿಫಲವನ್ನು ಪಡೆಯಲಿಕ್ಕೆ ಶುರುಮಾಡಿದರು. ಯಾವಾಗ ಪ್ರತಿಫಲಗಳು ವ್ಯಕ್ತಿಗತವಾಗಿ ದಕ್ಕುವುದಕ್ಕೆ ಶುರುವಾಯಿತೋ ಅದು ವ್ಯಕ್ತಿಯ ಸಂಪತ್ತಿಗೂ ಆತನ ಸೌಲಭ್ಯಗಳಿಗೂ ಬಳಕೆಯಾಗುವುದಕ್ಕೆ ಶುರುವಾಯಿತು. ಪೈಪೋಟಿ ಶುರುವಾಯಿತು. ನೀವು ಈ ರೀತಿಯಾಗಿ ಉಪಯೋಗ ಮಾಡಿಸಿಬಿಟ್ಟು ದಲಿತ ಸಮುದಾಯಗಳಿಗೆ ಅದರಿಂದ ಬಂದ ಕೃತಜ್ಞತೆಯನ್ನು ಅದರಿಂದ ಬರಬಹುದಾಗಿರುವ ಪ್ರತಿಫಲಗಳನ್ನು ಚಳುವಳಿಗಳ ನಿರ್ಮಾಣಕ್ಕೆ ಸಾಮೂಹಿಕ ಸಂಪತ್ತಾಗಿ ತೊಡಗಿಸಿದ್ದರೆ, ಇವತ್ತು ಭಾರತದಲ್ಲಿ ಅಭೇದ್ಯ ಚಳುವಳಿಯಾಗಿ ದಲಿತ ಚಳುವಳಿ ಬರಬಹುದಾಗಿತ್ತು. ಈಗ ಸಾಮಾನ್ಯ

ಸಮುದಾಯಗಳು ತಮಗೆ ಏನಾದರೂ ಉಪಕಾರ ದಕ್ಕಿದರೆ ಅದನ್ನು ಯಾವುದೋ ಒಂದು ರೂಪದಲ್ಲಿ ತೀರಿಸುವುದಕ್ಕೆ ಪ್ರಯತ್ನಿಸುತ್ತಾರೆ. ಮತ್ತೆ ಚಳುವಳಿಯ ಬಲಿಷ್ಠೀಕರಣಕ್ಕೆ ಚಳುವಳಿಯ ಸಂಘಟನಾತ್ಮಕ ಬೆಳವಣಿಗೆಗೆ ಒದಗಿ ಬಂದಿರುವ ಸಂಪನ್ಮೂಲಗಳಾಗಿ ಕ್ರೋಢಿಕರಿಸ ಬೇಕಾಗಿತ್ತು. ಇದು ಹೀಗೆ ಆಗಲಿಲ್ಲ. ಹಾಗಾಗಿ ಬೇಗನೇ ನಾಯಕತ್ವದ ನಡುವೆ ಭಿನ್ನಮತ ಬಂತು. ಭಿನ್ನಮತ ಬಂದಿರುವುದೂ ಕೂಡ ಸಂಪತ್ತು ಸವಲತ್ತುಗಳ ಹಂಚಿಕೆಯ ಕಾರಣಕ್ಕೆ. ಹೀಗೆ ಇರುವುದರಿಂದ ಪರಸ್ಪರ ಅಂಕುಶಕ್ಕೆ ಒಳಗಾಗಬೇಕಾಗುತ್ತದೆ. ಎಷ್ಟು ಮಾಡಿಸಿಕೊಡುತ್ತೇವೋ ನಮಗೆ ಅಷ್ಟು ಎಕ್ಸ್ಟ್ರಾ ಬರುತ್ತೆ. ಕೆಲವು ಕಡೆಗೆ ಕೆಲವು ರಾಜಕೀಯ ಪಕ್ಷಗಳಿಗೆ ಮಧ್ಯವರ್ತಿ ಮಾಡುವುದು ಅವರಿಗೆ ಓಟು ಕೊಡಿಸುವುದು ಆದ್ದರಿಂದಾಗಿ ಅವರಿಂದ ಬರುವ ಕೆಲವು ಒಲವುಗಳನ್ನು, ಕೆಲವು ಒಪ್ಪಿಕೆಗಳನ್ನು, ಸ್ವೀಕರಿಸುವುದು, ಸಮುದಾಯಗಳಿಗೆ ಕೆಲವು ಅವಕಾಶವನ್ನು ಕಲ್ಪಿಸಿಕೊಡುವಂತೆ ಮಾಡುವುದು, ಅದರಿಂದ ಬರುವ ಬೆಂಬಲ ಅದರಿಂದ ಬರುವ ಅಭಿಮಾನವನ್ನು ತನ್ನ ಬೆಂಬಲದ ನೆಲೆಗಟ್ಟಾಗಿ ವ್ಯಕ್ತಿಗತವಾಗಿ ರೂಪಿಸಿಕೊಳ್ಳುವುದು ಮತ್ತೆ ಅದರಿಂದ ಚೌಕಾಸಿ ಮಾಡುವುದು. ಅಧಿಕಾರಸ್ಥ ವಲಯದ ಜೊತೆಗೆ ಈ ಪ್ರವೃತ್ತಿಯೇ ಪ್ರಧಾನವಾಗಿ ಶಿಥಿಲವಾಯಿತು. ಈಗ ಕಮ್ಯೂನಿಸ್ಟ್ ಪಾರ್ಟಿಯಲ್ಲಿ ಮಧ್ಯವರ್ತಿತನದ ಆಯಾಮವಿದೆ. ಅವರು ಕಾರ್ಮಿಕರ ಪರವಾಗಿ ಒಂದು ಬೇಡಿಕೆ ಇಡುತ್ತಾರೆ. ಸರ್ಕಾರದ ಅಥವಾ ಮ್ಯಾನೇಜ್‌ಮೆಂಟ್ ಕೆಲವು ರಿಯಾಯ್ತಿಗಳನ್ನು ಘೋಷಿಸುತ್ತದೆ. ಅದರಿಂದ ಕಾರ್ಮಿಕರು ತಮಗೆ ಬಂದ ಎಕ್ಸ್ಟ್ರಾ ಸಂಬಳದಲ್ಲಿ ಇಷ್ಟು ರೂಪಾಯಿಗಳಂತ ವಾಪಸ್ಸು ಕೊಡುತ್ತಾರೆ. ಅವರು ಅದನ್ನು ಪಾರ್ಟಿ ಫಂಡು ಅಂತ ಮಾಡುತ್ತಾರೆ. ಪ್ರಧಾನವಾಗಿ ಅದರೊಳಗೂ ಏರು ಪೇರು ನಡೆಯುತ್ತದೆ. ಅದರಲ್ಲೂ ಸ್ವಲ್ಪ ತಿಂದಿರೋರೂ ಇದ್ದಾರೆ. ಆದ್ದರಿಂದ ಒಂದಷ್ಟು ಅವನತಿ ಸಹ ಹೊಂದಿದೆ. ಇಲ್ಲಿ ಹಾಗೇ ಇರಲಿಲ್ಲವಲ್ಲ. ಒಂದು ದಲಿತ ಚಳುವಳಿಯನ್ನು ಅದೂ ದಲಿತ ಆಶಯವನ್ನು ಬೆಂಬಲಿಸುವುದಕ್ಕೆ, ಕಟ್ಟಿ ನಿಲ್ಲಿಸುವುದಕ್ಕಾಗಿ ಮಾಡಿಟ್ಟ ಸಮೂಹ ಸಂಪನ್ಮೂಲ ಕ್ರೂಢಿಕರಣದ ಜವಾಬ್ದಾರಿಯೇ ಇಲ್ಲ. ಹಾಗಾಗಿ ಇದು ಖಾಸಗಿ ಆಸ್ತಿಯಾಗಿ ಖಾಸಗಿ ಸವಲತ್ತಾಗಿ ಮಾರ್ಪಡುತ್ತೆ. ಇನ್ನು ಉಳಿದ ಕಾರ್ಯಸೂಚಿ ಇದ್ದವಲ್ಲ ದಲಿತರ ಸ್ವಾಭಿಮಾನ ನಿರ್ಮಾಣದ್ದು, ದಲಿತ ಸಂಸ್ಕೃತಿ ನಿರ್ಮಾಣದ್ದು, ದಲಿತ ರಾಜಕೀಯ ನಿರ್ಮಾಣದ್ದು ಆಶಯಗಳು ಸೆಕೆಂಡರಿ ಆಗಿಹೋಗಿ ಈ ಮಧ್ಯವರ್ತಿತನದ ಕಾರ್ಯಸೂಚಿ ಒಂದೇನೇ ಕೆಲಸಕ್ಕೆ ಬಂದು ಬಿಟ್ಟಿತು. ದಲಿತರ ರಾಜಕೀಯ ಒಳಗಡೆನೇ ಕೆಲವು ದಲಿತ ನಾಯಕರು ಮಾಡುತ್ತಿರುವ ರಾಜಕೀಯ ಒಂದು ರೀತಿಯ ದಲಿತ ಸಮೂಹಗಳ ಪರವಾಗಿ ಧೀರ್ಘಕಾಲೀನ ದೃಷ್ಟಿಕೋನದಿಂದ ಅದರ ಶಕ್ತಿಯನ್ನು ಜಾಸ್ತಿ ಮಾಡುತ್ತಾ ಅದರ ಸ್ಪೇಸ್ ಅನ್ನು ಎಕ್ಸ್ಟ್ರಾಗೊಳಿಸುತ್ತಾ ಹೋಗುವುದು ಬೇರೆ. ಪಾಲಿಟಿಕ್ಸ್ ಆಫ್ ದಲಿತ್ಸ್. ದಲಿತ್ಸ್ ಪಾಲಿಟಿಕ್ಸ್‌ಗೂ ಇರುವ ವ್ಯತ್ಯಾಸ ಇದು. ಇಲ್ಲಿ ಅಸ್ಥಿತ್ವದ ರಾಜಕಾರಣದ ಒಳಗಡೆ ಇರುವ ಏನು ಸ್ಪೇಸ್ ಇದೆಯೋ, ಆ ಸ್ಪೇಸ್‌ನ್ನು ಬಳಸುವುದಕ್ಕೆ ವ್ಯಕ್ತಿಗತವಾಗಿ ಮುಂದು ಬಿದ್ದ ನಾಯಕರು ಬಹಳಷ್ಟು ಜನ ಅದಕ್ಕೋಸ್ಕರವಾಗಿ ತಮಗೆ ದಲಿತ ಬೆಂಬಲ ಇದೆ ಅನ್ನೋದನ್ನ ತೋರಿಸುವುದಕ್ಕಾಗಿ ಸಂಘಟಿಸುವ ಕೆಲವು ಚಳುವಳಿಗಳು, ಕೆಲವು ಕಾರ್ಯಕ್ರಮಗಳು ಅದೇ ಅದರ ವೈಫಲ್ಯದ ಕಾರಣ. ದೂರದ ಉದ್ದೇಶ ಮತ್ತು ಸಾಮೂಹಿಕವಾಗಿರುವ ಒಂದು ದಲಿತ ಪ್ರಜ್ಞೆಯ ನಿರ್ಮಾಣದ ಮತ್ತು ದಲಿತ ಚೈತನ್ಯದ ನಿರ್ಮಾಣದ ಒಂದು ಐಕ್ಯ ಗುರಿ ಇರುವುದು ಬಹಳ ದಿನದಿಂದ ಹೀಗೆಯೇ. ಅದರ ನಂತರದಲ್ಲಿ ಬಂದಿರುವ ಬೆಳವಣಿಗೆಗಳೆಲ್ಲವೂ ಈ ರೋಗದಿಂದಲೇ ಹುಟ್ಟಿರುವುದು. ಎಡಗೈ- ಬಲಗೈ ರೋಗ ಕೂಡ ಇದರ ಇನ್ನೊಂದು ರೂಪ. ನಿಮ್ಮ ಪರವಾಗಿ ಅವರ್‍ಯಾರೋ ತಿಂದಿದ್ದಾರೆ ಎನ್ನುವುದನ್ನು ದೂರಿಕರಣ ಮಾಡಿ ತೋರಿಸುವುದೇ ಕೆಲವು ನಾಯಕರಿಗೆ ಬಹಳ ಮುಖ್ಯವಾಗುತ್ತೆ. ನಾವು ಬಿಟ್ಟು ಕೊಡುತ್ತಿಲ್ಲ. ಅಷ್ಟನ್ನು ನಿಮಗೆ ಉಳಿಸುವುದಕ್ಕೆ ಪ್ರಯತ್ನಿಸುತ್ತಿದ್ದೇವೆ. ಅವರು ಭಾಗ ಮಾಡುವುದಕ್ಕೆ ಪ್ರಯತ್ನಿಸುತ್ತಿದ್ದಾರೆ. ಅಂತ ತೋರಿಸಿ ಕೊಳ್ಳುವುದು ಇನ್ನೊಂದು

ಪಂಗಡದವರಿಗೆ ಬಹಳ ಮುಖ್ಯವಾಗಿ ಬಿಡುತ್ತೆ ಅಂದರೆ ಒಟ್ಟಾರೆ ಆಶಯದ ಈಡೇರಿಕೆಗಿಂತ ಹೆಚ್ಚಾಗಿ ದಲಿತ ಚಳುವಳಿ ಇದರಿಂದ ಬಹಳ ಕುಂಠಿತವಾಯಿತು. ಇವತ್ತು ನಾವು ಯಾವ ದಲಿತ ಚಳುವಳಿಯ ನಾಯಕರನ್ನು ಒಂದಾಗಿ ಒಂದು ವೇದಿಕೆಗೆ ಬಾ ಎಂದು ಹೇಳುವುದು ಬಹಳ ಕಷ್ಟ ಕಾರಣವೇನೆಂದರೆ ನಾಳೆ ಬರುವ ಸವಲತ್ತುಗಳು ಬರುವ ಅವಕಾಶಗಳು ಬರುವ ಸಂಪನ್ಮೂಲಗಳಿದ್ದಾವಲ್ಲ ಕೊನೆಗೆ ಅವೆಲ್ಲ ವಿಭಜನೆಯಾಗುತ್ತದೆ ಎನ್ನುವ ನಂಬಿಕೆ. ಹೀಗಾಗಿ ಹೀಗೆ ಇದ್ದರೆ ಇದೇ ಒಳ್ಳೆಯದು. ಒಂದಿಷ್ಟು ಸ್ಥಳೀಯ ಬೆಂಬಲ ನೆಲೆಗಟ್ಟು ಇಟ್ಟುಕೊಂಡರೆ ಸಾಕು. ಅದೇನು ಒಳಹರಿವು ಇದೆಯೋ ಇದ್ದೇ ಇರುತ್ತೆ. ಹಾಗಾಗಿ ಕೂಡಿಕೊಳ್ಳುವುದಿಲ್ಲ. ಕೂಡಿಕೊಳ್ಳುವುದರಿಂದ ಅನೇಕ ಸಮಸ್ಯೆಗಳು ಪಬ್ಲಿಕ್ ಅಕೌಂಟೆಬಿಲಿಟಿ ಬೆಳೆಯುತ್ತೆ ಅಂತ.

*** ಹಾಗಾದರೆ ಈಗ ರೈತಸಂಘ ದಲಿತ ಸಂಘರ್ಷ ಸಮಿತಿಗಳು ಸೇರಿ ಸರ್ವೋದಯ ಪಕ್ಷ ಮಾಡಲಾಗಿದೆ. ಅದರಿಂದ ಏನಾದರೂ ಬದಲಾವಣೆ ಮಾಡಲಾಗುತ್ತಿದೆಯೇ?**

ಅಷ್ಟು ದೊಡ್ಡ ಬದಲಾವಣೆ ಯಾಕೆ ಆಗಿಲ್ಲ ಅಂದ್ರೆ ಆ ರೀತಿಯ ಆಶಯಾತ್ಮಕ ಐಕ್ಯತೆಯನ್ನು ನಿರ್ಮಿಸಿಕೊಂಡಿರುವ ಶಕ್ತಿಗಳು ಇದಾವಲ್ಲ ಅವರು ಒಂದುಕಡೆ ಪೂರ್ತಿ ರೈತ ಚಳುವಳಿಯ ಶಕ್ತಿಯನ್ನು ಇದಕ್ಕೆ ತಂದು ಒದಗಿಸುವಷ್ಟು ಚಲಾಯಿಸುವುದಕ್ಕೆ ಸಾಧ್ಯವಾಗಿಲ್ಲ.. ಇನ್ನೊಂದು ಕಡೆ ದಲಿತ ಚಳುವಳಿಯ ಪರವಾಗಿ ಐಕ್ಯ ಹೋರಾಟವನ್ನು ಮಾಡಬೇಕು. ಅಂತ ಹೊಂದಿರುವ ಒಂದು ಆಶಯಾತ್ಮಕ ಗುಂಪು ಇದೆಯಲ್ಲಾ ಅದಕ್ಕೂ ಕೂಡ ಅಷ್ಟೇ ಇಡೀ ದಲಿತ ಚಳುವಳಿಯ ಬೇರೆ ಬೇರೆ ಕವಲುಗಳ ಎಲ್ಲಾ ಸಾಮರ್ಥ್ಯಗಳನ್ನು ತಂದು ಇದಕ್ಕೆ ಒದಗಿಸುವುದಕ್ಕೆ ಕೂಡ ಸಾಧ್ಯವಾಗುತ್ತಿಲ್ಲ. ಅದರಿಂದ ಇದು ಆಶಯಾತ್ಮಕವಾಗಿ ಬಹಳ ಒಳ್ಳೆಯ ನೆಲೆ. ಆಶಯಾತ್ಮಕವಾಗಿ ಒಳ್ಳೆಯದಿರುವುದರಿಂದ ಎಲ್ಲಕ್ಕೂ ಬೆಂಬಲಿಸುತ್ತಿರುವುದು ಕಷ್ಟ ಮತ್ತು ಇನ್ನು ಸಮೂಹಗಳ ನೆಲೆಯಲ್ಲಿ ಸಮುದಾಯಗಳ ನೆಲೆಯಲ್ಲಿ ಸ್ಥಳೀಯ ಪ್ರಮಾಣದಲ್ಲಿ ಆ ರೀತಿಯ ಐಕ್ಯತೆಯ ಪ್ರಕ್ರಿಯೆಯು ಇನ್ನೂ ಆರಂಭವಾಗಿದೆ ಮತ್ತು ನೆಲೆಗೊಂಡಿದೆ ಅಂತ ಹೇಳೋದಕ್ಕೆ ಆಗುವುದಿಲ್ಲ.

*** ತುಂಬಾ ಹಿಂದಿನಿಂದ ಜಮೀನ್ದಾರಿ ಪದ್ಧತಿಯಿಂದಲೇ ಅಥವಾ ಜಮೀನ್ದಾರಿ ಧೋರಣೆಗಳನ್ನು ಹೊಂದಿರುವ ರೈತರು ಶತಮಾನಗಳಿಂದ ದಲಿತರ ಶೋಷಣೆಗೆ ಪ್ರತ್ಯೇಕವಾಗಿ ಕಾರಣವಾಗಿರುವ ಸನ್ನಿವೇಶದಲ್ಲಿ ದಲಿತ ರೈತರು ಒಂದಾಗಿ ರಾಜಕೀಯವಾಗಿ ಸಾಮಾಜಿಕ ಬದಲಾವಣೆ ಮಾಡಲು ಸಾಧ್ಯವಿದೆಯೇ?**

ಅದೇ ಕೆಲವು ಸಲ ಏನಾಗುತ್ತೆ ದಮನದ ದಮನಕ್ಕೆ ಒಳಗಾಗುವ ಪ್ರಮಾಣಗಳಲ್ಲಿ ಬೇರೆ ಬೇರೆ ಹಂತಗಳು ಇರಬಹುದು. ನೇರ ನೇರವಾಗಿ ನೋಡಿದಾಗ ಇದೇ ಇದರ ಶತ್ರು ಇದೇ ಇದರ ದಮನ ಅಂತ ಅಂತ ಕಾಣಿಸುತ್ತೆ. ಒಟ್ಟಾರೆ ವ್ಯವಸ್ಥೆಯ .ವಿಶ್ಲೇಷಣೆ ತೆಗೆದರೆ ಈ ದಮನವೂ ಈ ಶತ್ರುತ್ವವು ಅನ್ನುವುದು ಅದರ ಪ್ರತಿಫಲವಾಗಿ ಮಾತ್ರ ಇದೆಯೆ ಮತ್ತು ಬರುವ ಅಪಾಯ ಬಹಳ ದೊಡ್ಡ ಹೆದ್ದಾರಿಯಾಗಿ ಅಷ್ಟನ್ನು ಕೊಚ್ಚಿ ಹಾಕುತ್ತೆ ಅನ್ನುವ ಭಯವಿದ್ದಾಗ ನಮ್ಮ ಸ್ಥಳೀಯ ಅಥವಾ ಇಲ್ಲಿನ ಸದ್ಯದ ವೈರುಧ್ಯಗಳನ್ನು ಜೊತೆಗಿಟ್ಟುಕೊಂಡೆ ಐಕ್ಯತೆಗಳನ್ನು ರಚಿಸಬಹುದು. ಆದರೆ ಅಷ್ಟು ಜಾಗೃತಿ ರಾಜಕೀಯ ಪ್ರಜ್ಞಾವಂತಿಕೆಯನ್ನು ಮೂಡಿಸಿದೆಯೆ, ಇನ್ನೊಂದು ಜಾತಿ ಪ್ರಶ್ನೇನ ಇಟ್ಕೊಂಡು ಹೇಳ್ತಾರೆ. ನಾಯಕತ್ವಕ್ಕೆ ಏನು ಹೊಳೆಯುತ್ತಿದೆಯೋ ಜಾಗತೀಕರಣದ ಹಿನ್ನೆಲೆಯಲ್ಲಿ ಒಟ್ಟಾರೆ ಕಾರ್ಪೋರೇಟ್ ಶಾಹಿ ಅಥವಾ ಪ್ರಭುತ್ವದ ಹಿನ್ನೆಲೆಯಲ್ಲಿ ನಾವು ಅಂತಿಮವಾಗಿ 2 ವರ್ಗಗಳು ಕಳೆದುಕೊಳ್ಳುವವರೆ ಮತ್ತು ಕಳೆದು ಹೋಗುವವರೆ. ಪ್ರಜಾತಾಂತ್ರಿಕ ಸ್ಪೇಸ್ ಕಡಿಮೆಯಾಗಿಬಿಟ್ಟರೆ ಶತ್ರುವನ್ನು ಎದುರಿಸಬೇಕಾಗಿದೆ. ಆನಂತರ ತಮ್ಮ ಸಮಾನತೆಯ ಪ್ರಶ್ನೆಯನ್ನು ಬಗೆಹರಿಸಿಕೊಳ್ಳ ಬೇಕಾಗಿದೆ ಅನ್ನುವ ತಿಳುವಳಿಕೆ ಒಳ್ಳೆಯದು. ಸ್ವತಃ ಹೋರಾಟಗಳು ಪ್ರಬಲವಾಗಿಲ್ಲ. ಅದಕ್ಕೆ ಏನೋ ಒಟ್ಟಿಗೆ ರಾಶಿ ಹಾಕಿಕೊಂಡು ಧನಿ ಮಾಡುತ್ತಿದ್ದಾರೆ. ಇದನ್ನೆಲ್ಲಾ ನೋಡಿದರೆ ಬಿಡ್ರೀ ಎನ್ನುವ ಸಿನಿಕತನದ ಅಭಿಪ್ರಾಯ ಮೂಡುತ್ತದೆ.

●




ಬಹುಪಾಲು ಯುವ ಜನತೆ ವೈಜ್ಞಾನಿಕತೆ, ವೈಚಾರಿಕತೆ, ವಾಸ್ತವಿಕತೆಯ ಪ್ರಜ್ಞೆ ಇಲ್ಲದೇ, ವರ್ತಮಾನದ ಯಾವುದೇ ಸಂದರ್ಭ, ಸನ್ನಿವೇಶಗಳಿಗೆ ಮಾನವೀಯವಾಗಿ ಜನಪರವಾಗಿ ಸ್ಪಂದಿಸದೆ ಇರುವುದು ವಿಪರ್ಯಾಸವಾಗಿದೆ

ಕೃಷವಾಗುತ್ತಿರುವ ಯೂತ್ಸ್

ಇಂಡಿಯಾ ಎನ್ನುವ ಬಹುಮುಖಿ ಸ್ತರಗಳ ನಡುವೆ ಅಡಗಿರುವ ಪಟ್ಟಭದ್ರ ಹಿತಾಸಕ್ತಿಗಳಿಂದ ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಬುಡಮೇಲು ಮಾಡಿ, ಶುದ್ಧ ಯುವ ಮನಸ್ಸುಗಳನ್ನು ಮಲೀನ ಗೊಳಿಸುವಿಕೆಯಲ್ಲಿ ನಿರಂತರವಾಗಿ ಕಾರ್ಯ ಪ್ರವೃತ್ತವಾಗಿದೆ. ಇಂಡಿಯಾ ವ್ಯವಸ್ಥೆಯಲ್ಲಿನ ಯಾವುದೇ ಬದಲಾವಣೆಗೆ ನಿರ್ಣಾಯಕ ಪಾತ್ರವಹಿಸಬೇಕಾಗಿದ್ದ ಯುವ ಜನತೆ ಅಂತಃ ಕರಣದ ಕೊರತೆಯಿಂದ ತಮ್ಮ ವ್ಯಕ್ತಿತ್ವಗಳನ್ನೇ ವ್ಯಾಪಾರೀಕರಣಗೊಳಿಸಿಕೊಳ್ಳುತ್ತಿದ್ದಾರೆ. ಭವಿಷ್ಯ ಭಾರತದ ಭದ್ರಬುನಾದಿಯಾಗಿ ರೂಪುಗೊಳ್ಳ ಬೇಕಾಗಿದ್ದ ಯುವ ಜನತೆ ಸಾಂಸ್ಕೃತಿಕ ಅಧಃಪತನ ದತ್ತ ಚಲಿಸುತ್ತಿರುವುದು ದುರಂತವಾಗಿದೆ. ಬಾಹ್ಯ ಆಡಂಬರಗಳಿಗೆ ಮರುಳಾಗಿ ವಾಸ್ತವಿಕ ಬದುಕಿನ ನೈಜ ತಳಮಳ, ತಲ್ಲಣಗಳಿಗೆ ಕಿವಿಗೊಡದೆ ಕಿವುಡರಾಗಿ ವರ್ತಿಸುತ್ತಿದ್ದಾರೆ. ತನ್ನ ಎದುರಿಗೆ ನಡೆಯುವ ಸಣ್ಣ ಅನ್ಯಾಯ, ದೌರ್ಜನ್ಯಗಳನ್ನು ಸಹ ಪ್ರತಿಭಟಿಸದೇ ಅಥವಾ ವಿರೋಧಿಸದೇ ನಿಷ್ಕ್ರಿಯರಾಗಿರುವ

ಯುವ ಜನತೆ ಅಪಮಾನ ಶ್ರೇಣೀಕೃತ ಸಮಾಜದೊಳಗೆ ಹೇಗೆ ಸಮಾನತೆಯ ಬೀಜ ಬಿತ್ತುತ್ತಾರೆ ಎನ್ನುವುದು ಅನುಮಾನ ವಾಗಿದೆ. ಜಾತಿ, ಧರ್ಮ, ದೇವರುಗಳನ್ನು ಅತಿಯಾಗಿ ಅಪ್ಪಿಕೊಂಡಿರುವ ಯುವ ಜನತೆ ಧರ್ಮದ ಹೆಸರಿನಲ್ಲಿ ನಡೆಯುವ ಕಗ್ಗೊಲೆಗಳಿಗೆ ರೂವಾರಿಗಳಾಗಿರುತ್ತಾರೆ. ಯಾವುದೇ ಪೂರ್ವಾಪರಗಳನ್ನು ಯೋಚಿಸದೇ, ಸತ್ಯ- ಅಸತ್ಯಗಳ ವಿವೇಚನೆ ಇಲ್ಲದೇ, ಯಾರೋ ಹೇರಿದ ತತ್ವ ಸಿದ್ಧಾಂತಗಳಿಗೆ ಬಲಿಯಾಗುತ್ತಾರೆ. ತಮ್ಮದೇ ಶ್ರೇಷ್ಠ, ತಮ್ಮದೇ ಪವಿತ್ರ, ತಮ್ಮದೊಂದೇ ಎಲ್ಲಾ ಎನ್ನುವುದರ ಮೂಲಕ ಉಳಿದ ಸಮಾಜ, ಸಮುದಾಯ, ಸಂಸ್ಕೃತಿಗಳು ಕೀಳು ಕನಿಷ್ಠ, ಅಪವಿತ್ರ ಎಂಬ ಧೋರಣೆಗಳನ್ನು ತುಂಬಾ ವ್ಯವಸ್ಥಿತವಾಗಿ ಅವಗಾಹನೆ ಮಾಡಿಕೊಂಡಿರುತ್ತಾರೆ. ಬಹುಮುಖಿ ಸಂಸ್ಕೃತಿ ಯನ್ನು ಹೊಂದಿರುವ ಈ ನಾಡಿನಲ್ಲಿ ಏಕಮುಖಿಯಾದ ಧಮನಕಾರಿ ಸಂಸ್ಕೃತಿಯನ್ನು ಹೇರಲು ಬಹಳ ಮುಖ್ಯವಾದ ಪಾತ್ರವನ್ನು ನಿರ್ವಹಿಸುವುದು ಯುವ ಜನತೆಯಾಗಿದೆ. ಯುವ ಜನತೆಯ ಆಲೋಚನೆಗಳನ್ನು, ಚಿಂತನೆಗಳನ್ನು, ಮನಸ್ಸುಗಳನ್ನು ಹಾಳು ಮಾಡಲೆಂದೇ ಹಲವಾರು ಅಪಾಯಕಾರಿ ಸಂಘಟನೆಗಳು ಅಸ್ತಿತ್ವಕ್ಕೆ ಬಂದು ಸಮಾಜದಲ್ಲಿ ಅಮಾನವೀಯತೆಯನ್ನು, ಅಶಾಂತಿ ಯನ್ನು ಹೆಚ್ಚಿಸಲು ಪ್ರಯತ್ನಿಸುತ್ತಿವೆ. ಬಹುಪಾಲು ಯುವ ಜನತೆ ವೈಜ್ಞಾನಿಕತೆ, ವೈಚಾರಿಕತೆ, ವಾಸ್ತವಿಕತೆಯ ಪ್ರಜ್ಞೆ ಇಲ್ಲದೇ, ವರ್ತಮಾನದ ಯಾವುದೇ ಸಂದರ್ಭ, ಸನ್ನಿವೇಶಗಳಿಗೆ ಮಾನವೀಯವಾಗಿ ಜನಪರವಾಗಿ ಸ್ಪಂದಿಸದೆ ಇರುವುದು ವಿಪರ್ಯಾಸವಾಗಿದೆ. ರಾಜಕೀಯವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ತಮ್ಮದೇ ಆದ ವಿಶಿಷ್ಟ ಛಾಪನ್ನು ಮೂಡಿಸಲು ಸಾಧ್ಯವಾಗದ ಯುವ ಜನತೆ ವಿವೇಕ ಶೂನ್ಯರಾಗಿ ತಮ್ಮತನಗಳನ್ನು ಕಳೆದುಕೊಂಡು ಜಡರಾಗುತ್ತಿದ್ದಾರೆ. ಸಹಬಾಳ್ವೆ, ಸಹಕಾರ, ಭ್ರಾತೃತ್ವಕ್ಕೆ ಅಡಿಪಾಯ ಹಾಕಬೇಕಾಗಿದ್ದ ಯುವ ಜನತೆಯೇ ಜಾತೀಯತೆ, ಮತಾಂಧತೆಗಳಿಗೆ ಬಲಿಯಾಗುತ್ತಾ ಇದ್ದಾರೆ. ಸಮುದಾಯ ಪ್ರಜ್ಞೆಯೊಂದಿಗೆ ಕಟ್ಟಬೇಕಾಗಿದ್ದ ಸಮಾನ ಆಶಯಗಳನ್ನು ಗಾಳಿಗೆ ತೂರಿ ಬಿಡಲಾಗುತ್ತಿದೆ. ಮಾನವೀಯತೆಯ ನೆಲೆಯಲ್ಲಿ ಹೋರಾಟದ ನಿಲುವುಗಳನ್ನು ರೂಢಿಸಿಕೊಳ್ಳಬೇಕಾಗಿದ್ದ ಯುವ ಜನತೆ ಯಾವುದೋ ವಿಚ್ಛಿದ್ರಕಾರಿ ಕ್ರೌರ್ಯ ಧೋರಣೆಗಳನ್ನು ಸದಾ ಬಲಪಡಿಸಿಕೊಳ್ಳಲು ತೊಡಗುತ್ತಾರೆ. ಆಕರ್ಷಣೆ ಹಾಗೂ ವ್ಯಾಮೋಹಗಳ ಬಲೆಗೆ ಬಿದ್ದು ಬದುಕಿನ ಮೂಲ ಬೇರುಗಳನ್ನೇ ನಾಶಗೊಳಿಸುವ ನೆಲೆಯಲ್ಲಿ ಸಾಗುತ್ತಿದ್ದಾರೆ. ಸ್ವಯಂ ನಿಯಂತ್ರಣದ ನಿಲುವಿಲ್ಲದೇ ಸಾಮಾಜಿಕವಾಗಿ ಅಗಬಹುದಾದ ಅನಾಹುತಗಳನ್ನು ತಡೆಯುವ ಸಾಧ್ಯತೆ ಇದ್ದರೂ ಸಹ ಯಾವುದೋ ಘೋರ ಭೀಕರ ಒತ್ತಡಗಳಿಗೆ ಮಣಿದು ಘೋರ ಅನ್ಯಾಯಗಳು ನಡೆಯುವುದಕ್ಕೆ ಪ್ರತ್ಯೇಕವಾಗಿ ಹಾಗೂ ಪರೋಕ್ಷವಾಗಿ ಕಾರಣರಾಗುತ್ತಾರೆ. ಹೆಚ್ಚು ಯುವ ಜನರು ನಕಾರಾತ್ಮಕ ಆಲೋಚನೆ. ಧೋರಣೆಗಳನ್ನು ಮೈಗೂಡಿಸಿಕೊಂಡು ತಮ್ಮೊಳಗೆ ತಾವೇ ಅಸಂಬದ್ಧತೆಯನ್ನು ಸೃಷ್ಟಿಸಿಕೊಳ್ಳುವುದನ್ನು ಕಾಣಬಹುದು. ಅರಾಜಕತೆಯ ಯುವ ಜನತೆ ಅರಾಜಕತೆಯ ಸಮಾಜ, ಸಂಸ್ಕೃತಿಯನ್ನು ಮಾತ್ರ ಕಟ್ಟಲು ಸಾಧ್ಯ. ಯಾವುದಕ್ಕೆ ಸೂಕ್ಷ್ಮಮತೀಯ ಮನೋಧೋರಣೆ ಗಳನ್ನು ಅಳವಡಿಸಿಕೊಳ್ಳಬೇಕಾಗಿತ್ತೋ, ಅದಕ್ಕೆ ವಿರುದ್ಧವಾಗಿ ಚಲನೆಯಲ್ಲಿರಲು ಪ್ರಯತ್ನಿಸುತ್ತಾರೆ. ಬಹುಪಾಲು ಯುವ ಜನತೆ ಏಕೆ? ಹೇಗೆ? ಏನು? ಎಂದು ಪ್ರಶ್ನಿಸುವ ಹಾಗೂ ವಿಮರ್ಶಿಸುವ ಗುಣವನ್ನೇ ಕಳೆದುಕೊಂಡು, ಯಾವುದೋ ಒಂದು ಮೋಹದ ಅಥವಾ ಕ್ಷಣಿಕದ ಸನ್ನಿವೇಶಗಳು ಮಾತ್ರ ಅವರ ಚರ್ಚೆಯ ಕೇಂದ್ರ ಬಿಂದು ಆಗಿರುತ್ತದೆ. ಮಾನಸಿಕ ದೌರ್ಬಲ್ಯಗಳಿಂದ ತಮ್ಮ ಮೇಲೆ ಹಿಡಿತ ಸಾಧಿಸಿಕೊಳ್ಳದೇ ದೇಶಕ್ಕೆ ಮಾರಕ ವಾಗುತ್ತಾರೆ.


ರಾಮಕೃಷ್ಣ ಹುಲಿಕುಂಟೆ

ವಚನ ಚಳುವಳಿ :

ಒಂದು ವಿಮುಕ್ತಿ ಪರ ಚಿಂತನೆ



ಡಾ. ನಾಗಭೂಷಣ ಬಗ್ಗನಡು

ವಚನ ಸಾಹಿತ್ಯ ಮತ್ತು ಚಳುವಳಿ ಕನ್ನಡ ಆಧುನಿಕ ಸಾಹಿತ್ಯದ ಮೇಲೆ ಪರಿಣಾಮಕಾರಿಯಾದ ಪ್ರಭಾವವನ್ನು ಬೀರಿದೆ. ಕನ್ನಡ ಸಾಹಿತ್ಯ ಅರಣೋದಯದಲ್ಲಿ ವಚನಗಳನ್ನು 'ಧರ್ಮ ಶಾಸ್ತ್ರ' ಎಂತಲೇ ಅವುಗಳ ವಿಶೇಷ ಅಧ್ಯಯನಕ್ಕೆ ತೊಡಗಿದ್ದು, ನವೋದಯ ಕಾಲಘಟ್ಟದಲ್ಲಿ ಪ.ಗು.ಹಳಿಕಟ್ಟಿ, ಶಿ.ಶಿ. ಬಸವನಾಳ, ಎಂ. ಆರ್. ಶ್ರೀ ಮುಂತಾದ ವಿದ್ವಾಂಸರೆಲ್ಲಾ 'ಧರ್ಮಸಾರ' ಭಾಗವಾಗಿಯೇ ವಚನಗಳನ್ನು ಕಂಡರು. ನವ್ಯಕಾಲ ಘಟ್ಟಕ್ಕೆ ಇದನ್ನು 'ವಚನ ಸಾಹಿತ್ಯ' ಎಂಬುದಾಗಿ ಗುರುತಿಸಿ ತಮ್ಮ ಸಾಹಿತ್ಯ ಕೃತಿಗಳಿಗೆ ಆಹಾರ ಸ್ವಾದವಾಗಿಯೂ ಸ್ವೀಕೃತವಾಯಿತು. ಆದರೆ ಮುಂದೆ ಬಂದ ದಲಿತ ಬಂಡಾಯದ ಘಟ್ಟದಲ್ಲಿ ಈ ಕ್ರಾಂತಿಕಾರಕ ಯುಗವನ್ನು 'ವಚನ ಚಳುವಳಿ' ಎಂದು ಚಳುವಳಿಯ ಭಾಗವಾಗಿ ವಚನಗಳನ್ನು ಗುರುತಿಸಲಾಯಿತು. ಈ ಯುಗವನ್ನು ಆಧುನಿಕ ಕನ್ನಡ ಸಾಹಿತ್ಯ ಎದುರಾಗುವ ಬಗೆಯೇ ವಚನ ಚಳುವಳಿ ವಿಕಾಸವನ್ನು ಅಭಿವ್ಯಕ್ತಿಸುತ್ತದೆ. ಕನ್ನಡ ಸಾಹಿತ್ಯ ಎಲ್ಲಾ ಸಾಹಿತ್ಯ ಘಟ್ಟಗಳಲ್ಲೂ ಈ ಯುಗವನ್ನು ವಿಮರ್ಶಾತ್ಮಕ ನೆಲೆಗಿಂತಲೂ ಆತ್ಮರತಿ ಪ್ರಕ್ರಿಯೆಯಲ್ಲಿ ವೈಭವಯುತವಾಗಿ, ರೋಚಕವಾಗಿ ಕಾಣುವ ಮುಖಾಂತರ ವಸ್ತುನಿಷ್ಟ ಅಧ್ಯಯನಕ್ಕೆ ಒಳಗಾಗಲಿಲ್ಲ.

ವಚನ ಚಳುವಳಿ, ಸಾಹಿತ್ಯ ಮತ್ತು ಅಂದು ನಡೆದ ಸಾಮಾಜಿಕ ಕ್ರಾಂತಿಯನ್ನು ಇಪ್ಪತ್ತೊಂದನೇ ಶತಮಾನದಲ್ಲಿ ನಿಂತು ನೋಡಿದಾಗ ಅದರ ಇತಿಮಿತಿ ನಮ್ಮ ಅರಿವಿಗೆ ಬರದೆ ಹೋಗುವುದಿಲ್ಲ. ಸಾಮಾನ್ಯವಾಗಿ ಆಧುನಿಕ ಕನ್ನಡ ಸಾಹಿತ್ಯ ಎಲ್ಲಾ ಘಟ್ಟಗಳಲ್ಲಿ ಹಿತ್ತಲಗಿಡದ ಮದ್ದಾಗಿಯೇ ಹೆಚ್ಚು ಬಳಕೆಯಾಗಿದೆ. ಹಾಗಾಗಿಯೇ ಈ ಯುಗ ಅಗತ್ಯಕ್ಕಿಂತ ಹೆಚ್ಚನದಾಗಿ ಹೊಗಳಿಕೆಗೆ ಒಳಪಟ್ಟಿದೆ.

ವಚನಯುಗವನ್ನು ಪುನರ್‌ಅವಲೋಕನಕ್ಕೆ ಒಳಪಡಿಸಿದಾಗ ಅದು ಎಷ್ಟು ಪ್ರಗತಿ ಪರವಾಗಿತ್ತೋ ಅಷ್ಟೇ ವಿಗತಿಯ ಕಡೆ ಸಾಗಿರುವುದನ್ನು ಕಾಣಬಹುದು. ವೈದಿಕಧರ್ಮದ ಕರ್ಮಠತನಗಳನ್ನು ನಿರಾಕರಿಸಿ, ಜನಸಮುದಾಯ ಪರವಾದ ಆಶಯಗಳನ್ನು ಹೊತ್ತು ಬಂದ ಈ ಘಟ್ಟ ತನ್ನ ಗುರಿಯನ್ನು ಮುಟ್ಟಲಿಲ್ಲ. ಇದರಲ್ಲಿ ಅಹಿಂಸೆಯ ವ್ಯಾಖ್ಯಾನವೇ ಭಿನ್ನವಾದದ್ದು. 'ದಯವೇ ಧರ್ಮದ ಮೂಲವಯ್ಯ' ಎಂದು ಸಾರಿದ ಬಸವಣ್ಣ, ಲಿಂಗ ಸಾಹಿತ್ಯಕ್ಕೆ ಧಕ್ಕೆ ಮಾಡಿದವರನ್ನು ತರಿದು ಬಿಡಬೇಕು ಎಂದು ಚನ್ನಬಸವಣ್ಣನ ವಚನಗಳು ವಿರೋಧಾಭಾಸವನ್ನು ಸೃಷ್ಟಿಸುತ್ತವೆ.

ವಚನ ಚಳುವಳಿ, ಸಾಹಿತ್ಯ ಮತ್ತು ಅಂದು ನಡೆದ ಸಾಮಾಜಿಕ ಕ್ರಾಂತಿಯನ್ನು ಇಪ್ಪತ್ತೊಂದನೇ ಶತಮಾನದಲ್ಲಿ ನಿಂತು ನೋಡಿದಾಗ ಅದರ ಇತಿಮಿತಿ ನಮ್ಮ ಅರಿವಿಗೆ ಬರದೆ ಹೋಗುವುದಿಲ್ಲ. ಸಾಮಾನ್ಯವಾಗಿ ಆಧುನಿಕ ಕನ್ನಡ ಸಾಹಿತ್ಯ ಎಲ್ಲಾ ಘಟ್ಟಗಳಲ್ಲಿ ಹಿತ್ತಲಗಿಡದ ಮದ್ದಾಗಿಯೇ ಹೆಚ್ಚು ಬಳಕೆಯಾಗಿದೆ. ಹಾಗಾಗಿಯೇ ಈ ಯುಗ ಅಗತ್ಯಕ್ಕಿಂತ ಹೆಚ್ಚನದಾಗಿ ಹೊಗಳಿಕೆಗೆ ಒಳಪಟ್ಟಿದೆ.

ವಚನಗಳನ್ನು 'ಧರ್ಮ ಶಾಸ್ತ್ರ' ಎಂತಲೇ ಅವುಗಳ ವಿಶೇಷ ಅಧ್ಯಯನಕ್ಕೆ ತೊಡಗಿದ್ದು, ನವೋದಯ ಕಾಲಘಟ್ಟದಲ್ಲಿ ಪ.ಗು.ಹಳಕಟ್ಟಿ, ಶಿ.ಶಿ. ಬಸವನಾಳ, ಎಂ. ಆರ್. ಶ್ರೀ ಮುಂತಾದ ವಿದ್ವಾಂಸರೆಲ್ಲಾ 'ಧರ್ಮಸಾರ' ಭಾಗವಾಗಿಯೇ ವಚನಗಳನ್ನು ಕಂಡರು. ನವ್ಯಕಾಲ ಘಟ್ಟಕ್ಕೆ ಇದನ್ನು 'ವಚನ ಸಾಹಿತ್ಯ' ಎಂಬುದಾಗಿ ಗುರುತಿಸಿ ತಮ್ಮ ಸಾಹಿತ್ಯ ಕೃತಿಗಳಿಗೆ ಆಹಾರ ಸ್ವಾದವಾಗಿಯೂ ಸ್ವೀಕೃತವಾಯಿತು. ಆದರೆ ಮುಂದೆ ಬಂದ ದಲಿತ ಬಂಡಾಯದ ಘಟ್ಟದಲ್ಲಿ ಈ ಕ್ರಾಂತಿಕಾರಕ ಯುಗವನ್ನು 'ವಚನ ಚಳುವಳಿ' ಎಂದು ಚಳುವಳಿಯ ಭಾಗವಾಗಿ ವಚನಗಳನ್ನು ಗುರುತಿಸಲಾಯಿತು. ಈ ಯುಗವನ್ನು ಆಧುನಿಕ ಕನ್ನಡ ಸಾಹಿತ್ಯ ಎದುರಾಗುವ ಬಗೆಯೇ ವಚನ ಚಳುವಳಿ ವಿಕಾಸವನ್ನು ಅಭಿವ್ಯಕ್ತಿಸುತ್ತದೆ. ಕನ್ನಡ ಸಾಹಿತ್ಯ ಎಲ್ಲಾ ಸಾಹಿತ್ಯ ಘಟ್ಟಗಳಲ್ಲೂ ಈ ಯುಗವನ್ನು ವಿಮರ್ಶಾತ್ಮಕ ನೆಲೆಗಿಂತಲೂ ಆತ್ಮರತಿ ಪ್ರಕ್ರಿಯೆಯಲ್ಲಿ ವೈಭವಯುತವಾಗಿದೆ

ಅಂಗಳದಲ್ಲಿರುವ ದೇವಾಲಯಗಳನ್ನು ಅಂಗೈಗೆ ತಂದುಕೊಂಡ, ಈ ಯುಗ, ಕುರುಹೇ ಪ್ರಧಾನವಾಗಿ ಆಚರಣೆಯೇ ನೀತಿಯಾಗಿಸಿಕೊಂಡಿಸಿದ್ದು ಇದರ ವಿಪ್ರತೆಯನ್ನು ತೋರಿಸುತ್ತದೆ. ಆತ್ಮಲಿಂಗವ ಬಿಟ್ಟು ಮತ್ತೊಂದು ಕುರುಹು ಬೇಕೆ? ಎಂದು ಸಾರಿದ ಅಲ್ಲಮನ ಧಾರೆ ಮುಂದೆ ಪ್ರಾಮುಖ್ಯತೆಯನ್ನು ಪಡೆಯಲಿಲ್ಲ. ಶಾಸ್ತ್ರ ಪುರಾಣ ಆಗಮಕಗಳನ್ನು ನಿರಾಕರಿಸಿ ಜನ ಸಮುದಾಯದ ದನಿಯಾಗಿ ಮೂಡಿ ಬರಬೇಕಾಗಿದ್ದ ಈ ಘಟ್ಟ, ಕೊನೆಯಲ್ಲಿ ತಮ್ಮ ವಚನಗಳ ನಿಲುವಿಗೆ ಆಗಮಕಗಳನ್ನು ಸಾಕ್ಷಿಗಳಿಗೆ ಬಳಕೆ ಮಾಡಿಕೊಂಡಿದ್ದು ದುರದೃಷ್ಟಕರ, ಸಂಸ್ಕೃತವನ್ನು ನಿರಾಕರಿಸಿ ಕನ್ನಡಕ್ಕೆ ಒತ್ತು ನೀಡುವ ಈ ವಚನಗಳ ಅಂತರ್ಯದಲ್ಲಿ ಸಂಸ್ಕೃತದ ಕುರುಹುಗಳನ್ನು ಕಟ್ಟಿಕೊಳ್ಳುವ ಪ್ರಯತ್ನವು ಚೆನ್ನಬಸವಣ್ಣನವರ ವಚನಗಳಲ್ಲಿ ಕಾಣಬಹುದು.

ವೈದಿಕ ಧರ್ಮದ ಶ್ರೇಣೀಕರಣದ ಸಮಾಜವನ್ನು ನಿರಾಕರಿಸಿ ಕಾಯಕಕ್ಕೆ ಒತ್ತು ನೀಡಿದ ಈ ಯುಗ ಕೊನೆಯಲ್ಲಿ ಜಾತಿಯ ಆಧಾರದ ಮೇಲೆ ಲಿಂಗ ದೀಕ್ಷೆಯನ್ನು ನೀಡಿದುದು ದೊಡ್ಡ ವಿಪರ್ಯಾಸ.

ಚನ್ನಬಸವಣ್ಣನವರ ಒಂದು ವಚನದಲ್ಲಿ, ಬ್ರಾಹ್ಮಣನಿಗೆ ಮೂರು ವರ್ಷ, ಕ್ಷತ್ರಿಯನಿಗೆ ಆರು ವರ್ಷ, ವೈಶ್ಯನಿಗೆ ಓಂಬತ್ತು ವರ್ಷ, ಶೂದ್ರನಿಗೆ ಹನ್ನೆರಡು ವರ್ಷ ನೋಡಿ ಲಿಂಗ ಸಾಹಿತ್ಯವನ್ನು ನೀಡಬೇಕು ಎಂದು ಚೆನ್ನಬಸವಣ್ಣ ಹೇಳುತ್ತಾನೆ. ಜನಸಾಮಾನ್ಯರಿಗೆ ಕಂಟಕವಾಗಿದ್ದ ಯಾವ ವೈದಿಕ ಶ್ರೇಣೀಕರಣ ಸಮಾಜವನ್ನು ಈ ವಚನ ಚಳುವಳಿ ನಿರಾಕರಿಸಿತ್ತೋ ಮುಂದೆ ಅದನ್ನು ತಮ್ಮ ವಚನಗಳಿಗೆ ತಾತ್ವಿಕ ತಳಹದಿಯಾಗಿ ನಿರ್ಮಾಣ ಮಾಡಿಕೊಂಡಿತು. ವಚನ ಚಳುವಳಿಯನಂತರ ಬಂದು ವೀರಶೈವ ಸಾಹಿತ್ಯ ಮತ್ತಷ್ಟು ಲಿಂಗ ಪರಿವರ್ತನೆಗೊಳ್ಳಲು ಸಹಾಯಕವಾಯಿತು. ಹರಿಹರನ ರಗಳೆಗಳು ಮನುಷ್ಯನ ಸಾಧನೆಗೆ ಇಂಬು ಕೊಡದೆ ಎಲ್ಲವನ್ನು ದೈವ್ಯತ್ವಕ್ಕೆ ಏರಿಸುವುದರ ಮುಖಾಂತರ ಕೆಲವು ವಚನಕಾರರನ್ನು ದೇವರ ಸ್ವರೂಪವಾಗಿ ಚಿತ್ರಿಸಿ ಮನುಷ್ಯನ ಸಾಧನೆಗಳನ್ನು ನಿರಾಕರಿಸಿತು.

ಜಂಗಮ ಸ್ವರೂಪವನ್ನು ಹೊತ್ತು ಬಂದ ವೀರಶೈವ ಧರ್ಮ ಮತ್ತು ಸಾಹಿತ್ಯ ವಿಗತಿಯ ಕಡೆ ಸಾಗುತ್ತಾ, ಸ್ಥಾವರಕ್ಕೆ ಮುಖ ಮಾಡಿ ವೈದಿಕಧರ್ಮದ ಮತ್ತೊಂದು ಕವಲಾಗಿ ಮಾರ್ಪಾಡಿತ್ತು. ಇದರ ವಿರುದ್ಧ ಜನಪದರು ಸಿಡಿದು ನಿಂತು ಮೌಖಿಕ ಕಾವ್ಯಗಳ ಮುಖಾಂತರ ಸಾಂಸ್ಕೃತಿಕ ನಾಯಕನನ್ನು ಸೃಷ್ಟಿಸಿ ರಂಡ ಮುಂಡ ಜಂಗಮನನ್ನು ಪ್ರಶ್ನಿಸುತ್ತಾ ಕಲ್ಯಾಣವನ್ನು ಶುದ್ಧಿ ಮಾಡುವ ಮುಖಾಂತರ ಚರಿತ್ರೆಯಲ್ಲಾದ ದಮನಗಳನ್ನು ನೀಗಿಸಿಕೊಳ್ಳುವುದಕ್ಕೆ ಪ್ರಯತ್ನ ಪಟ್ಟರು. ●

ಇಂಡಿಯಾದಲ್ಲಿ ‘ನಗು’ ದುಃಖವನ್ನು ಅದುಮುವ ಮುಚ್ಚಳ

ಚಿ



ಸಂಕಟಗಳು ದುಃಖವಾಗಿ ಸಿಡಿಯಲಾರದೆ “ನಗುವಾಗಿ” ಅರಳುವ ಯಾಂತ್ರಿಕ ಕಸರತ್ತುಗಳು ಇಂಡಿಯಾದ ಮನುಷ್ಯರ ಬದುಕಾಗಿದೆ. ಪ್ರಾಕೃತಿಕ ಚಲನೆಯ ಬದುಕಿಗೂ ಮತ್ತು ಸಾಮಾಜಿಕ ಜೀವನದ ವೇಗಕ್ಕೂ ಸಂಬಂಧ ಕಲ್ಪಿಸಿಕೊಳ್ಳಲು ಇಲ್ಲಿ ಸಾಧ್ಯವಾಗದೇ, ನೈಸರ್ಗಿಕ ಕ್ರಿಯೆಗಳಿಂದಲೂ ಸಂತುಷ್ಟಗೊಳ್ಳಲಾರದೇ, ಸಾಮಾಜಿಕ ಬದುಕಿಗೆ ಎದೆಯೊಡ್ಡಲಾರದೇ, ಬದುಕನ್ನು ವಿಧಿ ಅಂತಲೂ, ಸಾವನ್ನು ಬದುಕು ಅಂತಲೂ ಜೀವಿಸುವುದನ್ನು ಇಲ್ಲಿನ ಮನುಷ್ಯರ ದಿನಚರಿಗಳು ರಾಟೆಯಂತೆ ಸುತ್ತುತ್ತಿವೆ. ತಮ್ಮದೇ ಶಾರೀರದಲ್ಲಿ ಉತ್ಪತ್ತಿಯಾಗುವ ಜೀವ ಗ್ರಂಥಿ ಲವಣಾಂಶಗಳನ್ನು ಹೊರ ಹಾಕಲು ಇಲ್ಲಿನ ಸಾಮಾಜಿಕ ಒಪ್ಪಂದಗಳು ಬಿಡುವುದಿಲ್ಲ. ತಮ್ಮ ಜೀವಕೋಶದಲ್ಲಿ ಪ್ರಕಟಗೊಂಡ ಭಾವ ಲಹರಿಗಳನ್ನು ತಮ್ಮಿಚ್ಛೆಯಂತೆ ಇನ್ನೊಂದು ಜೀವಕೋಶದೊಂದಿಗೆ ಪರಸ್ಪರ ಪ್ರಚೋದಿಸಿಕೊಂಡು ಆನಂದಿಸುವ ಕ್ರಿಯೆಗಳನ್ನು ಇಲ್ಲಿನ ಸಾಮಾಜಿಕ ಆಚರಣೆಗಳು ನಿರ್ಬಂಧಿಸಿವೆ. ಆರ್ಥಿಕ ಸಂರಚನೆಗಳಿಂದ ಉಂಟಾಗುವ ದುಃಖ, ಸಂಕಟ ವ್ಯಥೆಗಳಿಗಿಂತ ಇಲ್ಲಿನ ಸಾಂಪ್ರದಾಯಿಕ ಆಚರಣೆಗಳು ಹೆಚ್ಚು. ದುಃಖ ಹಗೆಯೊಳಗೆ ಬೀಳಿಸಿವೆ. ಭ್ರಮಾತ್ಮಕ ವಿಧಿ ವಿಧಾನಗಳ ನಡತೆಗಳು ಇಲ್ಲಿನ ಮನುಷ್ಯರನ್ನು ಹೈರಾಣಾಗಿಸಿವೆ. ಆಧುನಿಕ ವಿಜ್ಞಾನ, ತಂತ್ರಜ್ಞಾನಗಳು ಯಾವುವೂ ಇಲ್ಲಿನ



ತಮ್ಮ ಜೀವಕೋಶದಲ್ಲಿ ಪ್ರಕಟಗೊಂಡ ಭಾವ ಲಹರಿಗಳನ್ನು ತಮ್ಮಿಚ್ಛೆಯಂತೆ ಇನ್ನೊಂದು ಜೀವ ಕೋಶದೊಂದಿಗೆ ಪರಸ್ಪರ ಪ್ರಚೋದಿಸಿಕೊಂಡು ಆನಂದಿಸುವ ಕ್ರಿಯೆಗಳನ್ನು ಇಲ್ಲಿನ ಸಾಮಾಜಿಕ ಆಚರಣೆಗಳು ನಿರ್ಬಂಧಿಸಿವೆ.

....

ದುಃಖಗಳನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಲು ಸಾಧ್ಯವಾಗಿಲ್ಲ.

ಆಂತರಿಕ ಚಲನೆಯಲ್ಲಿ ಉತ್ಪತ್ತಿಯಾಗುವ ಬಯಕೆಗಳನ್ನು ಬಾಹ್ಯವಾಗಿ ಸಾರ್ಥಕ ಪಡಿಸಿಕೊಳ್ಳಲು ಸಾಧ್ಯವಾಗದೆ, ವಾಸ್ತವದಲ್ಲಿ ಕಾಣುವ ಇರಾದೆಯನ್ನು ಇಲ್ಲಿನ ಮನುಷ್ಯರ ವ್ಯಕ್ತಿತ್ವಗಳು ಹದಗೊಳ್ಳದೆ ನಗುವಿನ ಶಾಬ್ದಿಕ ಹೊಳಹುಗಳಲ್ಲಿ ದುಃಖ ಕೆಸರನ್ನು ಕಾಣಬಹುದು.

ಇಂಡಿಯಾದ ಮನುಷ್ಯರ ಮನಸ್ಥಿತಿಯೊಳಗೆ ನಿರಾಳತೆ ಇಲ್ಲದೆ, ದೈಹಿಕ ಚಲನೆ, ಮಾತು, ಉಚ್ಚಾರಣೆ, ಕಣ್ಣುಗಳ ನೋಟ, ಇನ್ನೊಬ್ಬರೊಡನೆ ವ್ಯವಹರಿಸುವ ಸಂಬಂಧದಲ್ಲಿ ನಿಖರತೆಯನ್ನು ಕಾಣಲು ಸಾಧ್ಯವಾಗುವುದಿಲ್ಲ. ನಿಖರತೆಯನ್ನು ಕಾಣಲು ಸಾಧ್ಯವಾಗುವುದಿಲ್ಲ ಅನ್ನ ನೀರು, ಗಾಳಿ, ನಿದ್ರೆ, ಮೈಥುನದಂತಹ ಜೀವಿಗಳ ಅಗತ್ಯತೆಯನ್ನು ದೈವೀಕರಿಸಿಕೊಂಡು ಆಲಾಪಿಸುತ್ತಾ ಕರುಣಾಜನಕವಾಗಿ ಇಲ್ಲಿನ ಮನಸ್ಥಿತಿಗಳು ಜೀವಿಸುವುದನ್ನು ಗುರುತಿಸ ಬಹುದು.

"ಮನಸಾರೆ ನಕ್ಕರೆ ಮುಂದೆ ಕೇಡು ಬರಬಹುದೆಂಬ ಭಯ" "ಕಷ್ಟಕ್ಕೆ ಸಿಕ್ಕಿಕೊಂಡರೆ ಮುಂದೆ ಸುಖ ಬರ ಬಹುದೆಂಬ ಆಶಯ "ಬಂದುದ್ದನ್ನು ಅನುಭವಿಸು, ಏನೇ ಬಂದರು ನಗುತ್ತಿರು" ಎಂಬ ಸಾವಿರ ನುಡಿಗಟ್ಟು, ಗಾದೆಗಳು, ಒಗಟುಗಳು, ತತ್ವಗಳು, ಇಲ್ಲಿನ ಮನುಷ್ಯರನ್ನು ವಿವೇಚಿಸಿ ತನ್ನೊಳಗಿರುವ ಆತ್ಮಸ್ಥೈರ್ಯವನ್ನೂ ಕೆಣಕಿಕೊಳ್ಳುವುದಕ್ಕೆ ಬಿಡದೆ, ಕಮರುವಂತೆ ಮಾಡಿದೆ.

ಉತ್ಪ್ರೇಕ್ಷಿತ ಸತ್ಯಗಳು ಬದುಕಿಗೆ ಅನುವಾರ್ಯವಲ್ಲದ ಕಲ್ಪನೆಗಳು ಇಂಡಿಯಾದಲ್ಲಿ ಅಳದಂತೆ, ಅತ್ತರೆ ನಗುವಂತೆ ಭಾಸವಾಗುವ ರೀತಿಯಲ್ಲಿ ಹೆಣೆದುಕೊಂಡು ತಮ್ಮಗಳ ಆತ್ಮವಿಶ್ವಾಸವನ್ನು ಇನ್ನೊಬ್ಬರಲ್ಲಿ ಕಾಣುವಂತೆ ಮಾಡಿವೆ.

–ಹಾಲ್ಕುರಿಕೆ

ಸಾವಿಗೆ ಸವಾಲಾಗಿ ನಿಲ್ಲುವ ತವಕವಿರಲಿ

ಅಮ್ಮನೆಂಬ ಆಸ್ತಿ ಇನ್ನಿಲ್ಲವಾದಾಗ ಕಂಬನಿಯಲ್ಲಿ ಕೈತೊಳೆಯುತ್ತಿರುವ ನಿಮ್ಮ ಅಂತರಾಳದ ದುಃಖಕ್ಕೆ ನಮ್ಮೆಲ್ಲರ ಅಂತಃಕರಣ ಮಿಡಿಯುತ್ತದೆ. ನಿಜ ಆ ಜಾಗ ಯಾರಿಂದಲೂ ತುಂಬಲು ತುಂಬಿಕೊಡಲು ಸುತಾರಾಂ ಸಾಧ್ಯವಿಲ್ಲಾ.

ಹಿಡಿ ಪ್ರೀತಿಗಾಗಿ ಪ್ರತಿ ಮನುಷ್ಯ ಅನುದಿನ ಅನುಕ್ಷಣ ಹಪಹಪಿಸುವುದು ಸಹಜಗುಣ. ಒಮ್ಮೆ ಯೋಚಿಸೋಣ, ಮುಂಜಾವಿನಲ್ಲಿ ನಾವು ಕಣ್ತೆರೆದಾಗ ಮನೆಯಂಗಳಕ್ಕೆ ಬಂದು ನಿಲ್ಲುವ ಸೂರ್ಯ ಕಿರಣಗಳು 'ಗುಡ್ ಮಾರ್ನಿಂಗ್' ಹೇಳುತ್ತವಲ್ಲಾ, ನಿದ್ರೆಯಲ್ಲಿರುವ ನಮಗೆ ಕಾಕಾ ಅಂತ ಎಚ್ಚರಿಸ್ತಾವಲ್ಲಾ ಮೂಕ ಪ್ರಾಣಿಗಳು ಅಂತ ನಾವಂದುಕೊಂಡ ಕಾಗೆಗಳು ಬೆಂದಕಾಳೂರಿನಲ್ಲಿ ಇನ್ನೂ ಮರೆಯಾಗಿಲ್ಲ.

ನಾವು ಅನಾಥರು ಅಂತ ಭೋರ್ಗರೆಯುವಷ್ಟು ಧಾರಾಕಾರ ಅತ್ತಾಗ ನೆನಪಿಸಿಕೊಳ್ಳೋಣ, ಇರಲು ನೆರಳಂತೆ ಸೂರಿದೆ. ಉಡಲು-ತೊಡಲು ದೇವರು ಅನ್ಯಾಯಮಾಡಿಲ್ಲ. ರಸ್ತೆಬದಿಯಲ್ಲಿ ಬಿಸಾಡಿ ಹೋದ ಚಿಕ್ಕ ಕಂದಮ್ಮ ಜೀವನ ವಿಡೀ ಅಬ್ಬೇಪಾರಿಯಂತೆ ಅಲೆಯುವಾಗ ನಮ್ಮ ಬದುಕು ಪೋಷಕರ ಆಶ್ರಯದಲ್ಲಿ ಸಂತೃಪ್ತಿಯ ಗೂಡಲ್ಲಿ ಅರಳಿರುವುದು ಆ ಪರಮಾತ್ಮನ ಕೃಪೆಯಿಲ್ಲದೇ ಮತ್ತಿನ್ನೇನು.

ಇರುವುದೆಲ್ಲವ ಬಿಟ್ಟು ಇರದಿರದತ್ತ ನಮ್ಮ ತಲ್ಲಣಗಳು ಹೆಚ್ಚಾಗುವುದಲ್ಲವೇ? ಪ್ರತಿ ದಿನ ನಮ್ಮನ್ನು ನಾವು ಕಂಡುಕೊಂಡಂತೆ ಬದುಕುವುದರಿಂದ ಪ್ರೀತಿಯಿಂದ ಬೊಗಸೆಯಲ್ಲಿ ನೀರು ಕುಡಿಸಿದ ಅಮ್ಮನಿಗೆ ಖುಷಿಯಾಗುವುದುಂಟಾ?

ಚಿಕ್ಕವರಿದ್ದಾಗ ಕೈ ತುತ್ತು ಹಾಕಿದ ಪ್ರೀತಿಗೆ ಸರಿಸಾಟಿ ಈ ಜಗದಲ್ಲಿ ಮತ್ತೊಂದಿಲ್ಲ.

ಅಮ್ಮನ ಕನಸು ನಿಮ್ಮ ಅಂತ್ಯ ಯಾವತ್ತಾದರೂ ಬಯಸಿತ್ತಾ? ಖಂಡಿತ ಇಲ್ಲವಲ್ಲ. ಅಮ್ಮನೆಂಬ 'ಯೂನಿವರ್ಸಿಟಿ' ಯಿಂದ ಪಡೆದ ಅನುಭವಗಳ ಮಹಾಪೂರದ ಮುಂದೆ ಈ ಜಗತ್ತಿನ ವಿಶ್ವವಿದ್ಯಾಲಯಗಳು ನೀಡುವ ಸರ್ಟಿಫಿಕೇಟುಗಳು ಶೂನ್ಯ.



ವಿದ್ಯಾ ಕೊಟಬಾಗಿ

ದೇವರಂಥಾ ಅಮ್ಮನಿಂದ ಕಲಿತ ಪಾಠಗಳನ್ನು, ಆದರ್ಶಗಳನ್ನು, ಸೇವೆಯನ್ನು, ಮಮಕಾರವನ್ನು, ಪ್ರೀತಿ ಹಂಚುವ ಗುಣಗಳನ್ನು ನಾವೆಲ್ಲ ಸಮಾಜದ ಪ್ರತಿ ಜೀವಿಗೆ ಹಂಚುತ್ತಾ ಸಾಗಿದರೆ ಎಷ್ಟು ಚೆನ್ನ ಅಲ್ಲವೆ?

ಮದರ್ ಥೆರೇಸಾ ಅವರನ್ನಾಗಲೀ, ಶಾರದಾ ದೇವಿಯನ್ನಾಗಲೀ ಈ ಪ್ರಪಂಚ ಗುರುತಿಸುವುದು ಅವರ ಸಂಸಾರದ ಬದುಕಿನಿಂದಲೇ ಅಥವಾ ಸೇವೆ, ತ್ಯಾಗಗಳ, ಮನವೀಯತೆಯ ಮಮಕಾರದ ಮೂರ್ತಿಗಳೆಂದೇ ನೀವೇ ಹೇಳಬೇಕು.

ಕಣ್ಣೀರಿಟ್ಟು, ನೆನಪಿನ ಪುಟಗಳಿಗೆ ಸರಿದು ದುಃಖಿಸುವುದು ಬೇಡ. ಅಗಲಿಕೆ ಅನಿವಾರ್ಯವಾದಾಗ ಅಂತಹ ಶ್ರೇಷ್ಠ ಪ್ರೀತಿಯನ್ನು ಹಂಚುತ್ತಾ ಸಾಗಿಬಿಡುವ ನಿಸ್ವಾರ್ಥ ಸೇವೆಯಲ್ಲಿ ಬದುಕು ಮುಡಿಪಾಗಿಡಬೇಕು. ಆರೋಗ್ಯ ನೆಮ್ಮದಿಯ ನಿಟ್ಟುಸಿರು ಬಿಡಲು 'ಈ ಪ್ರಕೃತಿಮಾತೆ' ನಮಗೆ ನಿಜವಾದ ಅಮ್ಮ.

ಪ್ರತಿ ಮನುಷ್ಯನಲ್ಲಿ ಭಗವಂತನಿದ್ದಾನೆ' ಎಂಬ ಮಾತು ಸತ್ಯವಾಗಬೇಕು. ಸುಮ್ಮನೆ ಪರಿತಪಿಸುವುದು ಬೇಡ. ಪುರಂದರದಾಸರು ಸುಮ್ಮನೆ ಹೇಳಿಲ್ಲವಲ್ಲ ಈಸಬೇಕು, ಇದ್ದು ಜೈಸಬೇಕು ಅಂತ. ಎಂದಾದರೂ ಆ ಸೌಭಾಗ್ಯ ಬರಲಿ ಈ ಕ್ಷಣ ಬಂದರೂ ಸರಿಯೇ ಆತ್ಮತೃಪ್ತಿಯಿಂದ ಬದುಕಿ ಬಾಳೋಣ ಎನಂತಿರಾ?



ಹಾಲ್ಕುರಿಕೆ ಥಿಯೇಟರ್ ಮಿರರ್ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಲೇಖನಗಳು ತುಂಬ ಹರಿತವಾಗಿವೆ. ಸಮಾಜದ ಅಂಕುಡೊಂಕುಗಳನ್ನು ನಾಟಕದಲ್ಲಿ ತೋರಿಸುವ ವಿಧಾನವೇ ಈ ಪತ್ರಿಕೆಯು ಮಾಡುತ್ತಾ ಬರುತ್ತಿದೆ. ಬಂಡಾಯ ಸಾಹಿತ್ಯ ಮತ್ತು ಬಂಡಾಯ ನಾಟಕಗಳು ಇವೆರಡರ ಮಿಶ್ರಣ ಪತ್ರಿಕೆಯ ಲೇಖನಗಳಲ್ಲಿವೆ.

ಮೈಕೋ ಶಿವಶಂಕರ್

ರಂಗ ನಿರ್ದೇಶಕರು, ಬೆಂಗಳೂರು

ಥಿಯೇಟರ್ ಮಿರರ್ ಪತ್ರಿಕೆಯು ತುಂಬ ಆಕರ್ಷಣೀಯವಾಗಿದೆ. ಇದು ರಂಗಭೂಮಿಯ ಹಲವು ವಿಸ್ತಾರ ಸತ್ಯಗಳನ್ನು ಹೇಳುತ್ತಿದೆ. ಶಿಕ್ಷಣ ರಂಗದಲ್ಲಿ ರಂಗ ಮಾಧ್ಯಮವನ್ನು ಪರಿಚಯಿಸಿ ಕೊಡುವಂತಹ ಉತ್ತಮವಾದ ಬೆಳವಣಿಗೆಗೆ ಸಹಕಾರಿಯಾಗುತ್ತಿದೆ. ನಟನೆಯ ಬಗ್ಗೆ ಆಸಕ್ತಿಯನ್ನು ಕೆರಳಿಸುವಂತಹ ಅಂಶವನ್ನೂ ಒಳಗೊಂಡಿದೆ. ಕನ್ನಡ ಭಾಷೆ, ಸಂಸ್ಕೃತಿ, ಕಲೆ ಇವುಗಳನ್ನು ಎತ್ತಿ ಹಿಡಿಯುವಲ್ಲಿ ಉತ್ತಮವಾದ ಪಾತ್ರವನ್ನು ನಿರ್ವಹಿಸುತ್ತಿದೆ. ಮತ್ತು ಅತೀ ಸೂಕ್ಷ್ಮ ವಿಚಾರಗಳನ್ನು ಕಿರಿಯರಿಂದ ಹಿರಿಯರವರೆಗೂ ಅರ್ಥವಾಗುವಂತೆ ಪತ್ರಿಕೆಯು ಅರ್ಥವಾಗುವಂತೆ ಮಾಡುತ್ತಿದೆ.

ಕೆ.ವಿ. ಶ್ರೀನಿವಾಸ್

ಶಿಕ್ಷಕರು, ಗೋವಿಂದರಾಜನಗರ, ಬೆಂಗಳೂರು

ರಂಗಭೂಮಿಯನ್ನು ಕೇಂದ್ರವಾಗಿಟ್ಟುಕೊಂಡು ಕನ್ನಡದಲ್ಲಿ ಕೆಲವೇ ಕೆಲವು ಪತ್ರಿಕೆಗಳು ಬರುತ್ತಿದ್ದು ಹಾಲ್ಕುರಿಕೆ ಥಿಯೇಟರ್ ಮಿರರ್ ರಂಗಭೂಮಿಗೆ ಪೂರಕವಾದ ಕಲೆ, ಸಾಹಿತ್ಯ, ಹಾಗೂ ಸಾಂಸ್ಕೃತಿಕ ನೆಲೆಗಳನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ತನ್ನದೇ ಆದ ದೃಷ್ಟಿಕೋನದಿಂದ ವಿಶ್ಲೇಷಿಸುತ್ತಾ ಹೊಸ ನೋಟ ಕೊಡುತ್ತಿದೆ. ಅಲ್ಲದೇ ಪ್ರಯೋಗ ನಿರತ ಹಲವು ಹೊಸ ಬರಹಗಾರರಿಗೆ ವೇದಿಕೆ ಯಾಗಿರುವುದು ವಿಶೇಷ. ಮಕ್ಕಳ ಮನೋರಂಗ, ಸಂಚಿಕೆಗೊಂದು ಸ್ವಗತ, ಇತರೆ ಎಲ್ಲಾ ಕಾಲಂಗಳು ಒಂದಲ್ಲಾ ಒಂದು ರೀತಿಯಲ್ಲಿ ಅರ್ಥಗರ್ಭಿತ ವಾಗಿರುತ್ತದೆ. ಸಂಪಾದಕೀಯ ಚಿಕ್ಕದಾಗಿದ್ದರೂ ಹೆಚ್ಚು ಅರ್ಥಗಳಿಂದ ಬಿಚ್ಚಿಕೊಳ್ಳುತ್ತಿದೆ.

ನಿಂಗು ಸೊಲಗಿ

ರಂಗಕರ್ಮಿ, ಮತ್ತು ಶಿಕ್ಷಕರು, ಮುಂಡರಗಿ

ಹಾಲ್ಕುರಿಕೆ ಥಿಯೇಟರ್ ಪತ್ರಿಕೆಯು ಈ ಕಾಲಘಟ್ಟದ ಉದಯೋನ್ಮುಖ ಕಲಾವಿದರು, ಸಾಹಿತಿಗಳು, ರಂಗಕರ್ಮಿಗಳು ಮತ್ತು ಸಾಂಸ್ಕೃತಿಕ ಚಿಂತಕರಿಗೆ ವೇದಿಕೆಯಾಗಿದೆ. 80ರ ದಶಕದಲ್ಲಿ ಆದ ಸಾಹಿತ್ಯಕ ಬೆಳವಣಿಗೆಯನ್ನು ಮತ್ತೆ ಥಿಯೇಟರ್ ಮಿರರ್ ಪತ್ರಿಕೆಯ ಮೂಲಕ ಗುರುತಿಸಬಹುದಾಗಿದೆ. ಹಿರಿಯ ಸಾಹಿತಿ ಮತ್ತು ಯುವ ಸಾಹಿತಿಗಳನ್ನು ಪರಸ್ಪರ ಸೇರಿಸುವ ಸೇತುವೆಯೂ ಕೂಡ ಆಗಿದೆ. ಇಂದಿನ ಜಾಗತೀಕರಣದಲ್ಲಿ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯಗಳು ತುಂಬಾ ಸಂಕಷ್ಟದಲ್ಲಿರುವ ಹೊತ್ತಿನಲ್ಲೂ ಥಿಯೇಟರ್ ಮಿರರ್ ಕ್ರಿಯಾಶೀಲತೆಯಿಂದ ಬರುತ್ತಿರುವುದು ಆಶಾದಾಯಕ. ನನಗನ್ನಿಸುವ ಹಾಗೆ ಈ ಮಿರರ್ ಪತ್ರಿಕೆಯು ಮಂತ್ಲಿಗೆ ಬದಲಾಗಿ ವೀಕ್ಲಿಗೆ ಬಂದರೆ ಸೂಕ್ತ.


ಎಸ್.ವಿ. ಹೂಗಾರ್

ಪೇಂಟಿಂಗ್ ಆರ್ಟಿಸ್ಟ್, ಬೆಂಗಳೂರು

ಪುಸ್ತಕ ಪರಿಚಯ

ಕವಿ ಅಥವಾ ಕವಿತೆಗೆ ಈ ರೀತಿಯ ಮಾನದಂಡಗಳೇ ಇರಬಹುದು ಎಂದು ಆರೋಪಿಸುವುದು ತಪ್ಪಾಗಬಹುದು. ಅದು ಕಾಲಘಟ್ಟ, ಸಂಧರ್ಭ, ಸನ್ನೀವೇಶಗಳಿಗೆ ಅನುಗುಣವಾಗಿ ತನ್ನದೇ ಧಾಟಿಯಲ್ಲಿ ಚಲಿಸುತ್ತಿರುತ್ತದೆ. ಒಂದು ಬಂಧಕ್ಕೆ ಒಳಪಡಿಸುವುದು, ಒಬ್ಬ ವ್ಯಕ್ತಿಯ ಏಕರೂಪತೆಗೆ ಕಾರಣವಾಗಿಬಿಡಬಹುದು. ಇವೆಲ್ಲವನ್ನು ಮೀರಿ ತನ್ನದೇ ಒಂದು ನೆಲೆಯಲ್ಲಿ ಕಾವ್ಯ ಕಟ್ಟುವ ಕ್ರಿಯೆಯನ್ನು ಮಂಜುನಾಥ. ಎಸ್‌ರವರು, "ಮನುಷ್ಯ ಯುದ್ಧದ ಬಣ್ಣಗಳು" ಎಂಬ ಕವನ ಸಂಕಲನದಲ್ಲಿ ಹೆಣೆದಿದ್ದಾರೆ. ಇವರ ಕಾವ್ಯ ಬಂಧ ಸ್ವಾಭಾವಿಕ ಆರ್ದತೆ, ನೈಜ ಅನುಭವಗಳ ಅನ್ವೇಷಣೆಯ ಪಥದಲ್ಲಿ ಅರಳುತ್ತಾ, ಕಂಪನ್ನು ಬೀರುತ್ತವೆ. ಯಾವುದೋ ಒಂದು ಸಿದ್ಧಾಂತ, ಯಾವುದೊ ಒಂದು ಧೋರಣೆಗಳಿಗೆ, ಚಿಂತನೆಗಳಿಗೆ, ಒಂದು ತತ್ವಕ್ಕೆ ಕಾವ್ಯ ಹೆಣೆಯದೇ ಸಮಗ್ರ ತಾತ್ವಿಕ ರೂಪದಲ್ಲಿ ಕಾವ್ಯ ಕಟ್ಟುತ್ತಾರೆ. ಜಗತ್ತನ್ನು ಗ್ರಹಿಸುವ ಕಣ್ಣಿನ ನೋಟ, ಕಾವ್ಯದ ನೋಟವು ಸಹ ಆಗುವುದಕ್ಕೆ ಸಾಧ್ಯ ಎಂಬುದನ್ನು ತನ್ನದೇ ಶೈಲಿಯಲ್ಲಿ ನಿರೂಪಿಸಿದ್ದಾರೆ. ಕವಿ ಕವಿತೆಯನ್ನು ಬರೆದರೆ ಕುವೆಂಪು, ಬೇಂದ್ರೆ, ಅಡಿಗ, ಲಂಕೇಶ್, ಇನ್ನಿತರರು ಬರೆಯುವ ಹಾಗೇ ಬರೆಯ ಬೇಕು ಇಲ್ಲದಿದ್ದರೆ ಅವು ಕವಿತೆಗಳೇ ಅಲ್ಲ ಎನ್ನುವ ಮನಸ್ಸುಗಳು ಈಗಲೂ ಸಹ ಚಾಲ್ತಿಯಲ್ಲಿವೆ. ಇಂತಹ ಸಂದರ್ಭದಲ್ಲಿ ಮಂಜುನಾಥ. ಎಸ್ ರವರ ಕವಿತೆಗಳೂ ಸ್ವೋಪಜ್ಞತೆಯ ಮಾದರಿಯಲ್ಲಿ ತೆರೆದುಕೊಳ್ಳುತ್ತಾ, ಆಲೋಚನೆಗಳ ಭಾವ ಲಹರಿಗೆ ಒಂದೊಂದು ವಿವೇಚನೆಗಳ ಅಕೃತಿಗಳಾಗಿ ರೂಪುಗೊಳ್ಳುತ್ತವೆ.





ವಾಸ್ತವಿಕ ಜಗತ್ತಿನಲ್ಲಿರುವ ಬಿಕ್ಕಟ್ಟು, ಕ್ರೂರತೆ, ಹಿಂಸೆಗಳನ್ನು ಕಂಡು, ತನ್ನ ಅನುಭವದೊಳಗೆ ಹುದುಗಿರುವ ಚಡಪಡಿಕೆಗಳು ಕಾವ್ಯವಾಗಿ ಹೊರಹೊಮ್ಮಿ ಮನುಷ್ಯ ಯುದ್ಧದ ಬಣ್ಣಗಳಾಗಿವೆ. ಮನದೊಳಗೆ ಕಾಡುತ್ತಿರುವ ಎಷ್ಟೋ ವಿಸ್ಮಯಗಳು, ದುಮ್ಮಾನಗಳು ಹಾಗೂ ಕಂಡ ಸತ್ಯಗಳ ಬೆನ್ನು ಹತ್ತಿ ಪರಕಾಯ ಸ್ಥಿತಿಗೆ ತಲುಪಿದಾಗ ಉಂಟಾದ ತಲ್ಲಣ, ತಳಮಳಗಳು ಕವಿತೆಗಳು ಹಾದಿಗೆ ಬೆಳಕಾಗಿ ಪಯಣಿಸಲು

ಮಂಜುನಾಥ. ಎಸ್. ರವರಿಗೆ ಸಾಥ್ ೀಡಿವೆ. ಕೋಮುವಾದ, ಜಾತೀಯತೆ, ಭ್ರಷ್ಟಾಚಾರ ಮುಂತಾದ ಅನಿಷ್ಟ ಪದ್ಧತಿಗಳಿಗೆ ತಮ್ಮ ಕವಿತೆಗಳ ಮೂಲಕ ಮುಖಾ ಮುಖೀ ಯಾಗುತ್ತಲೇ, ಅಂತರಂಗದ ಆಶಯ ಗಳನ್ನು ಹರಹುತ್ತಾ ಸಾಗುತ್ತಾರೆ. ಕವಿತೆಗಳು ಸರಳವಾಗಿ ಸೃಷ್ಟಿಯಾದರೂ ಸಹ ಕವಿತೆಯ ಂದಿನ ಕಾಳಜಿ, ಬದ್ಧತೆ, ತೀವ್ರತರವಾದದ್ದು, ಸಮಾನತೆಯ ಪ್ರಜ್ಞೆ ಇವರ ಕಾವ್ಯ ಪ್ರಜ್ಞೆಯ ವಸ್ತುವಾಗಿ ಹೆಚ್ಚಿನ ಕವಿತೆಗಳಲ್ಲಿ ಭಿನ್ನಭಿನ್ನ ೆಲೆಗಳಲ್ಲಿ ಹೊರ ಹೊಮ್ಮಿರುವುದನ್ನು ಕಾಣ ಹುದು. ವರ್ತಮಾನದಲ್ಲಿರುವುದನ್ನು ಂಡಂತಹ ಸತ್ಯಗಳ ಅರಿವು ಇವರ ಕವಿತೆಗಳಲ್ಲಿ ಾಸುಹೊಕ್ಕಾಗಿದೆ. ಆಧುನಿಕತೆಯೊಳಗೆ ಾಗತೀಕರಣ, ಉದಾರೀಕರಣದ ಲುವುಗಳು ಸೃಷ್ಟಿಸುವ ಬಿಕ್ಕಟ್ಟುಗಳನ್ನು ಸಹ ವೇಚಿಸಲು ಪ್ರಯತ್ನಿಸುತ್ತಿರುವ ನೆಲೆ ಇದೆ. ಪ್ರಸ್ತುತ ಸನ್ನಿವೇಶಗಳಿಗೆ ಅನುಗುಣವಾಗಿ ಾವ್ಯದ ವಸ್ತು, ಪಾತ್ರ, ಸಂಕೇತಗಳು ಮನುಷ್ಯ ಯುದ್ಧದ ಬಣ್ಣಗಳು' ಸಂಕಲನದಲ್ಲಿ ರೆದುಕೊಳ್ಳುತ್ತಾ ಸಾಗುತ್ತದೆ.

ಕಾವ್ಯ ಒರತೆಯ ಆಳದ ಅನ್ವೇಷಣೆಯಲ್ಲಿ ೊದಲ ಹೆಜ್ಜೆ ಗುರುತಾಗಿ ಈ ಕೃತಿ ಂಜುನಾಥ್‌ರವರಿಗೆ ಸಾಕ್ಷಿಯಾಗಿದೆ. ಾಮಾಜಿಕ ವ್ಯವಸ್ಥೆಯೊಳಗೆ ಅಡಗಿರುವ ಮಾನವೀಯತೆ, ಅನ್ಯಾಯ, ಶೋಷಣೆ, ೌರ್ಜನ್ಯ, ಅಕ್ರಮಗಳ ಬಗೆಗಿನ ಸಿಟ್ಟು ಡವುಗಳು ಪ್ರತಿ ಕವನದಲ್ಲಿ ಕವಿಯ ನದಾಳದಿಂದ ವ್ಯಕ್ತವಾಗುತ್ತಾ ಹೋಗುತ್ತದೆ. ದು ಕಾವ್ಯ ಕಟ್ಟುವ ಸಂದರ್ಭದಲ್ಲಿ ವಿಗಳು ಎನ್ನಿಸಿಕೊಂಡಿರುವವರಿಗೆ ರಲೇಬೇಕಾದಂತಹ ಒಂದು ಸಣ್ಣ ದ್ಧತೆಯಾಗಿರುತ್ತದೆ. ಇವರ ಎಲ್ಲಾ ದ್ಯಗಳು ಬೆರಗನ್ನುಂಟು ಮಾಡದಿದ್ದರೂ, ಲವು ಪದ್ಯಗಳು ಅಂತರಾಳದ ತಳಮಳ ಿಗೆ ವೈಶಿಷ್ಟ್ಯಪೂರ್ಣವಾದ ಸಾಂಕೇತಿಕ ರೂಪವನ್ನು ಸೃಷ್ಟಿಸುವುದು ಸೋಜಿಗ ನ್ನುಂಟು ಮಾಡುತ್ತದೆ.

ರಾಮಕೃಷ್ಣಹುಲಕುಂಟೆ

ಹಾಲ್ಕುರಿಕೆ
ಥಿಯೇಟರ್
ಮಿರರ್

ಹೊಸ ಪುಸ್ತಕ ಪರಿಚಯ

'ಹಾಲ್ಕುರಿಕೆ ಥಿಯೇಟರ್ ಮಿರರ್' ಪತ್ರಿಕೆಯು ಹೊಸ ಪುಸ್ತಕಗಳ ವಿಮರ್ಶನಾತ್ಮಕ ಪರಿಚಯವನ್ನು ಮಾಡುತ್ತಿದೆ. ಕತೆ, ಕವನ, ಕಾದಂಬರಿ, ನಾಟಕ ಮತ್ತಿತರ ಪ್ರಕಾರದ ಕೃತಿಗಳನ್ನು ಕಳುಹಿಸಿಕೊಡಬಹುದು.

ವಿಳಾಸ :
ಹಾಲ್ಕುರಿಕೆ ಥಿಯೇಟರ್
ಎಂ.ಎಸ್. ಫಾರಂ, ಚಿಕ್ಕ ಗುಬ್ಬಿ
ದೊಡ್ಡ ಗುಬ್ಬಿ ಪೋಸ್ಟ್
ಬೆಂಗಳೂರು – 560 049
ಫೋನ್ : 9379712029
080–32482767, 9980283968
e-mail :
halkurikeconcept@
yahoo.co.in



* ನೀವು ಪೈಂಟಿಂಗ್ ಅಥವಾ ಈ ಕಲಾಕ್ಷೇತ್ರಕ್ಕೆ ಹೇಗೆ ಬಂದಿರಿ?

– ಚಿಕ್ಕ ವಯಸ್ಸಿನಿಂದಲೇ ಪೈಂಟಿಂಗ್ ಮೇಲೆ ಆಸಕ್ತಿ ಇತ್ತು. ಒಂದು ದಿನ ಕೆನ್ ಕಲಾ ಶಾಲೆಗೆ ಹೋದಾಗ ಹಡಪದ್ ಮೇಷ್ಟ್ರು ಕಂಡರು. ಅಂದ್ರೆ ಆಗ ಅವರು ಅಂತ ನನಗೆ ಗೊತ್ತಿರಲಿಲ್ಲ. ನಂತರ ಪ್ರತಿದಿನ ಹೋಗಲಿಕ್ಕೆ ಶುರುಮಾಡಿದೆ. ಹಾಗೇ ಒಂದೆರಡು ದಿನ ಹಾಬಿ ಕ್ಲಾಸ್‌ಗೆ ಅಂತ ಹೋದೆ. ಅಲ್ಲಿ ಅವರು ಮಾಡೆಲಿಂಗ್ ಡ್ರಾಯಿಂಗ್, ಸ್ಟಿಲ್ ಡ್ರಾಯಿಂಗ್ ಹೇಳಿಕೊಡ್ತಾ ಇದ್ರು, ಹಾಗೆ ಅಲ್ಲಿ ಪ್ರತಿದಿನ ಹೋಗ್ತಾ ಇದ್ದೆ. ಅಲ್ಲಿ ಚೇರ್ ಎತ್ತಿಡು, ಹಾಗೆ ಹೀಗೆ ಕೆಲಸ ಹೇಳ್ತಾ ಇದ್ರು, 6–7 ವರ್ಷ ಅವರ ಹತ್ತಿರಾನೇ ಇದ್ದೆ. ನಂತರ ಅವರು ನನ್ನ ಪ್ರತಿಭೆನ ಗುರುತಿಸಿ 'ನಿನಗೆ ಎಕ್ಸಾಂ ಕಟ್ಟಿಸ್ತೀನಿ ಡಿ.ಎಂ.ಸಿ. ಮಾಡಿಸ್ತೀನಿ ನಿನ್ನನ್ನ ಒಬ್ಬ ಆರ್ಟಿಸ್ಟ್ ಮಾಡ್ತೀನಿ' ಅಂತ ಹೇಳ್ತಾ ಇದ್ದರು. ಆ ಸಮಯದಲ್ಲಿ ನನಗೆ ಬಹಳ ಕಷ್ಟ ಇತ್ತು. ಎಕ್ಸಾಂ ಕಟ್ಟೋ ಸ್ಥಿತಿಯಲ್ಲೇ ಇರಲಿಲ್ಲ. ಅವರು ಅಕಾಡೆಮಿ ಅಧ್ಯಕ್ಷರಾದಾಗ ಅವರು ನನಗೆ ಇಲ್ಲಿ ಲಲಿತಕಲಾ ಅಕಾಡಮಿಯಲ್ಲಿ ಕೆಲಸಕ್ಕೆ ಸೇರಿಸಿದರು. ಕಲಾವಿದರ ಒಡನಾಟ, ಕಲಾಕೃತಿಗಳನ್ನು, ಕಲಾಪ್ರದರ್ಶನಗಳನ್ನು ನೋಡ್ತಾ ನೋಡ್ತಾ ನನಗೆ ಹೆಚ್ಚೆಚ್ಚು ಕಲೀಲಿಕ್ಕೆ ಅನುಕೂಲ ಆಯ್ತು

* ನೀವು ರೆಗ್ಯೂಲರ್ ಕಾಲೇಜಿಗೇನೂ ಹೋಗಲಿಲ್ವ?

ರೆಗ್ಯೂಲರ್ ಕಾಲೇಜಿಗೆ



ಓ. ವೆಂಕಟೇಶ್

ಕಲೆ

ಹೋಗಲಿಲ್ಲ. ಇತ್ತೀಚೆಗೆ ನಾನು ಮೈಸೂರು ಮುಕ್ತ ವಿಶ್ವ ವಿದ್ಯಾನಿಲಯದಿಂದ ಬಿ. ಎಫ್. ಎ. ಪದವಿ ಪಡೆದೆ. ಹಿರಿಯ ಕಲಾವಿದರಾದಂತಹ ಹಿರೇಗೌಡರು ಅವರ ಮಾರ್ಗದರ್ಶನದಲ್ಲಿ. ಹಾಗೆ ಕಾಲೇಜಿಗೆ ಹೋಗಿದ್ದಕ್ಕೆ ನನಗೆ ಬೇಸಿಕ್ ಎಲ್ಲಾ ಗೊತ್ತಾಯಿತು.

*** ನೀವು ಯಾವ ತರದ ಮಾದರಿಯ ಕಲಾಕೃತಿಗಳನ್ನು ಬಣ್ಣಗಳಲ್ಲಿ ನಿರ್ಮಿಸುತ್ತೀರಿ?**

ನನ್ನ ಬಣ್ಣಗಳು ಬಹಳ ಅಕರ್ಷಣೀಯವಾಗಿರುತ್ತವೆ. ಸಾಮಾನ್ಯ ಜನರಿಗೂ ಅಕರ್ಷಿತವಾಗಿರುತ್ತವೆ. ಮತ್ತು ನಾನು ಮೈಸೂರು ವಿಶ್ವವಿಖ್ಯಾತ ದಸರ ಇದೆಯಲ್ಲಾ ಅದರ ಜಂಬೂ ಸವಾರಿ, ಮತ್ತು ಅಲ್ಲಿನ ದೇವಸ್ಥಾನಗಳ ಪರಿಸರಗಳನ್ನು ಇಟ್ಟುಕೊಂಡು ಹೆಚ್ಚು ಕಲಾಕೃತಿ ರಚಿಸಿದ್ದೀನಿ ಮತ್ತು ನಮ್ಮ ಹಳ್ಳಿಯ ವಾತಾವರಣ ಇಟ್ಟುಕೊಂಡು ಡೋರ್ ಸಿರೀಸ್ ಅಂತ ಮಾಡಿದ್ದೀನಿ.

*** ಡೋರ್ ಸಿರೀಸ್ ಅಂದರೆ ಏನು?**

ಡೋರ್ ಅಂದರೆ ಬಾಗಿಲು, ಎಷ್ಟೋ ಬಡವರ ಮನೆಗಳಿಗೆ ಡೋರ್ ಇರಲ್ಲ. ಆ ಬಾಗಿಲು ಇಲ್ಲದೆ ಇದ್ರೂ ಬಹಳ ರಕ್ಷಿತವಾಗಿರ್ತಾರೆ. ಅದು ಶ್ರೀಮಂತರಲ್ಲಿ ಕಂಡು ಬರುವುದಿಲ್ಲ. ಬಡವರು ಬಾಗಿಲೇ ಇಲ್ಲದಿದ್ರೂ ಕಣ್ತುಂಬ ನಿದ್ದೆ ಮಾಡ್ತಾರೆ. ಅದನ್ನ ಇಟ್ಟುಕೊಂಡು ಡೋರ್ ಸಿರೀಸ್ ಮಾಡ್ತಾ ಇದ್ದೀನಿ ಅಂದ್ರೆ ಬಡತನಕ್ಕೆ



ಯಾವುದೇ ರಕ್ಷಣೆ ಬೇಕಾಗಿಲ್ಲ. ಅತ್ಮಸ್ಥೈರ್ಯದಿಂದ ಜೀವನ ಮಾಡ್ತಾ ಇರ್ತಾರೆ. ಅವರನ್ನ ರಕ್ಷಣೆ ಮಾಡಕೊಳ್ಳೊ ಶಕ್ತಿ ಅವರಿಗೆ ಇದೆ.

*** ನೈಟ್ ಅಂಡ್ ಡೇ ಅಂತ ಒಂದು ಸೀರೀಸ್ ಇದೆ. ಅದರ ಮೂಲಕ ಏನು ಹೇಳಲಿಕ್ಕೆ ಹೊರಟಿದ್ದೀರ?**

ಮನುಷ್ಯ ಯಾವತ್ತೂ ಒಂದೇ ರೀತಿ ಇರಲಿಕ್ಕೆ ಸಾಧ್ಯವಿಲ್ಲ. ರಾತ್ರಿಯಾದ ಮೇಲೆ ಹಗಲಾಗುತ್ತೆ. ಹಗಲಾದ ಮೇಲೆ ರಾತ್ರಿಯಾಗುತ್ತೆ. ಅದನ್ನ ನಾನು ಉದಾಹರಣೆಯಾಗಿ ಇಟ್ಟುಕೊಂಡು ಮಾಡಿದ್ದೇನೆ.

*** ನೈಟ್ ಅಂಡ್ ಡೇ ಯನ್ನು ಬಂಬಿಸಲಿಕ್ಕೆ ಕಲರ್ಸನ್ನು ಬಳಸುವಾಗ ನಿಮಗೆ ಯಾವ ರೀತಿಯ ಫೀಲ್ ಅಯ್ತು?**

ಬಣ್ಣಗಳಲ್ಲಿ ಹಳ್ಳಿ ದೃಶ್ಯ ಕಾಣ್ತಾ ಇರುತ್ತೆ. ಬ್ಲಾಕ್ ಅಂಡ್ ವೈಟ್ ಅಥವಾ ನೈಟ್ ಅಂಡ್ ಡೇ ಇದರಲ್ಲಿ ನನಗೆ ಬಡವ ಶ್ರೀಮಂತ ಅನ್ನೋದು ಕಾಣ್ತಾ ಇರುತ್ತೆ.

*** ಬಡವ ಮತ್ತು ಶ್ರೀಮಂತ ಅಂತ ಹೇಳಿದಿರಿ ಬಡವನ ಚಹರೇನ ಮತ್ತು ಬಡತನವನ್ನು ಬಿಂಬಿಸಲಿಕ್ಕೆ ಯಾವ ತರದ ಬಣ್ಣಗಳನ್ನು ಬಳಸ್ತೀರಿ?**

ಬ್ಲಾಕ್, ಬ್ರೌನ್, ಗ್ರೀನ್, ಯೆಲ್ಲೋ ಅಕರ್, ಈ ರೀತಿ ಮೈಲ್ಡ್ ಆಗಿರೋ ಕಲರ್ಸ್ ಎಲ್ಲಾ ಬಡತನದ್ದು ಅಂದುಕೊಂಡಿದ್ದೀನಿ. ಇನ್ನು ರಿಚ್ ಇರುವ, ವೈಟ್, ರೆಡ್ ಇವೆಲ್ಲಾ ಶ್ರೀಮಂತಿಕೆಯ ಸಂಕೇತ ಅಂತ ಭಾವಿಸಿದ್ದೀನಿ.

*** ನಿಮ್ಮ ದಸರಾ ಸಿರೀಸ್ ನಲ್ಲಿ ನಿಮ್ಮ ಪೈಂಟಿಂಗ್ ಗಮನಿಸಿದರೆ ಅಲ್ಲಿ ಅ ಛತ್ರಿ ಸಿಂಬಲಿಕಲ್ ಆಗಿ ಇರುತ್ತೆ. ಇದರ ಬಗ್ಗೆ ಹೇಳಿ?**

ದಸರ ಅಂದ್ರೆ ಸಂಪೂರ್ಣವಾಗಿ ಏನೂ ಸ್ಪಷ್ಟತೆ ಕಾಣಲ್ಲಾ. ಅಬ್ಸ್ಟ್ರಾಕ್ಟ್ ಆಗೇ ಇರುತ್ತೆ. ದೂರಕ್ಕೆ ನಾನು ಸಿಂಬಾಲಿಕಲ್ ಆಗಿ ಇಟ್ಟುಕೊಂಡಿದ್ದೀನಿ. ಮತ್ತು ವಿಶ್ವವಿಖ್ಯಾತವಾಗಿರುವ ಮೈಸೂರು ದಸರ ಅಷ್ಟೇ ಎತ್ತರದಲ್ಲಿದೆ ಅನ್ನೋ ಭಾವನೆ ಅಲ್ಲಿ ಮೂಡಿ ಬಂದಿದೆ. ಬಹುಶಃ ಮೈಸೂರು ದಸರ ಬಡವನಿಗೆ ಕಾಣಲ್ಲ ಮೆಲ್ನೋಟಕ್ಕೆ ಎಲ್ಲಾ ಚೆನ್ನಾಗಿದ್ರೂ ಕಾಣೋದಿಲ್ಲ. ಅಬ್ಸ್ಟ್ರಾಕ್ಟ್ ಆಗೇ ಇರುತ್ತೆ. ಆ ಮಹಾರಾಜರು ಎಲ್ಲಾ ಬಡವನಿಗೆ ಮರೀಚಿಕೆ ಯಾಗೇ ಇರುತ್ತೆ.

*** ನಿಮ್ಮ ಕಲರ್ ಕಾಂಬಿನೇಷನ್ ಅನ್ನು ನೀವಾಗೇ ಸೃಷ್ಟಿಸಿಕೊಂಡಿರಾ? ಅಥವಾ ಎಲ್ಲೋ ಓದಿ, ಕೇಳಿ ಅಥವಾ ಇನ್ನೂ ಬೇರೆ ಬೇರೆ ಥರದಲ್ಲಿ ಕಲರ್ ಸೆನ್ಸ್ ಬಂತಾ?**

ನಾನಾಗೇ ಮಾಡ್ತಾ ಮಾಡ್ತಾ ಸೃಷ್ಟಿಯಾಗಿರೋದೇ ಹೊರತು, ನೋಡಿ, ಓದಿ, ಕೇಳಿ ತಿಳುಕೊಂಡು ಯಾವುದೂ ಮಾಡಿಲ್ಲ. ಆದರೆ ಎಕ್ಸ್ ಪೆರಿಮೆಂಟ್ ಮೇಲೆ ಆ ಥರ ಬಂದಿರೋದು. ಹಳೇ ದಸರಾ ಈಗ ತಗೊಂಡ್ರೆ ಬಹಳ ಬದಲಾವಣೆ ಆಗಿದೆ. ಅದು ಮಾಡ್ತಾ ಮಾಡ್ತಾ ಬದಲಾವಣೆ ಕಂಡಿರೋದು.

*** ಅಕಾಡೆಮಿಕ್ ಆಗಿ ಓದದೇ ಇದ್ದರೂ ಇಷ್ಟು ಪ್ರಭಾವಿಯಾಗಿ ಪ್ರಖರವಾಗಿ ನಿಮ್ಮ ಪೈಂಟಿಂಗ್ ಅನ್ನು ಹಿಡಿದಿಡಲಿಕ್ಕೆ ನಿಮ್ಮೊಳಗೆ ಬೇರೆ ಬೇರೆ ಥರದ ಅಲೋಚನೆಗಳು ಯಾವ ರೀತಿ ಬರುತ್ತವೆ?**

ಈ ಹೈಟೆಕ್ ಸಿಟಿಯಲ್ಲಿ ಏನೇನೋ ಆಗ್ತಾ ಇರುತ್ತೆ. ಆ ಸಂದರ್ಭದಲ್ಲಿ ನನಗೂ ಏನಾದರೂ ಮಾಡ್ಬೇಕು ಅನ್ಸುತ್ತೆ. ನನ್ನ ಹಿಂದಿನ ಪರಿಸರ ನನ್ನನ್ನು ಈ ತರ ಮಾಡಿಸ್ತಾ ಇದೆಯೇನೋ ಅನ್ಸುತ್ತೆ. ಏನಾದ್ರೂ ಮಾಡಬೇಕು. ಸುಮ್ಮನೆ ಇದ್ದರೆ ಆಗಲ್ಲ. ಅನ್ನೋದು ನನ್ನ ಹೊಸ ಹೊಸ ವಿಚಾರಗಳು ಆಗ್ತಾ ಇದೆ.

*** ಅಕಾಡೆಮಿಕ್ ಆದ ಪೈಂಟರ್ಸ್‌ಗೂ ನಿಮಗೂ ಯಾವ ರೀತಿಯ ವ್ಯತ್ಯಾಸ ಕಾಣಬಹುದು?**


ಯಾವ ರೀತಿ ವ್ಯತ್ಯಾಸ ಇಲ್ಲ ಅನ್ಸುತ್ತೆ. ಹಾಗೆ ನನ್ನನ್ನು ಯಾರೂ ಆ ದೃಷ್ಟಿಯಿಂದ ನೋಡ್ತಾ ಇಲ್ಲ. ಅವರೊಳಗೆ ನನ್ನನ್ನು ಒಬ್ಬ ಅನ್ಕೊಂಡಿದ್ದಾರೆ ಅವರ ಜೊತೆಜೊತೆಯಲ್ಲೇ ನಾನು ಕೆಲಸ ಮಾಡುವುದರಿಂದ ನನಗೇನೂ ವ್ಯತ್ಯಾಸ ಕಂಡಿಲ್ಲ. ಮತ್ತೆ ಪ್ರತಿಯೊಬ್ಬ ಕಲಾವಿದನಿಗೂ ಅವರದೇ ಆದ ಶೈಲಿ ಇದೆ. ಈ ರೀತಿ ನನ್ನದೊಂದು ಶೈಲಿ ಗುರುತಿಸಿಕೊಂಡು ನಾನು ಹೋಗ್ತಾ ಇದ್ದೀನಿ.

*** ನೀವು ಎಲ್ಲೆಲ್ಲಿ ಪೈಂಟಿಂಗ್ ಪ್ರದರ್ಶನ ಮಾಡಿದ್ದೀರಿ?**

ಕಲ್ಕತ್ತಾ, ಮುಂಬೈ, ಡೆಲ್ಲಿ, ಕೊಲ್ಹಾಪುರ್, ಹೈದರಾಬಾದ್, ಕೊಚ್ಚಿನ್, ಬೆಂಗಳೂರು ಮತ್ತು ಮುಂದೆ ನಾನು ಕ್ಯಾಲಿಫೋರ್ನಿಯಾ, ನ್ಯೂಜಿಲೆಂಡ್‌ಗೆ ಹೋಗ್ತಾ ಇದ್ದೀನಿ.

*** ಇಲ್ಲಿಯವರೆಗೆ ಕಲಾ ಪ್ರದರ್ಶನದಲ್ಲಿ ಯಾವ ರೀತಿ ಒಪಿನಿಯನ್ ಇದೆ?**

ಸಾಮಾನ್ಯರಿಂದ ಹಿಡಿದು ಎಲ್ಲಾ ಜನರು ಬಹಳ ಇಷ್ಟ ಪಡುತ್ತಾರೆ. ಎಷ್ಟೋ ಜನ ಅದನ್ನು ಖರೀದಿಸಿಯೂ ಇದ್ದಾರೆ. ತುಂಬ ಕಡೆ ನನ್ನ



ಕೃತಿಗಳು ಹೋಗಿವೆ.

*** ನೀವು ಬೇರೆ ರಾಜ್ಯಗಳಲ್ಲಿ ಪ್ರದರ್ಶನ ಮಾಡಿದ್ದೀರಿ, ನೋಡಿದ್ದೀರಿ ಇಲ್ಲಿನ ಪೈಂಟಿಂಗ್‌ಗೂ ಬೇರೆ ರಾಜ್ಯದ ಪೈಂಟಿಂಗ್‌ಗೂ ಯಾವ ರೀತಿಯ ವ್ಯತಾಸ ಇದೆ?**


ಪ್ರಸ್ತುತ ಸ್ಥಿತಿಯಲ್ಲಿ ಕರ್ನಾಟಕದ ಕಲಾ ಬೆಳವಣಿಗೆ ಮೇಲ್ಮಟ್ಟದಲ್ಲಿದೆ. ಡೆಲ್ಲಿ, ಬಾಂಬೆ ಬಿಟ್ಟರೆ ಕರ್ನಾಟಕದ ಚಿತ್ರಕಲೆಯು ಉನ್ನತ ಮಟ್ಟದಲ್ಲಿದೆ. ಮತ್ತು ಇಲ್ಲಿ ಕಲಾವಿದರಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ತಾ ಇದೆ. ಕರ್ನಾಟಕದ ಕಲಾವಿದರು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚು ಕೆಲಸ ಮಾಡ್ತಾ ಇದ್ದಾರೆ.

*** ಡೆಲ್ಲಿ ಮತ್ತು ಬಾಂಬೆ ಇಲ್ಲಿ ಯಾವ ರೀತಿಯ ವಸ್ತುಗಳನ್ನು ಅಯ್ಕೆ ಮಾಡ್ತಾರೆ?**

ಹೆಚ್ಚು ಮಾಡ್ರನ್ ಆಗಿ ಕೆಲಸ ಮಾಡ್ತಾರೆ. ಅದನ್ನು ಹೀಗೆ ಅಂತ ಹೇಳಲಿಕ್ಕೆ ಬರೋಲ್ಲ. ಡೆಲ್ಲಿ ಆರ್ಟಿಸ್ಟ್ ಈ ರೀತಿ ಮಾಡ್ತಾರೆ ಬಾಂಬೆ ಆರ್ಟಿಸ್ಟ್ ಈ ರೀತಿ ಮಾಡ್ತಾರೆ ಅಂತ ಡಿವೈಡ್ ಮಾಡಿ ಹೇಳಲಿಕ್ಕೆ ಬರುವುದಿಲ್ಲ. ಒಬ್ಬೊಬ್ಬರೂ ತಮ್ಮದೇ ಆದ ಶೈಲಿಯಲ್ಲಿ ಮಾಡ್ತಾರೆ.

*** ಕಲೆಯ ಮೂಲಕ ಏನಾದರೂ ಬದಲಾವಣೆ ಸಾಧ್ಯವಾಗಿದೆಯಾ?**

ಬದಲಾವಣೆ ಆಗುತ್ತೆ ಏನೋ ಗೊತ್ತಿಲ್ಲ. ಆದರೆ ಕಲಾವಿದರು ಕೆಲಸ ಮಾಡುವುದರಿಂದ ಒಳ್ಳೆ ವಾತಾವರಣ ಸೃಷ್ಟಿ ಮಾಡಬಹುದು ಅನ್ಸುತ್ತೆ.



*** ಇಲ್ಲಿ ನೂರೆಂಟು ಸಮಸ್ಯೆಗಳಿವೆ. ಇಲ್ಲಿನ ಪ್ರಜಾಪ್ರಭುತ್ವದ ವ್ಯವಸ್ಥೆಯೇ ಮಾನವೀಯತೆಯಿಂದ ಕೂಡಿಲ್ಲ. ಹಾಗಾಗಿ ನಿಮ್ಮ ವರ್ಕ್ ಮೂಲಕ ನೀವು ಹೇಗೆ ರೆಸ್ಪಾನ್ಸ್ ಮಾಡ್ತೀರ?**

ನಾನು ನನ್ನ ಭಾವನೆಯನ್ನು ನನ್ನ ಪೈಂಟಿಂಗ್ ಮೂಲಕ ಹೇಳ್ತೀನಿ. ನನ್ನ ಡೇ ಅಂಡ್ ನೈಟ್ ಸಿರೀಸ್ ನಲ್ಲಿ ಭೇಧ-ಭಾವವನ್ನು ಸಂಕೇತವಾಗಿ ಸೂಚಿಸಿದ್ದೇನೆ. ಅದನ್ನು ನೋಡಿ ಅರಿತುಕೊಳ್ಳುವವರೂ ಇದ್ದಾರೆ. ನೋಡದೇ ಹಾಗೇ ಹೋಗುವವರೂ ಇದ್ದಾರೆ. ಅವರನ್ನು ನಾವು ತಿದ್ದುತ್ತೀವಿ ಅಂತ ಹೇಳಕ್ಕಾಗಲ್ಲ. ನಮ್ಮ ಪ್ರಯತ್ನ ನಡೀತಾ ಇರುತ್ತೆ.

*** ಪೈಂಟಿಂಗ್ ಅನ್ನು ಯಾಕೆ ಅಯ್ಕೆ ಮಾಡಿಕೊಂಡಿರಿ?**

ಪೈಂಟಿಂಗನ್ನು ಒಬ್ಬನೇ ಒಂದು ಕಡೆ ಕೂತು ಮಾಡಬಹುದು. ಇತರೆ ಕಲೆಗಳು ಸಾಮಾನ್ಯವಾಗಿ ಕಲೆಕ್ಟಿವ್ ಆಗಿರುತ್ತವೆ. ಆ ರೀತಿ ಸಮೂಹ ಸೃಷ್ಟಿಸುವುದು ಕಷ್ಟ. ಅದು ಚೆನ್ನಾಗಿದೆ ಅನ್ನಿಸಿದರೆ ಪ್ರದರ್ಶನ ಮಾಡಬಹುದು. ಇಲ್ಲದಿದ್ದರೆ ನಮ್ಮಲ್ಲೇ ಇಡಬಹುದು. ಬೇರೆ ಪ್ರಕಾರದ ಕಲೆಗಳೆಲ್ಲಾ ಪಬ್ಲಿಕ್‌ನಲ್ಲೇ ಮಾಡಬೇಕಾಗುತ್ತದೆ ಅವು ಟೀಮ್‌ವರ್ಕ್. ಅದಕ್ಕೆ ನಾನು ಇದನ್ನು ಆರಿಸಿಕೊಂಡೆ. ಎಲ್ಲರೂ ಚೆನ್ನಾಗಿದೆ ಅಂದಾಗ ಇದರಲ್ಲೇ ಮುಂದುವರೀತಾ ಇದ್ದೇನೆ.

ಸಾಹಿತ್ಯರೂಪ:
ಶೀಲಾ ಹಾಲ್ಕುರಿಕೆ

KARKAN18751/10/1/2008-TC MAY-2009. Rs. 20/-

ಹಾಲ್ಕುರಿಕೆ ಥಿಯೇಟರ್

ರಂಗಭೂಮಿಯಲ್ಲಿ ನಟನೆಯನ್ನು ಮುಖ್ಯ ಜೀವಾಳವಾಗಿ ಆವಿಷ್ಕರಿಸುವ ಪ್ರಯೋಗಾತ್ಮಕ ಚಲನೆಯನ್ನು ಹಾಲ್ಕುರಿಕೆ ಥಿಯೇಟರ್ ಹುಡುಕಾಡುತ್ತಿದ್ದು, ನಟನಾ ಪ್ರಯೋಗಾಲಯವನ್ನು ಆರಂಭಿಸುತ್ತಿದೆ.

15 ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ಎರಡು ವರ್ಷಗಳ ಕಾಲ ನಟನೆಯ ಸೈದ್ಧಾಂತಿಕ, ತಾತ್ವಿಕ, ಪ್ರಯೋಗಾತ್ಮಕ ತರಬೇತಿಯನ್ನು ನೀಡಲಾಗುವುದು. ರಂಗಭೂಮಿಯಲ್ಲಿ ನಟನೆಯನ್ನೇ ವೃತ್ತಿಯಾಗಿ ತೆಗೆದುಕೊಳ್ಳುವವರು, ಕಠಿಣ ಪರಿಶ್ರಮಿಗಳು, ರಂಗಭೂಮಿಯ ಬದ್ಧತೆ ಉಳ್ಳವರು ಆಯ್ಕೆಗೆ ಅರ್ಹರಾಗಿರುತ್ತಾರೆ.

ನಟನಾ ಪ್ರಯೋಗಾಲಯದಲ್ಲಿ ತರಬೇತಿ ಪಡೆಯಲು ಇಚ್ಛಿಸುವವರು ತಮ್ಮ ವಿವರಗಳನ್ನು ಕಳುಹಿಸಬಹುದು.

ಓದುಗರೇ,

ರಂಗಭೂಮಿ, ಕಲೆ, ಸಾಹಿತ್ಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿದ್ಯಮಾನಗಳ ಮಾತು, ಚರ್ಚೆ, ಸಂವಾದ... ಮುಂತಾದ ಅಭಿವ್ಯಕ್ತಿಗಳು ಸಮಗ್ರವಾಗಿ ನಿಮಗೆ ತಲುಪಿಸುವ ಉದ್ದೇಶ 'ಹಾಲ್ಕುರಿಕೆ ಥಿಯೇಟರ್ ಮಿರರ್' ಪತ್ರಿಕೆಯದ್ದಾಗಿದೆ.

ಇನ್ನೂರು ರೂ. ನೀಡಿ ವರ್ಷದ ಚಂದಾದಾರರಾಗಿ. ಪತ್ರಿಕೆಯು ನಿಮ್ಮ ಮನೆಗೇ ಬರುತ್ತದೆ.

ಸಂಘ ಸಂಸ್ಥೆ ಮತ್ತು ಗ್ರಂಥಾಲಯಗಳಿಗೆ ವಾರ್ಷಿಕ ಚಂದಾ ರೂ. 500/-

ವಿಳಾಸ :
ಹಾಲ್ಕುರಿಕೆ ಥಿಯೇಟರ್
ಎಂ.ಎಸ್. ಫಾರಂ, ಚಿಕ್ಕ ಗುಬ್ಬಿ
ದೊಡ್ಡ ಗುಬ್ಬಿ ಪೋಸ್ಟ್
ಬೆಂಗಳೂರು - 562 149 ಫೋನ್ : 9379712029
080-32482767, 9980283968
e-mail : halkurikeconcept@yahoo.co.in

ಹಾಲ್ಕುರಿಕೆ ಥಿಯೇಟರ್ ಮಿರರ್

Halkurike Theatre Mirror

Kannada Monthly, Editor & Publisher :
Halkurike Shivashankar,
M.S. Farm House, Chikka Gubbi, Dodda Gubbi Post,
Bangalore-562149. Printed at : Satyananda Printers, Bangalore.
e-mail : halkurikeconcept@yahoo.co.in